ಸೋಮವಾರ, ಮೇ 16, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 135 | ಪುಟ 12
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಕಲಿಕಾ ಪ್ರಕ್ರಿಯೆಯನ್ನು ಸಾಧ್ಯವಾದಷ್ಟು ಸರಳಗೊಳಿಸಲು ರಂಗಭೂಮಿ ಘನವಾದ ಮಾಧ್ಯಮ. ಹಾಗಾದರೆ ರಂಗಕಲೆಯನ್ನು ಶಿಕ್ಷಣದಲ್ಲಿ ಅಳವಡಿಸುವುದು ಹೇಗೆ?

ಆಳ-ಅಗಲ
ಗೋಧಿ ಕೊರತೆಯ ಭೀತಿ ರಫ್ತಿಗೆ ಕಡಿವಾಣ

ರಥದ ಚಕ್ರ ಹರಿದು ಇಬ್ಬರು ಸಾವು 5

ಆದೇಶ ಪಾಲಿಸಲು ಮುಸ್ಲಿಂ ಧರ್ಮಗುರುಗಳ ತೀರ್ಮಾನ
ಬೆಳಿಗ್ಗೆ 6ರ ಬಳಿಕವಷ್ಟೇ ಮಸೀದಿಗಳಲ್ಲಿ ಆಜಾನ್ 5

ಬುದ್ಧ ಪೂರ್ಣಿಮೆ ಶುಭಾಶಯಗಳು

ಕಾಂಗ್ರೆಸ್ ಪಕ್ಷದ ಚಿಂತನ ಶಿಬಿರ ಸಮಾರೋಪ: ಸುಧಾರಣೆಗಾಗಿ ಉದಯಪುರ ಘೋಷಣೆ

ಭಾರತ್ ಜೋಡೋ ಯಾತ್ರೆಗೆ 'ಕೈ' ಸಜ್ಜು

ಪ್ರಜಾವಾಣಿ ವಾರ್ತೆ

ಕಾಂಗ್ರೆಸ್ ಮುಖಂಡ ಮಲ್ಲಿಕಾರ್ಜುನ ಖರ್ಗೆ ಅವರು ಸೋನಿಯಾ ಗಾಂಧಿ ಅವರಿಗೆ ಸಮಾಲೋಚನಾ ವರದಿ ಸಲ್ಲಿಸಿದರು – ಪಿಟಿಐ ಚಿತ್ರ

ಉದಯಪುರ: ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ 'ಭಾರತ್ ಜೋಡೋ ಯಾತ್ರೆ'ಯನ್ನು (ಭಾರತವನ್ನು ಒಗ್ಗೂಡಿಸಿ ಯಾತ್ರೆ) ಅಕ್ಟೋಬರ್ 2ರಂದು ಆರಂಭಿಸುವುದಾಗಿ ರಾಜಸ್ಥಾನದಲ್ಲಿ ನಡೆದ ಚಿಂತನ ಶಿಬಿರದಲ್ಲಿ ಕಾಂಗ್ರೆಸ್ ಭಾನುವಾರ ಘೋಷಿಸಿದೆ.

ಚುನಾವಣೆಯಲ್ಲಿ ಸತತ ಸೋಲುಗಳನ್ನು ಎದುರಿಸಿರುವ ಪಕ್ಷದ ಪುನಶ್ಚೇತನಕ್ಕಾಗಿ ಶುಕ್ರವಾರದಿಂದ ಭಾನುವಾರದವರೆಗೆ ಮೂರು ದಿನಗಳ ಚಿಂತನ ಶಿಬಿರ ನಡೆಯಿತು. 'ಸೋಲಿನ ಸುಳಿಯಿಂದ ನಾವು ಹೊರಬರಲಿದ್ದೇವೆ' ಎಂದು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಹೇಳಿದ್ದಾರೆ.

ಉದಯಪುರ ಘೋಷಣೆಯಲ್ಲಿ, ಪಕ್ಷದಲ್ಲಿ ಹಲವು ಮಹತ್ವದ ಬದಲಾವಣೆಗಳನ್ನು ಮಾಡಲಾಗುವುದು ಎಂದು ಹೇಳಲಾಗಿದೆ. 'ಒಂದು ವ್ಯಕ್ತಿಗೆ ಒಂದು ಹುದ್ದೆ', 'ಒಂದು ಕುಟುಂಬಕ್ಕೆ ಒಂದು ಟಿಕೆಟ್' ಮುಂತಾದ ಘೋಷಣೆಗಳು ಇದರಲ್ಲಿ ಸೇರಿವೆ. ಒಂದು ಕುಟುಂಬದ ಎರಡನೇ ವ್ಯಕ್ತಿಯು ಕನಿಷ್ಠ ಐದು ವರ್ಷ ಪಕ್ಷಕ್ಕಾಗಿ ಕೆಲಸ ಮಾಡಿದ್ದರೆ ಅಂಥವರಿಗೆ ಚುನಾವಣೆಗೆ ಸ್ಪರ್ಧಿಸುವ ಅವಕಾಶ ಇದೆ. ಒಂದು ವ್ಯಕ್ತಿಯು ಒಂದು ಹುದ್ದೆಯಲ್ಲಿ ಗರಿಷ್ಠ ಐದು ವರ್ಷ ಮಾತ್ರ ಉಳಿಯಬಹುದು.

ಸಂಸತ್ತು ಮತ್ತು ವಿಧಾನಸಭೆಗಳ ಶೇ 33ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲು ಇರಿಸುವ ಮಹಿಳಾ ಮೀಸಲು ಮಸೂದೆಯ ಕುರಿತ ನಿಲುವನ್ನು ಕಾಂಗ್ರೆಸ್ ಬದಲಾಯಿಸಿಕೊಂಡಿದೆ. ಇತರ ಹಿಂದುಳಿದ ವರ್ಗಗಳ ಮಹಿಳೆಯರಿಗೆ ಒಳಮೀಸಲು ನೀಡಬೇಕು ಎಂಬ ನಿಲುವು ತಳೆದಿದೆ.

ಪಕ್ಷದಲ್ಲಿ ಮತ್ತು ಚುನಾವಣೆಯಲ್ಲಿ ಯುವ ಜನರಿಗೆ ಶೇ 50ರಷ್ಟು ಪ್ರಾತಿನಿಧ್ಯಕ್ಕೆ ಒಪ್ಪಿಗೆ ಸಿಕ್ಕಿದೆ. ಆದರೆ, ಮುಖಂಡರಿಗೆ ನಿವೃತ್ತಿ ವಯಸ್ಸು ನಿಗದಿ ಮಾಡಬೇಕು ಎಂಬ ಸಲಹೆಗಳಿಗೆ ಮಾನ್ಯತೆ ಸಿಕ್ಕಿಲ್ಲ. ಹಾಗೆಯೇ, ಐದು ವರ್ಷ ಪಕ್ಷದ ಹುದ್ದೆಯಲ್ಲಿ ಇದ್ದ ವ್ಯಕ್ತಿಯು ಮುಂದಿನ ಮೂರು ವರ್ಷ ಯಾವುದೇ ಹುದ್ದೆಗೆ ಏರುವಂತಿಲ್ಲ ಎಂಬ ಸಲಹೆಯನ್ನೂ ಕೈಬಿಡಲಾಗಿದೆ. ಆದರೆ, ಪಕ್ಷದ ಸಂವಹನ ವ್ಯವಸ್ಥೆಯಲ್ಲಿ ಸುಧಾರಣೆ ತರಬೇಕು ಎಂಬುದನ್ನು ಒಪ್ಪಿಕೊಳ್ಳಲಾಗಿದೆ. ಸಂಸದ ರಾಹುಲ್ ಗಾಂಧಿ ಅವರು ತಮ್ಮ ಭಾಷಣದಲ್ಲಿ ಈ ವಿಚಾರ ಪ್ರಸ್ತಾಪಿಸಿದ್ದರು.

ಖಾಸಗಿ ಕ್ಷೇತ್ರದಲ್ಲಿಯೂ ಮೀಸಲು ನಿಗದಿ, ಸಂಸತ್ತು ಮತ್ತು ವಿಧಾನಸಭೆಗಳಲ್ಲಿ ಒಬಿಸಿ ಮೀಸಲಾತಿ, ಪಕ್ಷದ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳು ಹಾಗೂ ಅಲ್ಪಸಂಖ್ಯಾತರಿಗೆ ಮೀಸಲಾತಿ ನೀಡಬೇಕು ಎಂಬ ಸಲಹೆಗಳು ಕೂಡ ಘೋಷಣೆಯಲ್ಲಿ ಸ್ಥಾನ ಪಡೆದಿಲ್ಲ.

'ಈಗಾಗಲೇ ಹಾಳುಗೆಡವಲಾಗಿರುವ ಸಾಮಾಜಿಕ ಸಾಮರಸ್ಯವನ್ನು ಬಲಪಡಿಸಲು, ನಿರಂತರ ದಾಳಿಗೆ ಒಳಗಾಗುತ್ತಿರುವ ಸಂವಿಧಾನದ ಮೂಲ ಮೌಲ್ಯಗಳ ರಕ್ಷಣೆಗಾಗಿ ಮತ್ತು ಕೋಟ್ಯಂತರ ಜನರ ನಿತ್ಯದ ಕಳಕಳಿಗಳನ್ನು ಎತ್ತಿ ತೋರಿಸಲು ಭಾರತ್ ಜೋಡೋ ಯಾತ್ರೆ ಅಗತ್ಯ' ಎಂದು ಸೋನಿಯಾ ಪ್ರತಿಪಾದಿಸಿದರು.

ಇನ್ನೊಂದು ಸುದ್ದಿ 6

ಸುಧಾರಣಾ ಕ್ರಮಗಳು

- ಉದಯಪುರದಲ್ಲಿ ಚರ್ಚಿಸಲಾದ ಆಂತರಿಕ ಸುಧಾರಣೆಗಳನ್ನು ಜಾರಿಗೆ ತರಲು ಕಾರ್ಯಪಡೆಯನ್ನು ರಚಿಸಲಾಗುವುದು. 2–3 ದಿನಗಳಲ್ಲಿ ಈ ಕಾರ್ಯಪಡೆಯ ಸದಸ್ಯರ ಹೆಸರು ಪ್ರಕಟವಾಗಲಿದೆ
- ಲೋಕಸಭೆಗೆ 2024ರಲ್ಲಿ ನಡೆಯಲಿರುವ ಚುನಾವಣೆಯನ್ನು ಗಮನದಲ್ಲಿ ಇರಿಸಿಕೊಂಡು ಸುಧಾರಣೆಗಳನ್ನು ಮಾಡಲಾಗಿದೆ. ಪಕ್ಷ ಸಂಘಟನೆ, ಪಕ್ಷದ ಹುದ್ದೆಗಳಿಗೆ ನೇಮಕ, ಸಂವಹನ ಮತ್ತು ಪ್ರಚಾರ, ಜನ ಸಂಪರ್ಕ, ಹಣಕಾಸು ಮತ್ತು ಚುನಾವಣಾ ನಿರ್ವಹಣೆಗೆ ಒತ್ತು ನೀಡಲಾಗಿದೆ
- ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಿಂದ ಆಯ್ದ ವ್ಯಕ್ತಿಗಳಿರುವ ಸಲಹಾ ಗುಂಪನ್ನು ರಚಿಸಲಾಗುವುದು. ಈ ಗುಂಪು ನಿಯಮಿತವಾಗಿ ಸಭೆ ಸೇರಿ ಪಕ್ಷದ ಮುಂದಿರುವ ರಾಜಕೀಯ ಸವಾಲುಗಳ ಬಗ್ಗೆ ಚರ್ಚಿಸಲಿದೆ. ಇದು ನಿರ್ಧಾರ ಕೈಗೊಳ್ಳುವಿಕೆ ಸಮಿತಿ ಅಲ್ಲ. ಬದಲಿಗೆ ಪಕ್ಷದ ಹಿರಿಯರ ಅನುಭವವನ್ನು ಪಕ್ಷಕ್ಕಾಗಿ ಬಳಸಿಕೊಳ್ಳಲು ಈ ಸಮಿತಿ ರಚನೆ ಆಗಲಿದೆ
- ಪಕ್ಷ ಸಂಘಟನೆಗೆ ಹೆಚ್ಚಿನ ಒತ್ತು ನೀಡಲು ನಿರ್ಧರಿಸಲಾಗಿದೆ. ಅದರ ಭಾಗವಾಗಿ, ಮೂರು ಘಟಕಗಳನ್ನು ರಚಿಸಲು ನಿರ್ಧರಿಸಲಾಗಿದೆ. ಅವುಗಳೆಂದರೆ, ಸಾರ್ವಜನಿಕ ಒಳನೋಟ ಘಟಕ, ರಾಷ್ಟ್ರೀಯ ತರಬೇತಿ ಸಂಸ್ಥೆ ಮತ್ತು ಚುನಾವಣಾ ನಿರ್ವಹಣೆ ಘಟಕ
- ಜಿಲ್ಲಾ ಮಟ್ಟದಲ್ಲಿ ಜೂನ್ 15ರಿಂದ ಜನ ಜಾಗರಣ ಅಭಿಯಾನ ಆರಂಭ

ಥಾಮಸ್ ಕಪ್ ಬ್ಯಾಡ್ಮಿಂಟನ್

ಪ್ರಶಸ್ತಿ ಗೆದ್ದ ಭಾರತ ತಂಡದ ಆಟಗಾರರು ಮತ್ತು ಸಿಬ್ಬಂದಿಯ ಸಂಭ್ರಮ –ಎಎಫ್‌ಪಿ ಚಿತ್ರ

ಭಾರತಕ್ಕೆ ಚಾರಿತ್ರಿಕ ಚಿನ್ನ

ಬ್ಯಾಂಕಾಕ್‌ನಲ್ಲಿ ಭಾನುವಾರ ಮುಕ್ತಾಯಗೊಂಡ ಥಾಮಸ್ ಕಪ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಇಂಡೊನೇಷ್ಯಾವನ್ನು ಮಣಿಸಿದ ಭಾರತ ಮೊದಲ ಬಾರಿ ಚಾಂಪಿಯನ್ ಪಟ್ಟ ಅಲಂಕರಿಸಿತು. ಇಂಡೊನೇಷ್ಯಾ ಒಟ್ಟು 14 ಬಾರಿ ಪ್ರಶಸ್ತಿ ಗೆದ್ದುಕೊಂಡಿತ್ತು. ಕಳೆದ ಬಾರಿಯೂ ಚಾಂಪಿಯನ್ ಆಗಿತ್ತು.

ಹಣಾಹಣಿ ಫಲಿತಾಂಶ
ಭಾರತ 3
ಇಂಡೊನೇಷ್ಯಾ 0

ಪ್ರಮುಖ ಅಂಶಗಳು
- ಫೈನಲ್ ಹಣಾಹಣಿಗೂ ಮೊದಲು ತಂಡ ಸ್ಪರ್ಧೆಗಳಲ್ಲಿ ಭಾರತ ಮತ್ತು ಇಂಡೊನೇಷ್ಯಾ 7 ಬಾರಿ ಮುಖಾಮುಖಿಯಾಗಿವೆ. ಇಂಡೊನೇಷ್ಯಾ ಅಜೇಯವಾಗಿತ್ತು.
- ಭಾರತ ಈ ವರೆಗೆ 13 ಆವೃತ್ತಿಗಳಲ್ಲಿ ಆಡಿದ್ದು 1979ರಲ್ಲಿ ಇಂಡೊನೇಷ್ಯಾದಲ್ಲಿ ಸೆಮಿಫೈನಲ್ ಪ್ರವೇಶಿಸಿದ್ದು ಗರಿಷ್ಠ ಸಾಧನೆಯಾಗಿತ್ತು.

ವಿವರ 11

ಮೊದಲ ಸಿಂಗಲ್ಸ್
ಲಕ್ಷ್ಯಸೇನ್‌ಗೆ 8-21, 21-17, 21-16ರಲ್ಲಿ ಆ್ಯಂಟನಿ ಜಿಂಟಿಂಗ್ ವಿರುದ್ಧ ಜಯ

ಡಬಲ್ಸ್
ಸಾತ್ವಿಕ್ ಸಾಯಿರಾಜ್–ಚಿರಾಗ್ ಶೆಟ್ಟಿಗೆ 18-21, 23-21, 21-19ರಲ್ಲಿ ಮೊಹಮ್ಮದ್ ಅಹ್ಸಾನ್–ಕೆವಿನ್ ಸುಕಮುಲ್ಜೊ ಎದುರು ಗೆಲುವು

ಎರಡನೇ ಸಿಂಗಲ್ಸ್
ಕಿದಂಬಿ ಶ್ರೀಕಾಂತ್‌ಗೆ 21-15, 23-21ರಲ್ಲಿ ಜೊನಾಥನ್ ಕ್ರಿಸ್ಟಿ ಎದುರು ಜಯ

ಇಂದು ಶಾಲೆ ಆರಂಭ

ಬೆಂಗಳೂರು: ರಾಜ್ಯದಲ್ಲಿ ಸೋಮವಾರದಿಂದ ತರಗತಿಗಳು ಆರಂಭವಾಗಲಿವೆ. 2022-23ನೇ ಸಾಲಿನ ಶೈಕ್ಷಣಿಕ ವರ್ಷದ ತರಗತಿಗಳ ಆರಂಭಕ್ಕೆ ಶಿಕ್ಷಣ ಇಲಾಖೆಯು ಎಲ್ಲ ರೀತಿಯ ಸಿದ್ಧತೆಗಳನ್ನು ಮಾಡಿಕೊಂಡಿದೆ.

ಶಾಲೆಗಳ ಪ್ರಾರಂಭೋತ್ಸವವನ್ನು ಹಬ್ಬದ ರೀತಿ ಮಾಡಬೇಕು. ಶಿಕ್ಷಕರು, ಎಸ್‌ಡಿಎಂಸಿ ಸದಸ್ಯರು, ಪೋಷಕರು, ನಾಗರಿಕರು ಸೇರಿ ಮಕ್ಕಳನ್ನು ಗಣ್ಯ ಅತಿಥಿಗಳನ್ನು ಸ್ವಾಗತಿಸುವ ರೀತಿಯಲ್ಲಿ ವಿಶೇಷವಾಗಿ ಬರಮಾಡಿಕೊಳ್ಳಬೇಕು. ಮೊದಲ ದಿನದಂದು ಮಕ್ಕಳಿಗೆ ಸರ್ಕಾರಿ ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿಯೂಟದಲ್ಲಿ ಸಿಹಿ ನೀಡಬೇಕು ಎಂದು ಶಿಕ್ಷಣ ಇಲಾಖೆ ಸೂಚಿಸಿದೆ.

ಸೋಮವಾರ ಮಧ್ಯಾಹ್ನ 12.30ಕ್ಕೆ ತುಮಕೂರಿನ ಎಂಪ್ರೆಸ್ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ 'ಕಲಿಕಾ ಚೇತರಿಕೆ' ಮತ್ತು ಶೈಕ್ಷಣಿಕ ವರ್ಷ ಆರಂಭಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಚಾಲನೆ ನೀಡಿ ಮಕ್ಕಳಿಗೆ ಪಠ್ಯ-ಪುಸ್ತಕಗಳನ್ನು ವಿತರಿಸಲಿದ್ದಾರೆ.

ಬೇಸಿಗೆ ರಜೆ ನಂತರ ಸಾಮಾನ್ಯವಾಗಿ ಜೂನ್ 1ರಿಂದ ಶಾಲೆಗಳು ಪ್ರಾರಂಭವಾಗುತ್ತಿದ್ದವು. ಕೋವಿಡ್‌ನಿಂದಾಗಿ ಎರಡು ವರ್ಷ ಸರಿಯಾಗಿ ಶಾಲೆಗಳು ನಡೆದಿರಲಿಲ್ಲ. ಹೀಗಾಗಿ ಇಲಾಖೆಯು ಈ ವರ್ಷ ಮೇ 16ರಿಂದಲೇ ಶಾಲೆಗಳನ್ನು ಆರಂಭಿಸಲು ಸೂಚಿಸಿದೆ.

'ಪಠ್ಯಪುಸ್ತಕಗಳನ್ನು ಸಕಾಲದಲ್ಲಿ ಪೂರೈಕೆ ಮಾಡಲಾಗುತ್ತಿದೆ' ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ತಿಪಟೂರಿನಲ್ಲಿ ಭಾನುವಾರ ತಿಳಿಸಿದ್ದಾರೆ.

ಶಾಲಾ ಆವರಣದಲ್ಲಿ ಶಸ್ತ್ರಾಸ್ತ್ರ ತರಬೇತಿ

'ಶೌರ್ಯ ಪ್ರಶಿಕ್ಷಣ ವರ್ಗ'ದಲ್ಲಿ ಬಜರಂಗದಳ ಕಾರ್ಯಕರ್ತರಿಗೆ ತ್ರಿಶೂಲ ದೀಕ್ಷೆ

ಪ್ರಜಾವಾಣಿ ವಾರ್ತೆ

ಕೊಡಗಿನ ಪೊನ್ನಂಪೇಟೆ ಸಾಯಿ ಶಂಕರ ವಿದ್ಯಾಸಂಸ್ಥೆಯ ಆವರಣದಲ್ಲಿ ಬಜರಂಗದಳದ ಕಾರ್ಯಕರ್ತರಿಗೆ ಬಂದೂಕು ತರಬೇತಿ ನೀಡಲಾಯಿತು

ಮಡಿಕೇರಿ: ಕೊಡಗಿನ ಪೊನ್ನಂಪೇಟೆಯ ಸಾಯಿ ಶಂಕರ ವಿದ್ಯಾಸಂಸ್ಥೆಯಲ್ಲಿ ನಡೆದ 'ಶೌರ್ಯ ಪ್ರಶಿಕ್ಷಣ ವರ್ಗ'ದಲ್ಲಿ ಬಜರಂಗದಳದ ಕಾರ್ಯಕರ್ತರಿಗೆ ಶಸ್ತ್ರಾಸ್ತ್ರ ತರಬೇತಿ, ತ್ರಿಶೂಲ ದೀಕ್ಷೆ ನೀಡಲಾಗಿದೆ.

ಸುಮಾರು ಹತ್ತು ದಿನ ಶಿಬಿರ ನಡೆದಿದೆ. ಈ ಅವಧಿಯಲ್ಲಿ ಒಮ್ಮೆ ಮಡಿಕೇರಿ ಕ್ಷೇತ್ರದ ಶಾಸಕ ಎಂ.ಪಿ. ಅಪ್ಪಚ್ಚು ರಂಜನ್, ವಿರಾಜಪೇಟೆ ಶಾಸಕ ಕೆ.ಜಿ.ಬೋಪಯ್ಯ, ವಿಧಾನ ಪರಿಷತ್ ಸದಸ್ಯ ಸುಜಾ ಕುಶಾಲಪ್ಪ ಸಹ ಪಾಲ್ಗೊಂಡಿದ್ದರು ಎಂದು ಮೂಲಗಳು ಖಚಿತ ಪಡಿಸಿವೆ.

ಬಜರಂಗದಳ, ವಿಶ್ವ ಹಿಂದೂ ಪರಿಷತ್‌ನ 119 ಶಿಕ್ಷಣಾರ್ಥಿಗಳು ಸೇರಿ 140 ಮಂದಿ ಇದ್ದರು. ವಿವಿಧ ಜಿಲ್ಲೆಗಳಿಂದ ಕಾರ್ಯಕರ್ತರು ಬಂದಿದ್ದರು.

ಶಾಲಾ ಆವರಣದಲ್ಲಿ ಬಂದೂಕು ಹಿಡಿದು ತರಬೇತಿ ಪಡೆಯುತ್ತಿರುವುದು, ಸಂಸ್ಥೆಯ ಸಭಾಂಗಣ ಮತ್ತು ಆವರಣದಲ್ಲಿ ತ್ರಿಶೂಲ ಹಿಡಿದು ದೀಕ್ಷೆ ಪಡೆಯುತ್ತಿರುವುದು, ತ್ರಿಶೂಲಕ್ಕೆ ಪೂಜೆ ಸಲ್ಲಿಸುತ್ತಿರುವ ಚಿತ್ರಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿವೆ.

'ಶಸ್ತ್ರಾಸ್ತ್ರ ತರಬೇತಿಯ ಮಾಹಿತಿ ಇಲ್ಲ. ಆಯೋಜಕರೇ ಊಟ, ಮತ್ತಿತರ ವ್ಯವಸ್ಥೆ ಮಾಡಿಕೊಂಡಿದ್ದರು. ಇದರಲ್ಲಿ ಸಂಸ್ಥೆಯ ಪಾತ್ರವಿಲ್ಲ. ರಜೆಯಿದ್ದ ಕಾರಣ ಶಿಕ್ಷಕರೂ ಇರಲಿಲ್ಲ. ಈ ಹಿಂದೆ ರಾಷ್ಟ್ರ-ಮಟ್ಟದ ತರಬೇತಿಯೂ ನಡೆದಿತ್ತು. ಹೊರ ರಾಜ್ಯದಿಂದ ಶಿಕ್ಷಣಾರ್ಥಿಗಳು ಬಂದಿದ್ದರು' ಎಂದು ಸಂಸ್ಥೆಯ ಅಧ್ಯಕ್ಷ ಜರು ಗಣಪತಿ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

5ನೇ ಪುಟ ನೋಡಿ

ಶ್ರೀರಂಗಪಟ್ಟಣಕ್ಕೆ ಪಾದಯಾತ್ರೆ: ಋಷಿ ಕುಮಾರ ಸ್ವಾಮೀಜಿ 5

> ಶಾಲಾ ಆವರಣದಲ್ಲಿ ಇಂಥ ಚಟುವಟಿಕೆಗೆ ಅನುಮತಿ ಕೊಟ್ಟಿಲ್ಲ. ಬಂದೂಕು ತರಬೇತಿ, ಆಯುಧ ಪ್ರದರ್ಶನದ ದೂರು ಬಂದರೆ ಸಂಸ್ಥೆಗೆ ನೋಟಿಸ್ ಕೊಡಲಾಗುವುದು
> **ಶ್ರೀಶೈಲ ಬಿಳಗಿ**, ಕ್ಷೇತ್ರ ಶಿಕ್ಷಣಾಧಿಕಾರಿ, ವಿರಾಜಪೇಟೆ

> ಚಿತ್ರದಲ್ಲಿರುವುದು ಏರ್ ರೈಫಲ್. ಅದಕ್ಕೆ ಯಾರ ಅನುಮತಿಯೂ ಬೇಕಿಲ್ಲ
> **ಪಿ.ಕೃಷ್ಣಮೂರ್ತಿ**, ಜಿಲ್ಲಾ ಘಟಕದ ಅಧ್ಯಕ್ಷ, ವಿಎಚ್‌ಪಿ, ಕೊಡಗು

> ಹತ್ತು ವರ್ಷಗಳಿಂದಲೂ ಪ್ರಶಿಕ್ಷಣ ವರ್ಗದ ತರಬೇತಿಗೆ ಉಚಿತವಾಗಿ ಶಾಲೆಯ ಆವರಣವನ್ನು ನೀಡುತ್ತಿದ್ದೇವೆ. ಇದು ಹೊಸದಾಗಿ ನಡೆದ ಶಿಬಿರ ಅಲ್ಲ
> **ಜರು ಗಣಪತಿ**, ಅಧ್ಯಕ್ಷ, ಸಾಯಿ ಶಂಕರ ವಿದ್ಯಾಸಂಸ್ಥೆ, ಪೊನ್ನಂಪೇಟೆ

ಕಾರು ಅಪಘಾತದಲ್ಲಿ ಕ್ರಿಕೆಟಿಗ ಸೈಮಂಡ್ಸ್ ದುರ್ಮರಣ

ಸಿಡ್ನಿ(ಪಿಟಿಐ): ಆಸ್ಟ್ರೇಲಿಯಾ ಕ್ರಿಕೆಟ್ ತಂಡದ ಮಾಜಿ ಆಲ್‌ರೌಂಡರ್ ಆ್ಯಂಡ್ರೂ ಸೈಮಂಡ್ಸ್ (46) ಕಾರು ಅಪಘಾತದಲ್ಲಿ ಮೃತಪಟ್ಟಿದ್ದಾರೆ.

ಶನಿವಾರ ತಡರಾತ್ರಿ ಹಾರ್ವಿ ರೇಂಜ್ ವ್ಯಾಪ್ತಿಯಲ್ಲಿ ಸೈಮಂಡ್ಸ್ ಚಾಲನೆ ಮಾಡುತ್ತಿದ್ದ ಕಾರು ಅಪಘಾತಕ್ಕೀಡಾಗಿದೆ. ರಕ್ಷಣಾ ದಳವು ಸ್ಥಳಕ್ಕೆ ಧಾವಿಸಿ ಕೈಗೊಂಡ ಕಾರ್ಯಾಚರಣೆ ಫಲ ಕೊಡಲಿಲ್ಲ ಎಂದು ಕ್ವೀನ್ಸ್‌ಲ್ಯಾಂಡ್ ಪೊಲೀಸರು ತಿಳಿಸಿದ್ದಾರೆ.

ಸೈಮಂಡ್ಸ್ 1998 ರಿಂದ 2009ರವರೆಗೆ ಅವರು ಆಸ್ಟ್ರೇಲಿಯಾ ತಂಡದಲ್ಲಿ ಆಡಿದ್ದರು. ಎರಡು ಬಾರಿ ವಿಶ್ವಕಪ್ ಜಯಿಸಿದ ತಂಡದಲ್ಲಿ ಅವರಿದ್ದರು. ಅವರಿಗೆ ಪತ್ನಿ ಹಾಗೂ ಇಬ್ಬರು ಮಕ್ಕಳಿದ್ದಾರೆ.

11

ಬಿಕೆಯುನಲ್ಲಿ ಬಿರುಕು ಹೊಸ ಬಣ ಸ್ಥಾಪನೆ

ರಾಕೇಶ್ ಟಿಕಾಯತ್

ನರೇಶ್ ಟಿಕಾಯತ್

ಲಖನೌ (ಪಿಟಿಐ): ಕೇಂದ್ರ ಸರ್ಕಾರದ ನೂತನ ಕೃಷಿ ಕಾಯ್ದೆಗಳ ವಿರುದ್ಧ ರೈತರ ಪ್ರತಿಭಟನೆಯನ್ನು ಸಂಘಟಿಸಿದ್ದ ಭಾರತೀಯ ಕಿಸಾನ್ ಯೂನಿಯನ್‌ನಲ್ಲಿ (ಬಿಕೆಯು) ಒಡಕು ಮೂಡಿದೆ. ಬಿಕೆಯು ಉಪಾಧ್ಯಕ್ಷ ರಾಜೇಶ್ ಚೌಹಾಣ್ ಅವರು ಸಂಘಟನೆಯ ಬಣವೊಂದನ್ನು ಸ್ಥಾಪಿಸಿದ್ದಾರೆ.

ಈ ಘೋಷಣೆ ವೇಳೆ ಬಿಕೆಯುವಿನ ಹಲವು ನಾಯಕರು ರಾಜೇಶ್ ಜತೆಗಿದ್ದರು. ರಾಜೇಶ್ ಅವರನ್ನು ಹೊಸ ಬಣದ ಅಧ್ಯಕ್ಷರನ್ನಾಗಿ ಮತ್ತು ಧರ್ಮೇಂದ್ರ ಮಲಿಕ್ ಅವರನ್ನು ರಾಷ್ಟ್ರೀಯ ವಕ್ತಾರರನ್ನಾಗಿ ನೇಮಕ ಮಾಡಲಾಗಿದೆ.

ಬಿಕೆಯು ಅಧ್ಯಕ್ಷರಾದ ನರೇಶ್ ಟಿಕಾಯತ್ ಮತ್ತು ಪ್ರಮುಖ ನಾಯಕರಾದ ರಾಕೇಶ್ ಟಿಕಾಯತ್ ಅವರನ್ನು ಸಂಘಟನೆಯಿಂದ ಹೊರಗಿಡಲಾಗಿದೆ ಎಂದು ಹಲವು ಮಾಧ್ಯಮಗಳು ವರದಿ ಮಾಡಿವೆ. ಟಿಕಾಯತ್ ಸೋದರರನ್ನು ಸಂಘಟನೆಯಿಂದ ಹೊರಗಿಡಲಾಗಿದೆ ಎಂಬ ಸುದ್ದಿಯನ್ನು ರಾಜೇಶ್ ನಿರಾಕರಿಸಿದ್ದಾರೆ. 'ಅವರಿನ್ನೂ ಬಿಕೆಯುವಿನಲ್ಲೇ ಇದ್ದಾರೆ. ನಮ್ಮದು ಬಿಕೆಯು (ಎ)' ಎಂದು ಅವರು ಸ್ಪಷ್ಟಪಡಿಸಿದ್ದಾರೆ.

> ರಾಕೇಶ್ ಟಿಕಾಯತ್ ಅವರು ಚುನಾವಣೆಯಲ್ಲಿ ಒಂದು ಪಕ್ಷದ ಪರವಾಗಿ ಪ್ರಚಾರ ನಡೆಸಿದರು. ಮತ್ತೊಂದು ಪಕ್ಷದ ವಿರುದ್ಧ ಕೆಲಸ ಮಾಡಿದರು
> **ರಾಜೇಶ್ ಚೌಹಾಣ್**, ಬಿಕೆಯು ಉಪಾಧ್ಯಕ್ಷ

6ನೇ ಪುಟ ನೋಡಿ

'ಯಾವ ಪಕ್ಷವೂ ದಲಿತರನ್ನು ಸಿ.ಎಂ ಮಾಡಲ್ಲ'

ಆನೇಕಲ್: 'ಯಾವ ರಾಜಕೀಯ ಪಕ್ಷವೂ ರಾಜ್ಯದಲ್ಲಿ ದಲಿತರನ್ನು ಮುಖ್ಯಮಂತ್ರಿ ಮಾಡುವುದಿಲ್ಲ. ದಲಿತ ಮುಖ್ಯಮಂತ್ರಿ ಎನ್ನುವುದು ಬರೀ ಕನಸು' ಎಂದು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ರಾಜ್ಯ ಸಚಿವ ಎ.ನಾರಾಯಣಸ್ವಾಮಿ ಹೇಳಿದ್ದಾರೆ.

5

ಒಳ ಪುಟ

ದಾಖಲೆ ಬೆಲೆಗೆ ಟೊಮೆಟೊ ಮಾರಾಟ 5

ಚಿನಕುರಳಿ

ಪ್ರಕಾಶ್ ಶೆಟ್ಟಿ

ಎರಡು ದಿನಗಳಲ್ಲಿ ವರಿಷ್ಠರನ್ನು ಸಂಪರ್ಕಿಸುವೆ: ಬೊಮ್ಮಾಯಿ

ಸಂಪುಟ ವಿಸ್ತರಣೆ: ಸಿ.ಎಂ ಮತ್ತೆ ಪ್ರಸ್ತಾಪ

ಪ್ರಜಾವಾಣಿ ವಾರ್ತೆ

ಬೆಂಗಳೂರು/ಹುಬ್ಬಳ್ಳಿ: ರಾಜ್ಯ ಸಚಿವ ಸಂಪುಟ ವಿಸ್ತರಣೆ ಅಥವಾ ಪುನರ್ ರಚನೆ ಸಂಬಂಧ ಯಾವುದೇ ಸಂದರ್ಭದಲ್ಲಿ ಏನು ಬೇಕಾದರೂ ಆಗಬಹುದು ಎಂದು ಹೇಳಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ಸಚಿವ ಸಂಪುಟ ವಿಸ್ತರಣೆ ಸಂಬಂಧ ಇನ್ನೆರಡು ದಿನಗಳಲ್ಲಿ ಪಕ್ಷದ ವರಿಷ್ಠರನ್ನು ಸಂಪರ್ಕಿಸುತ್ತೇನೆ' ಎಂದು ಹುಬ್ಬಳ್ಳಿಯಲ್ಲಿ ಭಾನುವಾರ ಹೇಳಿದ್ದಾರೆ.

ಸಂಪುಟ ವಿಸ್ತರಣೆಯ ಸ್ಪಷ್ಟ ಸುಳಿವು ಇದಾಗಿದೆ ಎಂಬ ಚರ್ಚೆ ಬಿಜೆಪಿಯಲ್ಲಿ ಆರಂಭವಾಗಿದೆ. ಅಲ್ಲದೇ, ತ್ರಿಪುರಾದಲ್ಲಿ ಏಕಾಏಕಿ ಮುಖ್ಯಮಂತ್ರಿ ಬದಲಾವಣೆ ಮಾಡಿರುವ ಹಿನ್ನೆಲೆಯಲ್ಲಿ ಕರ್ನಾಟಕದಲ್ಲೂ ಯಾವುದೇ ಕ್ಷಣದಲ್ಲಿ ಏನು ಬೇಕಾದರೂ ಆಗಬಹುದು ಎಂಬ ಮಾತುಗಳೂ ಪಕ್ಷದ ವಲಯದಲ್ಲಿ ಕೇಳಿಬಂದಿದೆ.

ಹುಬ್ಬಳ್ಳಿಯಲ್ಲಿ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಬೊಮ್ಮಾಯಿ, 'ಸಂಪುಟ ವಿಸ್ತರಣೆ ಬಗ್ಗೆ ವರಿಷ್ಠರ ಸಲಹೆ ಸೂಚನೆಗಳನ್ನು ಪಾಲಿಸಲಾಗುವುದು. ರಾಜ್ಯಸಭೆ ಮತ್ತು ವಿಧಾನಪರಿಷತ್ ಚುನಾವಣೆ ಅಭ್ಯರ್ಥಿಗಳ ಆಯ್ಕೆ ಸಂಬಂಧ ಪಕ್ಷದ ಪ್ರಮುಖ ಸಮಿತಿ ಸಭೆ ನಡೆಸಿದ್ದನ್ನೂ ವರಿಷ್ಠರು ಗಮನಿಸಿದ್ದಾರೆ' ಎಂದರು.

'ಬಿ.ವೈ.ವಿಜಯೇಂದ್ರ ಸಂಪುಟ ಸೇರ್ಪಡೆ ವಿಷಯ ವರಿಷ್ಠರಿಗೆ ಬಿಟ್ಟಿದ್ದು' ಎಂದು ಅವರು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು. ಸಂಪುಟ ವಿಸ್ತರಣೆ ಸಂಬಂಧ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರ ಜತೆಗೂ ಮಾತುಕತೆ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

5ನೇ ಪುಟ ನೋಡಿ

ವಿಜಯೇಂದ್ರ ಆಯ್ಕೆ ಸಾಧ್ಯತೆ ಹಿಂದಿನ ಗುಟ್ಟೇನು?

ಬಿ.ಎಸ್.ಯಡಿಯೂರಪ್ಪ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ನಡೆದ ಉಪಚುನಾವಣೆಗಳಲ್ಲಿ ಹಳೆ ಮೈಸೂರು ಭಾಗದ ಕೆಲವು ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳ ಗೆಲುವಿಗಾಗಿ ಶ್ರಮಿಸಿದ್ದ ಕಾರಣಕ್ಕಾಗಿ ಬಿ.ವೈ. ವಿಜಯೇಂದ್ರ ಅವರನ್ನು ಪರಿಷತ್‌ಗೆ ಆಯ್ಕೆ ಮಾಡಲು ವರಿಷ್ಠರು ಒಪ್ಪಿಗೆ ನೀಡಿದ್ದಾರೆ ಎಂದು ಮೂಲಗಳು ಹೇಳಿವೆ.

ಸಂಪುಟ ವಿಸ್ತರಣೆ ಮಾಡಿದರೆ ಸಚಿವ ಸ್ಥಾನ ಕಲ್ಪಿಸುವ ಸಾಧ್ಯತೆಯೂ ಇದೆ. ಈ ಮೂಲಕ ಹಳೇ ಮೈಸೂರು ಭಾಗದ ಜಿಲ್ಲೆಗಳಲ್ಲಿ ಚುನಾವಣೆ ಉಸ್ತುವಾರಿ ನೀಡಿ, ಹೆಚ್ಚಿನ ಸ್ಥಾನಗಳನ್ನು ಗೆಲ್ಲಿಸಿಕೊಂಡು ಬರುವ ಗುರಿ ನಿಗದಿ ಮಾಡಬಹುದು. ಇದರ ಮೇಲೆ ವಿಜಯೇಂದ್ರ ಅವರ ಮುಂದಿನ ರಾಜಕೀಯ ಭವಿಷ್ಯ ನಿರ್ಧಾರವಾಗಲಿದೆ. ವಿಜಯೇಂದ್ರ ಸಚಿವರಾದರೆ ಮಾತ್ರ ಯಡಿಯೂರಪ್ಪ ಮುಂದಿನ ಚುನಾವಣಾ ಪ್ರಚಾರದಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬಹುದು ಎಂದೂ ಮೂಲಗಳು ಹೇಳಿವೆ.

ಕೇಂದ್ರ ಸರ್ಕಾರಕ್ಕೆ ಅಖಿಲ ಭಾರತ ವೀರಶೈವ ಮಹಾಸಭಾ ಒತ್ತಾಯ

'ಒಬಿಸಿ ಪಟ್ಟಿಗೆ ವೀರಶೈವ ಲಿಂಗಾಯತರ ಸೇರಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೀರಶೈವ ಲಿಂಗಾಯತ ಸಮುದಾಯದ ಎಲ್ಲ ಉಪಪಂಗಡಗಳನ್ನು ಕೇಂದ್ರ ಸರ್ಕಾರದ ಇತರ ಹಿಂದುಳಿದ ವರ್ಗಗಳ (ಒಬಿಸಿ) ಪಟ್ಟಿಗೆ ಸೇರಿಸಬೇಕು ಎಂದು ಅಖಿಲ ಭಾರತ ವೀರಶೈವ ಮಹಾಸಭಾ ಒತ್ತಾಯಿಸಿದೆ.

ನಗರದಲ್ಲಿ ಭಾನುವಾರ ನಡೆದ ಮಹಾಸಭಾದ 'ಪ್ರಾತಿನಿಧಿಕ ಸಭೆ'ಯಲ್ಲಿ ಈ ಕುರಿತು ನಿರ್ಣಯ ಕೈಗೊಂಡಿದೆ.

ಪತ್ರಿಕಾಗೋಷ್ಠಿಯಲ್ಲಿ ಈ ಕುರಿತು ವಿವರ ನೀಡಿದ ಮಹಾಸಭಾದ ಮಹಾ ಪ್ರಧಾನ ಕಾರ್ಯದರ್ಶಿ ಈಶ್ವರ ಖಂಡ್ರೆ, 'ಸರ್ವರಿಗೂ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ಜಗತ್ತಿಗೆ ನೀಡಿದವರು ಬಸವಾದಿ ಶರಣರು. ಆದರೆ, ಬಸವತತ್ವ ಅನುಯಾಯಿಗಳಾದ ಲಿಂಗಾಯಿತ ವೀರಶೈವರೇ ಸಾಮಾಜಿಕ ನ್ಯಾಯದಿಂದ ವಂಚಿತರಾಗಿದ್ದಾರೆ. ಹೀಗಾಗಿ, ಸಂವಿಧಾನಬದ್ಧವಾಗಿ ನಮ್ಮ ಬೇಡಿಕೆ ಈಡೇರಿಸಬೇಕು. ಸರ್ಕಾರ ಸಮುದಾಯದ ಬೇಡಿಕೆಗೆ ಸ್ಪಂದಿಸದಿದ್ದರೆ ಹೋರಾಟ ನಡೆಸಲಾಗುವುದು' ಎಂದು ತಿಳಿಸಿದರು.

'ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರ, ಕೇರಳ, ತೆಲಂಗಾಣ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಸಮುದಾಯದ ಜನರಿದ್ದಾರೆ. ಕರ್ನಾಟಕದಲ್ಲಿ ಸುಮಾರು ಶೇ 18ರಿಂದ 20ರಷ್ಟು ಜನರಿದ್ದಾರೆ. ಈ ಸಮುದಾಯ ಮುಂದುವರಿದಿದೆ ಎಂದು ಕೆಲವರು ವಾದಿಸುತ್ತಾರೆ. ಆದರೆ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿಯೂ ಅತ್ಯಂತ ಹಿಂದುಳಿದಿರುವ ಸಮುದಾಯದಲ್ಲಿ ಲಿಂಗಾಯತ ವೀರಶೈವ ಸಮುದಾಯವೂ ಸೇರುತ್ತದೆ' ಎಂದು ಅವರು ಪ್ರತಿಪಾದಿಸಿದರು.

'ಕೇಂದ್ರದ ಒಬಿಸಿ ಪಟ್ಟಿಯಲ್ಲಿ ವೀರಶೈವ-ಲಿಂಗಾಯತ ಎಲ್ಲ ಉಪ ಪಂಗಡಗಳು ಇಲ್ಲದೇ ಇರುವುದರಿಂದ ಕೇಂದ್ರ ಲೋಕಸೇವಾ ಆಯೋಗ, ಬ್ಯಾಂಕಿಂಗ್, ರೈಲ್ವೆ ನೇಮಕಾತಿ ಮಂಡಳಿ, ಸ್ಟಾಫ್ ಸೆಲೆಕ್ಷನ್ ಕಮಿಷನ್ ಮತ್ತು ಕೇಂದ್ರ ಸರ್ಕಾರದ ಉದ್ದಿಮೆಗಳ ನೇಮಕಾತಿಯಲ್ಲಿ ಸಮುದಾಯದಿಂದ ಆಯ್ಕೆಯಾಗಿ ನೇಮಕಗೊಂಡಿರುವವರ ಪಾಲು ನಗಣ್ಯ. ಜತೆಗೆ, ಐಐಟಿ, ಐಐಎಸ್ಸಿ ಸಂಸ್ಥೆಗಳು ಸೇರಿದಂತೆ ರಾಷ್ಟ್ರೀಯ ಪ್ರಾಮುಖ್ಯತೆಯ ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಣ ಪಡೆಯುವುದರಿಂದ ವಂಚಿತರಾಗಿದ್ದಾರೆ' ಎಂದು ವಿವರಿಸಿದರು.

'ವೀರಶೈವ ಲಿಂಗಾಯತರಲ್ಲಿ ಸುಮಾರು 90 ಉಪ ಪಂಗಡಗಳಿವೆ. ಆದರೆ, ಕೇವಲ 14 ಉಪ ಪಂಗಡಗಳನ್ನು ಮಾತ್ರ ಕೇಂದ್ರದ ಒಬಿಸಿ ಪಟ್ಟಿಗೆ ಸೇರಿಸಲಾಗಿದೆ. ಯಾವುದೇ ಸಮುದಾಯಕ್ಕೂ ಅನ್ಯಾಯವಾಬಾರದು ಎನ್ನುವುದು ಮಹಾಸಭಾದ ನಿಲುವು' ಎಂದರು.

ಸಭೆಯ ಇತರ ನಿರ್ಣಯಗಳು

- ಅಖಿಲ ಭಾರತ ವೀರಶೈವ ಮಹಾಸಭಾ ಎನ್ನುವುದನ್ನು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಎಂದು ತಿದ್ದುಪಡಿ ಮಾಡಲು ಒಪ್ಪಿಗೆ
- ವಿಧಾನಸೌಧದ ಆವರಣದಲ್ಲಿ ಬಸವೇಶ್ವರರ ಪುತ್ಥಳಿ ಸ್ಥಾಪಿಸಬೇಕು

> ವೀರಶೈವ ಮತ್ತು ಲಿಂಗಾಯತದ ಬಗ್ಗೆ ಗೊಂದಲ ಇಲ್ಲ. ನಾವೆಲ್ಲರೂ ಒಂದೇ. ಸಮುದಾಯವನ್ನು ಒಗ್ಗೂಡಿಸುವ ಕಾರ್ಯದಲ್ಲಿ ತೊಡಗಿದ್ದೇವೆ. ವಿಘಟನೆಗೆ ಅವಕಾಶ ನೀಡುವುದಿಲ್ಲ
> **ಈಶ್ವರ ಖಂಡ್ರೆ**, ಅಖಿಲ ಭಾರತ ವೀರಶೈವ ಮಹಾಸಭಾದ ಮಹಾಪ್ರಧಾನ ಕಾರ್ಯದರ್ಶಿ

10ನೇ ತರಗತಿ ಪಠ್ಯದಲ್ಲಿ ಹೆಡಗೇವಾರ್ ಭಾಷಣ ಸೇರ್ಪಡೆಗೆ ಆಕ್ಷೇಪ

ಬೆಂಗಳೂರು: ರಾಜ್ಯ ಸರ್ಕಾರವು 10ನೇ ತರಗತಿ ಕನ್ನಡ ಪಠ್ಯಪುಸ್ತಕದಲ್ಲಿ ಭಗತ್ ಸಿಂಗ್ ಕುರಿತ ಅಧ್ಯಾಯವನ್ನು ಕೈಬಿಟ್ಟು ಕೆ.ಬಿ. ಹೆಡಗೇವಾರ್ ಭಾಷಣ ಸೇರ್ಪಡೆ ಮಾಡಿರುವುದು ಖಂಡನೀಯ ಎಂದು ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್ (ಎಐಡಿಎಸ್ಒ) ತಿಳಿಸಿದೆ.

'ಶಿಕ್ಷಣವು ಪ್ರಜಾತಾಂತ್ರಿಕ ಧರ್ಮನಿರಪೇಕ್ಷ ಹಾಗೂ ವೈಜ್ಞಾನಿಕವಾಗಿರಬೇಕೆಂಬುದು ನವೋದಯ ಚಳವಳಿಯ ಹರಿಕಾರರು ಮತ್ತು ಸ್ವಾತಂತ್ರ್ಯ ಸಂಗ್ರಾಮದ ಹಲವು ಮಹಾನ್ ಹೋರಾಟಗಾರರ ಆಶಯವಾಗಿತ್ತು. ಆದರೆ, ಇಲ್ಲಿಯವರೆಗೂ ಆಡಳಿತ ನಡೆಸಿರುವ ಎಲ್ಲ ಪಕ್ಷಗಳು ಈ ಆಶಯಗಳಿಗೆ ವಿರುದ್ಧವಾಗಿ ತಮ್ಮ ಕಾರ್ಯಸೂಚಿಗಳನ್ನು ಪುಸ್ತಕದಲ್ಲಿ ತೂರಿಸುತ್ತಾ ಬಂದಿವೆ' ಎಂದು ಸಂಘಟನೆಯ ರಾಜ್ಯ ಕಾರ್ಯದರ್ಶಿ ಅಜಯ ಕಾಮತ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಜನಾಂಗೀಯ ದ್ವೇಷವನ್ನು ಖಂಡಿಸುವ ಪಿ.ಲಂಕೇಶ್ ಅವರ 'ಮೃಗ ಮತ್ತು ಸುಂದರಿ', ಸಾರಾ ಅಬೂಬಕರ್ ಅವರ 'ಯುದ್ಧ', ಎ.ಎನ್.ಮೂರ್ತಿರಾಯರ 'ವ್ಯಾಘ್ರಗೀತೆ',ಯಂತಹ ಪಾಠಗಳನ್ನು ಬಿಟ್ಟಿರುವುದೂ ತಪ್ಪು' ಎಂದಿದ್ದಾರೆ.

ರಾಜ್ಯ ತೆಂಗಿನ ನಾರು ಅಭಿವೃದ್ಧಿ ನಿಗಮದಿಂದ ಪ್ರದರ್ಶನ ಮತ್ತು ಮಾರಾಟ

ತೆಂಗಿನ ನಾರಿನಿಂದ ಪರಿಸರಸ್ನೇಹಿ ಉತ್ಪನ್ನ

• ಮನೋಹರ್ ಎಂ.

ಪ್ರಜಾವಾಣಿ ವಿಶೇಷ

ಬೆಂಗಳೂರು: ಪ್ಲಾಸ್ಟಿಕ್‌ಗೆ ಪರ್ಯಾಯವಾಗಿ ತೆಂಗಿನ ನಾರಿನಿಂದಲೇ ಪರಿಸರಸ್ನೇಹಿ ತಟ್ಟೆ, ಗಿಡ ಬೆಳೆಸುವ ಪಾಟ್,ಮಂಚ, ಸ್ನಾನದ ವೇಳೆ ಉಪಯೋಗಿಸುವ ನಾರು ಸೇರಿದಂತೆ ತರಹೇವಾರಿ ಉತ್ಪನ್ನಗಳನ್ನು ಕರ್ನಾಟಕ ರಾಜ್ಯ ತೆಂಗಿನ ನಾರುಅಭಿವೃದ್ಧಿ ನಿಗಮ ಹೊರತಂದಿದೆ.

ಅರಮನೆ ಮೈದಾನದಲ್ಲಿ ನಡೆಯುತ್ತಿರುವ 'ಚರ್ಮ ಕರಕುಶಲ ವಸ್ತು ಪ್ರದರ್ಶನ'ದಲ್ಲಿ ನಿಗಮದ ಮಳಿಗೆ ಜನರನ್ನು ಆಕರ್ಷಿಸುತ್ತಿದೆ.

ನಾರು ನಿಗಮವು ರಾಜ್ಯದ ಹಲವು ಕಡೆ ನಾರಿನ ಉತ್ಪನ್ನಗಳ ತಯಾರಿಕಾ ಘಟಕಗಳನ್ನು ಹೊಂದಿದೆ. ಈ ಉತ್ಪನ್ನಗಳನ್ನು ತಯಾರಿಸಲು ರೈತರಿಂದಲೇ ತೆಂಗಿನ ಸಿಪ್ಪೆ ಖರೀದಿಸುತ್ತಿದೆ. ಇದರಿಂದ ರೈತರಿಗೆ ಆದಾಯದ ಮೂಲ ಮತ್ತು ಗ್ರಾಮೀಣ ಪ್ರದೇಶದಲ್ಲಿ ಹಲವರಿಗೆ ಉದ್ಯೋಗಾವಕಾಶಗಳೂ ಸಿಕ್ಕಿವೆ.

ಶಾಲಾ ಮೇಜುಗಳು, ಮಂಚ,ಕಂಪ್ಯೂಟರ್ ಟೇಬಲ್‌ಗಳ ತಯಾರಿಕೆಯಲ್ಲೂ ತೆಂಗಿನ ನಾರು ಮಿಶ್ರಿತ ಬೋರ್ಡ್‌ಗಳನ್ನು ಬಳಸಲಾಗುತ್ತಿದೆ. ಪ್ರತಿ ಬೋರ್ಡ್‌ನಲ್ಲಿ ಶೇಕಡಾ 25ರಷ್ಟು ತೆಂಗಿನ ನಾರು ಬಳಸುತ್ತಿರುವುದರಿಂದ ಪೀಠೋಪಕರಣಗಳಿಗೆ ಮರಗಳ ಬಳಕೆ ಕಡಿಮೆ ಮಾಡುತ್ತದೆ.

'ತೆಂಗಿನ ನಾರು ನಿಷ್ಪ್ರಯೋಜಕ ಎಂಬ ಭಾವನೆ ಜನರಲ್ಲಿದೆ. ಆದರೆ, ನಿಗಮ ಸದ್ಯ 30ಕ್ಕೂ ಹೆಚ್ಚು ಉತ್ಪನ್ನಗಳನ್ನು ನಾರಿನಿಂದಲೇ ಹೊರತಂದಿದೆ. ಪರಿಸರಸ್ನೇಹಿ ಉತ್ಪನ್ನಗಳಾಗಿರುವುದರಿಂದ ಹೆಚ್ಚು ಬೇಡಿಕೆಯೂ ಇದೆ' ಎನ್ನುತ್ತಾರೆ ರಾಜ್ಯ ತೆಂಗಿನ ನಾರು ಅಭಿವೃದ್ಧಿ ನಿಗಮದ ಪ್ರತಿನಿಧಿ ಗಿರೀಶ್.

'ಮೇಜುಗಳನ್ನು ಹೆಚ್ಚಾಗಿ ಪ್ಲೈವುಡ್ ಬಳಸಿ ಸಿದ್ಧಪಡಿಸುತ್ತಾರೆ. ಅದಕ್ಕೆ ಪರ್ಯಾಯವಾಗಿ ತೆಂಗಿನ ನಾರಿನಿಂದ ತಯಾರಾದ ಹಲಗೆಗಳನ್ನೇ ಬಳಸಬಹುದಾಗಿದೆ. ಗೃಹೋಪಯೋಗಿ ವಸ್ತುಗಳಾದ ಹಾಸಿಗೆ, ಮಂಚ, ದಿಂಬು, ಹಗ್ಗ, ಪ್ರವೇಶ ದ್ವಾರಗಳಲ್ಲಿ ಹಾಕುವ ಮ್ಯಾಟ್‌ಗಳೂ ನಾರಿನಿಂದ ತಯಾರಾಗುತ್ತಿವೆ' ಎಂದರು.

'ಕಾಫಿ, ಟೀ ಬಿಸಿ ತಾಗದಂತೆ ಲೋಟದ ಕೆಳಗೆ ಇಡುವ ಸಣ್ಣ ತಟ್ಟೆಗಳು, ಮನೆಯಲ್ಲಿ ನೇತು ಹಾಕಬಹುದಾದ ಪಾಟ್‌ಗಳು, ಅಲಂಕಾರಿಕ ಕೃತಕ ಗೂಡುಗಳಿಗೆ ಜನ ಆಕರ್ಷಿತರಾಗುತ್ತಿದ್ದಾರೆ' ಎಂದು ಹೇಳಿದರು.

ತೆಂಗಿನ ನಾರಿನಿಂದ ತಯಾರಿಸಿರುವ ಉತ್ಪನ್ನಗಳು

ಕಾರ್ಯಕ್ರಮದಲ್ಲಿ ಕೋಟಿಗಾನಹಳ್ಳಿ ರಾಮಯ್ಯ ಅವರಿಗೆ 'ಬಿ.ರಾಚಯ್ಯ ದತ್ತಿ ನಿಧಿ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಮಾಧ್ಯಮ ಅಕಾಡೆಮಿ ಅಧ್ಯಕ್ಷ ಕೆ.ಸದಾಶಿವ ಶೆಣೈ, ವಾರ್ತಾ ಇಲಾಖೆಯ ಆಯುಕ್ತ ಪಿ.ಎಸ್.ಹರ್ಷ, ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಹಾಗೂ ಇತರರು ಇದ್ದಾರೆ.

'ಹಿಂದುತ್ವ ರಾಜಕಾರಣ ದೇಶಕ್ಕೆ ಮಾರಕ'

ಬೆಂಗಳೂರು: 'ಹಿಂದುತ್ವ ರಾಜಕಾರಣ ಬಲಿಷ್ಠವಾಗುತ್ತಿದ್ದು, ಈ ಬೆಳವಣಿಗೆ ದೇಶಕ್ಕೆ ಮಾರಕ' ಎಂದು ಪತ್ರಕರ್ತ ಕೋಟಿಗಾನಹಳ್ಳಿ ರಾಮಯ್ಯ ಅವರು ಹೇಳಿದರು.

ರಾಜ್ಯ ಎಸ್.ಸಿ, ಎಸ್.ಟಿ. ಪತ್ರಿಕಾ ಸಂಪಾದಕರ ಸಂಘವು ಹಮ್ಮಿಕೊಂಡಿದ್ದ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಹಾಗೂ 'ಬಿ.ರಾಚಯ್ಯ ದತ್ತಿ ನಿಧಿ ಪ್ರಶಸ್ತಿ, ವಾರ್ಷಿಕ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಬಹು ಸಂಸ್ಕೃತಿಯ ಭಾರತ ಪ್ರಜಾಮುಖಿಯಾಗಿ ಬೆಳೆಯಲು ಅಂಬೇಡ್ಕರ್ ರಚಿಸಿದ ಸಂವಿಧಾನವೇ ಕಾರಣ. ಸಂವಿಧಾನದ ಪಾಲನೆ ಕಡ್ಡಾಯವಾಗಬೇಕು' ಎಂದರು.

'ಉತ್ತರ ಭಾರತದಲ್ಲಿ ಇಂಗ್ಲಿಷ್ ಗುಡಿಗಳನ್ನು ಕಟ್ಟಿ, ಎಬಿಸಿಡಿ ಮಂತ್ರ ಜಪಿಸಲಾಗುತ್ತಿದೆ. ನಮ್ಮಲ್ಲಿ ಅಂಬೇಡ್ಕರ್ ಹೆಸರಿನಲ್ಲಿ ಗುಡಿಗಳನ್ನು ನಿರ್ಮಿಸಬೇಕು. ಅಲ್ಲಿ ಸಂವಿಧಾನ ಮತ್ತು ಅಂಬೇಡ್ಕರ್ ಆಶಯಗಳನ್ನು ಮಂತ್ರವಾಗಿಸಬೇಕು. 'ಮಾದರಿ ಪತ್ರಿಕೋದ್ಯಮ ಸಮಾಜಮುಖಿಯಾಗಲು ಸಾಧ್ಯವಿಲ್ಲ. ಪತ್ರಕರ್ತರು ಮಾದರಿಯಿಂದ ಹೊರಬರದಿದ್ದರೆ ಸಮಾಜದಲ್ಲಿ ಸ್ವಾಸ್ಥ್ಯ ಅಸಾಧ್ಯ. ಇದಕ್ಕಾಗಿ ಅಂಬೇಡ್ಕರ್‌ರನ್ನು ಅರಿತುಕೊಳ್ಳಬೇಕು' ಎಂದರು.

'ಎಲ್ಲ ವರ್ಗಕ್ಕೂ ಶಿಕ್ಷಣ, ದಾಸೋಹ'

ಸೋಮೇಶ್ವರಸ್ವಾಮಿ ವೀರಶೈವ ಸಮಾಜ ಸೇವಾ ಸಂಘದ ಶತಮಾನೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವೀರಶೈವ ಸಮಾಜ ಯಾರನ್ನೂ ವಿರೋಧಿಸಿಲ್ಲ. ಜಾತಿ ಭೇದ ಮಾಡದೆಯೇ ಎಲ್ಲ ಸಮುದಾಯಗಳಿಗೆ ಶಿಕ್ಷಣ, ದಾಸೋಹ ನೀಡುವ ಪರಂಪರೆ ಹೊಂದಿದೆ' ಎಂದು ಶಿವಗಂಗಾ ಕ್ಷೇತ್ರದ ಮೇಲಣಗವಿ ವೀರಸಿಂಹಾಸನ ಸಂಸ್ಥಾನ ಮಠದ ಪಟ್ಟಾಧ್ಯಕ್ಷ ಡಾ. ಮಲಯ ಶಾಂತಮುನಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ನಗರದ ಅರಳೇಪೇಟೆಯಲ್ಲಿ ಭಾನುವಾರ ನಡೆದ ಸೋಮೇಶ್ವರಸ್ವಾಮಿ ವೀರಶೈವ ಸಮಾಜ ಸೇವಾ ಸಂಘದ ಶತಮಾನೋತ್ಸವ, ರೇಣುಕಾಚಾರ್ಯರು ಮತ್ತು ಬಸವೇಶ್ವರ ಜಯಂತಿ ಸಮಾರಂಭದಲ್ಲಿ ಮಾತನಾಡಿದ ಅವರು, '100 ವರ್ಷಗಳಿಂದಲೂ ವಿವಿಧ ಸಾಮಾಜಿಕ ಕಾರ್ಯಗಳನ್ನು ಕೈಗೊಳ್ಳುತ್ತಿರುವ ಸಂಘದ ಚಟುವಟಿಕೆಗಳು ಶ್ಲಾಘನೀಯ' ಎಂದರು.

ವಿಭೂತಿಪುರ ಮಠದ ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, 'ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಪ್ರಗತಿ ಸಾಧಿಸಿದ್ದರೂ ಧರ್ಮ, ಸಂಪ್ರದಾಯಗಳ ಆಚರಣೆಗಳಲ್ಲಿ ಜನರು ಎಂದಿಗೂ ಹಿಂದೆ ಬಿದ್ದಿಲ್ಲ. ಇದು ನಮ್ಮ ದೇಶದ ಹೆಮ್ಮೆಯ ಪ್ರತೀಕ' ಎಂದು ನುಡಿದರು.

'ಸೋಮೇಶ್ವರಸ್ವಾಮಿ ವೀರಶೈವ ಸಮಾಜ ಸೇವಾ ಸಂಘದ ಯಶಸ್ಸಿನ ಹಿಂದೆ ಸಾಕಷ್ಟು ಜನರ ಶ್ರಮ ಅಡಗಿದೆ. ಪ್ರತಿ ವರ್ಷ ನಾನಾ ಕಾರ್ಯಕ್ರಮಗಳನ್ನು ಕೈಗೊಳ್ಳುವ ಮೂಲಕ ಬಸವಾದಿ ಶರಣರ ಚಿಂತನೆಗಳನ್ನು ಎತ್ತಿ ಹಿಡಿಯುವ ಕೆಲಸ ಮಾಡುತ್ತಿದೆ' ಎಂದು ಶ್ಲಾಘಿಸಿದರು.

ಕಾರ್ಯಕ್ರಮದಲ್ಲಿ 'ಅರುಣಶ್ರೀ' ಶತಮಾನೋತ್ಸವದ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು. ಪಿಎಚ್.ಡಿ ಪದವಿ ಪಡೆದ ಡಾ. ಮಲಯಶಾಂತಮುನಿ ಶಿವಾಚಾರ್ಯ ಸ್ವಾಮೀಜಿ ಅವರನ್ನು ಇದೇ ವೇಳೆ ಅಭಿನಂದಿಸಲಾಯಿತು. ಮಾಜಿ ಶಾಸಕ ಪಿ.ಎಸ್. ಪ್ರಕಾಶ್, ಬಾಳೆಹೊನ್ನೂರು ಶಾಖಾ ಮಠದ ಯಡಿಯೂರು ಕ್ಷೇತ್ರದ ರೇಣುಕ ಶಿವಾಚಾರ್ಯ ಸ್ವಾಮೀಜಿ, ಮಾಜಿ ಸಚಿವ ಮಾಲೂರು ಎಸ್.ಎನ್. ಕೃಷ್ಣಯ್ಯ ಶೆಟ್ಟಿ ಇದ್ದರು.

ನಗರದಲ್ಲಿ ಭಾನುವಾರ ಸೋಮೇಶ್ವರಸ್ವಾಮಿ ವೀರಶೈವ ಸಮಾಜ ಸೇವಾ ಸಂಘದ ಶತಮಾನೋತ್ಸವ ಸಮಾರಂಭದಲ್ಲಿ ವಿಭೂತಿಪುರ ಮಠದ ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ, ಶಿವಗಂಗಾ ಕ್ಷೇತ್ರದ ಮಲಯಶಾಂತಮುನಿ ಶಿವಾಚಾರ್ಯ ಸ್ವಾಮೀಜಿ, ಸೋಮೇಶ್ವರಸ್ವಾಮಿ ವೀರಶೈವ ಸಮಾಜ ಸೇವಾ ಸಂಘದ ಅಧ್ಯಕ್ಷ ಆರ್. ಸೋಮಶೇಖರ್, ಬಿಜೆಪಿ ಮುಖಂಡ ಎಸ್.ಎನ್. ಕೃಷ್ಣಯ್ಯ ಶೆಟ್ಟಿ ಮತ್ತು ಕರ್ನಾಟಕ ಸಾಬೂನು ನಿಗಮ ಮಂಡಳಿ ಅಧ್ಯಕ್ಷ ಪಿ.ಎಸ್. ಪ್ರಕಾಶ್, ಬಿಜೆಪಿ ಬೆಂಗಳೂರು ಕೇಂದ್ರ ಜಿಲ್ಲೆ ಕಾರ್ಯದರ್ಶಿ ಎ.ಆರ್. ಸಪ್ತಗಿರಿ ಗೌಡ ಅವರು ರೇಣುಕಾಚಾರ್ಯರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು –ಪ್ರಜಾವಾಣಿ ಚಿತ್ರ

ಸುದ್ದಿ 2 ನಿಮಿಷ

'ಮಕ್ಕಳ ವಯಸ್ಸು: ಎತ್ತರವೇ ಅಳತೆಗೋಲಲ್ಲ'

ಬೆಂಗಳೂರು: ಬಸ್‌ನಲ್ಲಿ ಪ್ರಯಾಣಿಸುವ ಮಕ್ಕಳ ವಯಸ್ಸು ಖಚಿತವಾದ ಬಳಿಕ ಎತ್ತರವನ್ನು ಅಳತೆಗೋಲಾಗಿ ಪರಿಗಣಿಸುವ ಅಗತ್ಯವಿಲ್ಲ ಎಂದು ಕೆಎಸ್ಆರ್‌ಟಿಸಿ ಮುಖ್ಯ ಸಂಚಾರ ವ್ಯವಸ್ಥಾಪಕರು ಸ್ಪಷ್ಟಪಡಿಸಿದ್ದಾರೆ.

ಆರು ವರ್ಷದೊಳಗಿನ ಮಕ್ಕಳಿಗೆ ಉಚಿತ ಪ್ರಯಾಣ, 12 ವರ್ಷದೊಳಗಿನ ಮಕ್ಕಳಿಗೆ ಅರ್ಧ ಬೆಲೆಯ ಟಿಕೆಟ್ ಪಡೆದು ಪ್ರಯಾಣಿಸಬಹುದು. ಟಿಕೆಟ್ ಪಡೆಯುವ ಸಂದರ್ಭದಲ್ಲಿ ಪೋಷಕರು ಮತ್ತು ನಿರ್ವಾಹಕರ ನಡುವೆ ವಾದ ವಿವಾದಗಳು ಏರ್ಪಡುತ್ತಿವೆ. ಆದ್ದರಿಂದ ಎತ್ತರವನ್ನು ಅಳತೆಗೋಲಾಗಿ ಇಟ್ಟುಕೊಳ್ಳಲು ಸೂಚನೆ ನೀಡಲಾಗಿದೆ ಅಷ್ಟೆ.

ಆದರೆ, ಮಕ್ಕಳ ವಯಸ್ಸಿನ ಬಗ್ಗೆ ಅಧಿಕೃತ ದಾಖಲೆ ಇದ್ದು, ಅವರು 12 ವರ್ಷಕ್ಕಿಂತ ಕಡಿಮೆ ವಯಸಿನವರು ಎಂಬುದು ಖಚಿತವಾದರೆ ಎತ್ತರದ ಅಳತೆಗೋಲು ಅಗತ್ಯವಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಚಾಲನಾ ಸಿಬ್ಬಂದಿಗೆ ಈ ಬಗ್ಗೆ ತಿಳಿವಳಿಕೆ ನೀಡಿ ವರದಿ ಸಲ್ಲಿಸುವಂತೆ ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

'ವಿಪ್ರ ವೈದ್ಯಕೀಯ ಸಹಾಯವಾಣಿ ಆರಂಭಿಸಲು ಚಿಂತನೆ'

ಬೆಂಗಳೂರು: 'ವೈದ್ಯಕೀಯ ನೆರವಿನ ಅವಶ್ಯಕತೆ ಇರುವ ವಿಪ್ರ ಸಮುದಾಯದ ಅಶಕ್ತರಿಗೆ ನೆರವಾಗುವ ಉದ್ದೇಶದಿಂದ ವೈದ್ಯಕೀಯ ಸಹಾಯವಾಣಿ ಆರಂಭಿಸಲು ಉದ್ದೇಶಿಸಲಾಗಿದೆ. ಶೀಘ್ರವೇ ಈ ಬಗ್ಗೆ ರೂಪುರೇಷೆಗಳನ್ನು ಸಿದ್ಧಪಡಿಸಲಾಗುವುದು' ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಅಶೋಕ್ ಹಾರನಹಳ್ಳಿ ತಿಳಿಸಿದರು.

ನಗರದಲ್ಲಿ ಭಾನುವಾರ ಮಹಾಸಭಾದ ವೈದ್ಯಕೀಯ ಕೋಶ ಉದ್ಘಾಟಿಸಿ ಮಾತನಾಡಿದ ಅವರು, 'ಆರ್ಥಿಕವಾಗಿ ಸಂಕಷ್ಟದಲ್ಲಿರುವ ಮಹಾಸಭಾದ ಸದಸ್ಯರಿಗೆ ವೈದ್ಯಕೀಯ ಸೌಲಭ್ಯಗಳನ್ನು ರಿಯಾಯಿತಿ ದರದಲ್ಲಿ ಒದಗಿಸುವ ಯೋಜನೆಗೆ ಉತ್ತಮ ಪ್ರತಿಕ್ರಿಯೆ ದೊರೆತಿದೆ. ಬೆಂಗಳೂರಿನ ಹಲವು ಆಸ್ಪತ್ರೆಗಳು ನಮ್ಮ ಜೊತೆ ಕೈಜೋಡಿಸಲು ಮುಂದೆ ಬಂದಿವೆ. ಈಗಾಗಲೇ 10 ಆಸ್ಪತ್ರೆಗಳ ಜತೆ ಒಪ್ಪಂದ ಮಾಡಿಕೊಳ್ಳಲಾಗಿದೆ' ಎಂದು ತಿಳಿಸಿದರು.

'ವೈದ್ಯ ವೃತ್ತಿ ಅತ್ಯಂತ ಪವಿತ್ರ. ವೈದ್ಯರೂ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವವರನ್ನು ಒಂದೇ ವೇದಿಕೆಯಡಿ ಸಂಘಟಿಸಿ ಸಮುದಾಯದ ಬಡವರಿಗೆ ನೆರವು ಕಲ್ಪಿಸುವುದು ಸಂಘಟನೆಯ ಮುಖ್ಯ ಉದ್ದೇಶ. ಇಂತಹ ಕೋಶಗಳ ರಚನೆ ಅಸ್ತಿತ್ವ ಸಮುದಾಯಕ್ಕೆ ಅಗತ್ಯ' ಎಂದರು.

'ಗ್ರಾಮೀಣ ಪ್ರದೇಶದಲ್ಲಿ ನೆಲೆಸಿರುವ ಬ್ರಾಹ್ಮಣರು ಆರ್ಥಿಕವಾಗಿ ಕಷ್ಟದಲ್ಲಿದ್ದಾರೆ. ಆರ್ಥಿಕವಾಗಿ ನೆರವು ನೀಡುವ ಮೂಲಕ ಅಂತಹವರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಉದ್ದೇಶ ನಮ್ಮದು' ಎಂದರು.

ಅಧಿಕಾರದ ಅವಧಿ ಮುಗಿದರೂ ನಡೆಯದ ಚುನಾವಣೆ: ಹಲವು ಸದಸ್ಯರ ಆಕ್ಷೇಪ

ಲೇಖಕಿಯರ ಸಂಘದ ಚುನಾವಣೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲೇಖಕಿಯರ ಸಂಘದ (ಕಲೇಸಂ) ಅಧ್ಯಕ್ಷೆ ವನಮಾಲ ಸಂಪನ್ನಕುಮಾರ್ ಅವರ ಅಧ್ಯಕ್ಷತೆಯ ಅಧಿಕಾರ ಅವಧಿ ಮುಗಿದಿದ್ದರೂ ಚುನಾವಣೆ ನಡೆಸಲು ಸಿದ್ಧರಿಲ್ಲ ಎಂದು ಸಂಘದ ಹಲವು ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಹೇಮಲತಾ ಮಹಿಷಿ, ಬಿ.ಟಿ. ಲಲಿತಾ ನಾಯಕ್, ವಿಜಯಮ್ಮ, ಉಷಾ ಪಿ. ರೈ, ಸಂಧ್ಯಾ ರೆಡ್ಡಿ, ವಸುಂಧರಾ ಭೂಪತಿ ಮುಂತಾದವರು ಸಹಕಾರ ಸಂಘಗಳ ಇಲಾಖೆ ರಿಜಿಸ್ಟ್ರಾರ್ ಅವರಿಗೆ ಈ ಕುರಿತು ಪತ್ರ ಬರೆದಿದ್ದಾರೆ.

ಏನಿದು ಪ್ರಕರಣ?: 2018–19ನೇ ಸಾಲಿನಲ್ಲಿ ಮುಂದಿನ ಮೂರು ವರ್ಷಗಳಿಗೆ ವನಮಾಲ ಅವರು ಸಂಘದ ಅಧ್ಯಕ್ಷೆಯಾಗಿ ಆಯ್ಕೆ ಆಗಿದ್ದರು. ಅಧಿಕಾರಾವಧಿಯು 2021ಕ್ಕೆ ಮುಗಿದಿದ್ದು, ಕೊರೊನಾ ಇದ್ದ ಕಾರಣ ಸಕ್ರಿಯವಾಗಿ ಕೆಲಸ ನಿರ್ವಹಿಸಲು ಆಗಲಿಲ್ಲ ಎನ್ನುವ ಕಾರಣ ನೀಡಿ, ಇನ್ನೂ ಒಂದು ವರ್ಷ ಅವಧಿ ವಿಸ್ತರಿಸುವಂತೆ ವನಮಾಲ ಅವರು ಸಲಹಾ ಸಮಿತಿಗೆ ಮನವಿ ಮಾಡಿದರು. ಅವರ ಮನವಿಯನ್ನು ಒಪ್ಪಿ, ಒಂದು ವರ್ಷಕ್ಕೆ ಅವರ ಅವಧಿಯನ್ನು ವಿಸ್ತರಿಸಲಾಯಿತು. ನಂತರ, 2022ರ ಏಪ್ರಿಲ್ 17ರಂದು ನಡೆದ ಸರ್ವ ಸದಸ್ಯರ ಸಭೆಯಲ್ಲಿ ಇನ್ನೊಂದು ಅವಧಿಗೂ ಇದೇ ತಂಡ ಮುಂದುವರಿಯುವುದಾಗಿ ವನಮಾಲ ಹೇಳಿದರು. ಇದನ್ನು ಹಲವು ಸದಸ್ಯರು ವಿರೋಧಿಸಿ, ಚುನಾವಣೆ ಆಗಲೇಬೇಕು ಎಂದು ಒತ್ತಾಯಿಸಿದರು. ಒತ್ತಾಯಕ್ಕೆ ಮಣಿದು ಚುನಾವಣೆ ನಡೆಸುವುದಾಗಿ ಹೇಳಿದ ವನಮಾಲ ಅವರು ನಂತರ ಕ್ರಮ ಕೈಗೊಳ್ಳಲಿಲ್ಲ ಎಂದು ಸಂಘದ ಹಲವು ಸದಸ್ಯರು ಆರೋಪಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಕವಯತ್ರಿ ಪ್ರತಿಭಾ ನಂದಕುಮಾರ್, 'ವನಮಾಲ ಅವರೇ ಮತ್ತೊಂದು ಅವಧಿಗೂ ಅಧ್ಯಕ್ಷೆ ಆಗಿ ಆಯ್ಕೆ ಆಗಲಿ. ನಮ್ಮದು ಯಾರದ್ದೂ ಅಭ್ಯಂತರವಿಲ್ಲ. ಆದರೆ, ಕಾನೂನಿನ ಪ್ರಕಾರ ಚುನಾವಣೆ ನಡೆಯಬೇಕು. ಇದಿಷ್ಟೇ ನಮ್ಮ ಆಗ್ರಹ' ಎಂದರು.

'ಏಪ್ರಿಲ್‌ನಲ್ಲಿ ನಡೆದ ಸಭೆಯಲ್ಲಿ ಕೆಲವರು ಆನ್‌ಲೈನ್ ಮೂಲಕ ಭಾಗಿಯಾಗಿದ್ದರು. ವನಮಾಲ ಅವರು ಈ ವಿಷಯ ಪ್ರಸ್ತಾಪ ಮಾಡಿದಾಗಲೇ ಹಲವು ಸದಸ್ಯರು ವಿರೋಧ ವ್ಯಕ್ತಪಡಿಸಿದ್ದರು. ಚುನಾವಣೆ ನಡೆಸಲು ಸಂಘದ ಹಲವು ಮಾಜಿ ಅಧ್ಯಕ್ಷರು ನೇರವಾಗಿಯೇ ಹೇಳಿದ್ದರು. ಸಭೆಯ ನಂತರ ಹಲವರು ವನಮಾಲ ಅವರಿಗೆ ಕರೆ ಮಾಡಿ ಮನವೊಲಿಸಲು ಪ್ರಯತ್ನಿಸಿದ್ದರೂ, ಚುನಾವಣೆ ನಡೆಸುವ ಇಚ್ಛೆ ತೋರಿಸುತ್ತಿಲ್ಲ' ಎಂದು ಲೇಖಕಿ ವಸುಂಧರಾ ಭೂಪತಿ ತಿಳಿಸಿದರು.

'ನಾನು ಆನ್‌ಲೈನ್ ಮೂಲಕ ಸಭೆಯಲ್ಲಿ ಭಾಗವಹಿಸಿದ್ದೆ. ವನಮಾಲ ಅವರ ವಿಚಾರಕ್ಕೆ ವಿರೋಧ ವ್ಯಕ್ತಪಡಿಸಿದ್ದೆ. ನನ್ನಂತೆ ಹಲವು ಸದಸ್ಯರು ವಿರೋಧ ವ್ಯಕ್ತಪಡಿಸಿದ್ದರು. ಕೆಲವರ ಮಾತನ್ನು ಮ್ಯೂಟ್ ಕೂಡ ಮಾಡಲಾಯಿತು. ಇದು ಸರಿಯಾದ ನಡೆಯಲ್ಲ' ಎಂದರು ಲೇಖಕಿ ಉಷಾ ಪಿ. ರೈ.

'ನೂರಾರು ಸದಸ್ಯರು ಚುನಾವಣೆ ಬೇಡ ಅಂತಲೇ ಹೇಳಿದ್ದಾರೆ'

'ಸಭೆಯಲ್ಲಿ 12 ಮಂದಿ ಮಾತ್ರ ಚುನಾವಣೆ ಬೇಕು ಎಂದಿದ್ದಾರೆ. ಉಳಿದ ನೂರಾರು ಸದಸ್ಯರು ಚುನಾವಣೆ ಬೇಡ ಅಂತಲೇ ಹೇಳಿದ್ದಾರೆ. ಕೊರೊನಾ ಕಾರಣ ಸಂಘದ ಹಲವು ಕೆಲಸಗಳು ಬಾಕಿ ಇವೆ. ಹೇಗೂ ಒಂದೇ ಅಧ್ಯಕ್ಷರು ಎರಡನೇ ಬಾರಿಗೆ ಅಧಿಕಾರ ಮುಂದುವರಿಸಬಹುದು ಎಂದು ಬೈ-ಲಾದಲ್ಲಿ ಇದೆ. ಆದ್ದರಿಂದ ಚುನಾವಣೆ ಮಾಡಿ ಸಮಯ ವ್ಯರ್ಥ ಮಾಡುವುದು ಬೇಡ. ನೀವೇ ಮುಂದುವರಿಯಿರಿ ಎಂದು ಸಭೆಯಲ್ಲಿ ನೂರಾರು ಸದಸ್ಯರು ಹೇಳಿದ್ದಾರೆ' ಎನ್ನುತ್ತಾರೆ ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ವನಮಾಲ ಸಂಪನ್ನಕುಮಾರ್.

'ಬೈ-ಲಾ ಮಾಡುವವರೇ ಸಂಘದ ಸದಸ್ಯರು. ಆದ್ದರಿಂದ ಸದಸ್ಯರೇ ಸುಪ್ರೀಂ. ಅವರೇ ಅಧಿಕಾರಾವಧಿಯನ್ನು ಮುಂದುವರಿಸಲು ಹೇಳಿದ್ದಾರೆ. 2021ರಲ್ಲಿ ಒಂದು ವರ್ಷಕ್ಕೆ ಅಧ್ಯಕ್ಷ ಅವಧಿ ವಿಸ್ತರಿಸಲಾಯಿತು. ಆದರೆ, 2021ರಲ್ಲಿ ಮತ್ತೆ ಲಾಕ್‌ಡೌನ್ ಹೇರಿದ ಕಾರಣ, ಈ ಕಾಲದಲ್ಲೂ ಸಂಘದ ಕೆಲಸ ಮಾಡಲಾಗಲಿಲ್ಲ' ಎಂದರು.

ಈ ರೀತಿ ಅಧಿಕಾರಾವಧಿಯನ್ನು ವಿಸ್ತರಿಸಲು ಕಾನೂನಿನಲ್ಲಿ ಅವಕಾಶ ಇಲ್ಲ. ಚುನಾವಣೆಗೆ ಸ್ಪರ್ಧಿಸಲು ಇಚ್ಛಿಸುವವರ ಹಕ್ಕನ್ನು ನಾವು ಕಿತ್ತುಕೊಳ್ಳಲು ಸಾಧ್ಯವಿಲ್ಲ

ಹೇಮಲತಾ ಮಹಿಷಿ, ವಕೀಲೆ

ಕರಗ ಸಂಭ್ರಮ...

ನಗರದ ಕಲಾಸಿಪಾಳ್ಯದಲ್ಲಿರುವ ಧರ್ಮರಾಯಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ಭಾನುವಾರ ಪೇರಿಮಲ್ ದೇವಸ್ಥಾನ ಟ್ರಸ್ಟ್ ಆಯೋಜಿಸಿದ್ದ ಅಗ್ನಿಕುಂಡ ಮತ್ತು ಕರಗ ಉತ್ಸವದಲ್ಲಿ ಅರ್ಚಕರು ಕರಗ ಹೊತ್ತು ಅಗ್ನಿಕುಂಡದಲ್ಲಿ ಪ್ರವೇಶ ಮಾಡಿದ ದೃಶ್ಯ

- ಪ್ರಜಾವಾಣಿ ಚಿತ್ರ/ ಎಂ.ಎಸ್.ಮಂಜುನಾಥ್

'20ರಂದು ವಾಲ್ಮೀಕಿ ಸಮಾಜದಿಂದ ಹರಿಹರ ಬಂದ್'

ಹರಿಹರ: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮೀಸಲಾತಿ ಪ್ರಮಾಣ ಹೆಚ್ಚಿಸಲು ಆಗ್ರಹಿಸಿ ತಾಲ್ಲೂಕು ವಾಲ್ಮೀಕಿ ಸಮಾಜದಿಂದ ಮೇ 20ರಂದು ಹರಿಹರ ಬಂದ್ ಮಾಡಲಾಗುವುದು ಎಂದು ತಾಲ್ಲೂಕು ವಾಲ್ಮೀಕಿ ಸಮಾಜದ ಅಧ್ಯಕ್ಷ ಕೆ.ಬಿ. ಮಂಜುನಾಥ ಹೇಳಿದರು.

'ಎಲ್ಲಾ ಹಿಂದುಳಿದ ವರ್ಗದವರ ಸಹಕಾರದಿಂದ ಹರಿಹರ ಬಂದ್ ಮಾಡಲಾಗುವುದು ಎಂದು ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ನಗರೂರಿನಲ್ಲಿರುವ ಶ್ರೀಕ್ಷೇತ್ರ ತೈಲೇಶ್ವರ ಗಾಣಿಗರ ಮಹಾಸಂಸ್ಥಾನ ಮಠದ ಪ್ರಥಮ ಪೀಠಾಧಿಪತಿಯಾಗಿ ಪೂರ್ಣಾನಂದ ಪುರಿ ಸ್ವಾಮೀಜಿ ಅವರು ಜಯೇಂದ್ರ ಶ್ರೀಗಳಿಂದ ಪಟ್ಟಾಧಿಕಾರ ಸ್ವೀಕರಿಸಿದರು. ನೇಕಾರ ತೊಗಟವೀರ ಶ್ರೀಗಳು, ಬಸವ ರಮಾನಂದ ಶ್ರೀಗಳು, ಬಿ.ಎಸ್‌ಯಡಿಯೂರಪ್ಪ, ಪಿ.ಸಿ ಮೋಹನ್‌ ವಿ.ಆರ್‌ಸುದರ್ಶನ್‌ ಲಲಿತ್ ಶಾ ಗುಗಾಲಿಯ ಇದ್ದಾರೆ

ಪೂರ್ಣಾನಂದ ಪುರಿ ಸ್ವಾಮೀಜಿ ಪೀಠಾರೋಹಣ

ಪ್ರಜಾವಾಣಿ ವಾರ್ತೆ

ನೆಲಮಂಗಲ: ಶ್ರೀಕ್ಷೇತ್ರ ತೈಲೇಶ್ವರ ಗಾಣಿಗರ ಮಹಾಸಂಸ್ಥಾನ ಮಠವನ್ನು ಭಾನುವಾರ ಉದ್ಘಾಟಿಸಲಾಯಿತು. ಪೀಠದ ಪ್ರಥಮ ಗುರುಗಳಾದ ಪೂರ್ಣಾನಂದ ಪುರಿ ಸ್ವಾಮೀಜಿಯವರ ಪೀಠಾರೋಹಣ ನೆರವೇರಿತು. ಅವರಿಗೆ ರಾಜರಾಜೇಶ್ವರ ಮಠದ ಕೈಲಾಸಾಶ್ರಮದ ಜಯೇಂದ್ರಪುರಿ ಸ್ವಾಮೀಜಿ ಪಟ್ಟಾಧಿಕಾರ ನೆರವೇರಿಸಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಶಾಸಕ ಬಿ.ಎಸ್.ಯಡಿಯೂರಪ್ಪ, 'ಗಾಣಿಗ ಸಮಾಜದ ಉಳಿವಿಗೆ ಹಾಗೂ ಏಳಿಗೆಗಾಗಿ 2016ರಲ್ಲೇ ಈ ಮಠವು ಸ್ಥಾಪನೆಯಾಗಿದ್ದರೂ ಗುರುಗಳಿರಲಿಲ್ಲ. ನಾನು ಮುಖ್ಯಮಂತ್ರಿಯಾಗಿದ್ದಾಗ ರಾಜಕೀಯ ಕಾರ್ಯದರ್ಶಿಯಾಗಿ, ಯೋಜನಾ ಮಂಡಳಿ ಉಪಾಧ್ಯಕ್ಷರಾಗಿ ಪ್ರಾಮಾಣಿಕ ಸೇವೆ ಮಾಡಿದ್ದ ಬಿ.ಜೆ.ಪುಟ್ಟಸ್ವಾಮಿ ಅಧ್ಯಾತ್ಮದ ಕಡೆ ಮುಖ ಮಾಡಿದ್ದಾರೆ. ಪೂರ್ಣಾನಂದ ಪುರಿ ಶ್ರೀಗಳಾಗಿ ಪೀಠಾರೋಹಣ ಮಾಡಿ ಈ ಕೊರತೆ ನೀಗಿಸಿದ್ದಾರೆ. ಮಠ ಹೆಮ್ಮರವಾಗಲಿ. ಸಮಾಜದ ಸೇವೆಗೆ ಸದಾ ಶ್ರಮಿಸಲಿ' ಎಂದು ಹಾರೈಸಿದರು.

ಜಯೇಂದ್ರಪುರಿ ಸ್ವಾಮೀಜಿ, 'ಗಾಣಿಗರು ಎಣ್ಣೆಯನ್ನು ಕೊಟ್ಟಿದ್ದಾರೆ. ಘರ್ಷಣೆಯನ್ನು ತಡೆಯುವ ಎಣ್ಣೆಯಿಂದಾಗಿ ಯಂತ್ರ ಹಾಗೂ ವಾಹನ ಚಲಿಸುತ್ತದೆ. ಕಸುಬಿನಿಂದ ಗುರುತಿಸಿಕೊಂಡಿರುವ ಸಮಾಜ ಬಂಧವರು ಭಿನ್ನಾಭಿಪ್ರಾಯಗಳನ್ನು ತೊರೆಯಬೇಕು. ಗುರುವಿನ ಆಶೀರ್ವಾದ ಪಡೆದು ಅಭಿವೃದ್ಧಿ ಹೊಂದಬೇಕು' ಎಂದರು.

ನೇಕಾರ ತೊಗಟವೀರ ದಿವ್ಯಜ್ಞಾನಾನಂದ ಶ್ರೀ, 'ವ್ಯಕ್ತಿತ್ವ ಬೆಳೆಸಲು ಮಠ ಪ್ರಾರಂಭವಾಗಿದೆ. ಸಮುದಾಯದವರು ತಿಂಗಳ ಒಂದಷ್ಟು ಸಮಯವನ್ನು ಮಠದ ಸೇವೆಗೆ ಮೀಸಲಿಡಬೇಕು' ಎಂದರು.

ಗಾಣಿಗರ ಅಭಿವೃದ್ಧಿ ಮಂಡಳಿ ರಚಿಸಿ ಹೆಚ್ಚಿನ ಅನುದಾನ ನೀಡಬೇಕು ಎಂದು ಕಾಂಗ್ರೆಸ್ ಮುಖಂಡ ವಿ.ಆರ್. ಸುದರ್ಶನ್ ಒತ್ತಾಯಿಸಿದರು. 'ಈ ಬಗ್ಗೆ ಮುಖ್ಯಮಂತ್ರಿ ಅವರ ಜೊತೆ ಚರ್ಚಿಸುತ್ತೇನೆ' ಎಂದು ವಸತಿ ಸಚಿವ ವಿ.ಸೋಮಣ್ಣ ಭರವಸೆ ನೀಡಿದರು.

ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ, ಸಂಸದ ಪಿ.ಸಿ.ಮೋಹನ್, ಚಿಕ್ಕಬಳ್ಳಾಪುರ ಆದಿಚುಂಚನಗಿರಿ ಶಾಖಾ ಮಠದ ಮಂಗಳನಾಥ ಶ್ರೀ, ಶಿವಾನಂದಾಶ್ರಮದ ರಮಣಾನಂದಶ್ರೀ, ಮುಖಂಡರಾದ ಎಸ್.ಹರೀಶ್, ಜಿ.ಮರಿಸ್ವಾಮಿ, ಗುಜರಾತಿನ ಗಾಣಿಗ ಮುಖಂಡ ಲಲಿತ್ ಶಾ ಗುಗಾಲಿಯ, ಐಎಎಸ್ ಅಧಿಕಾರಿ ವಾಸಂತಿ ಅಮರ್, ವಕೀಲ ಡಿ.ಪ್ರಭಾಕರ್, ಮಂಜುನಾಥ್ ಪೂಂ, ಟ್ರಸ್ಟಿಗಳಾದ ರಂಗರಾಜು, ರಾಜಶೇಖರ್, ನರಸಿಂಹಯ್ಯ, ವರಸಿದ್ಧಿ ವೇಣುಗೋಪಾಲ್ ಇದ್ದರು.

ಗಾಣಿಗ ಜನಾಂಗಕ್ಕೆ ಪೀಠ ಸ್ಥಾಪಿಸುವ ಗುರಿ ಈಡೇರಿದೆ. ಇದಕ್ಕಾಗಿ ಬಹಳ ಶ್ರಮ ವಹಿಸಿದ್ದೇನೆ. ಸಹಕರಿಸಿದ ಯಡಿಯೂರಪ್ಪ ಅವರು ಪ್ರಾತಃಸ್ಮರಣೀಯರು

ಪೂರ್ಣಾನಂದ ಪುರಿ ಸ್ವಾಮೀಜಿ
ಶ್ರೀಕ್ಷೇತ್ರ ತೈಲೇಶ್ವರ ಗಾಣಿಗರ ಮಹಾಸಂಸ್ಥಾನ ಮಠ

ಯಲಹಂಕ: ಕರಗಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಇಲ್ಲಿನ ಇತಿಹಾಸ ಪ್ರಸಿದ್ಧ ವಹ್ನಿಕುಲ ಕ್ಷತ್ರಿಯ ಆರಾಧ್ಯದೇವಿ ಮಹೇಶ್ವರಮ್ಮನವರ ಕರಗ ಮಹೋತ್ಸವಕ್ಕೆ ಭಾನುವಾರ ಚಾಲನೆ ದೊರೆತಿದೆ. ಸೋಮವಾರ ಬೆಳಗಿನ ಜಾವ 4 ಗಂಟೆಗೆ ಹಸಿಕರಗ, ಮಂಗಳವಾರ ರಾತ್ರಿ 10 ಗಂಟೆಗೆ ಬಾಯಿಕಟ್ಟುವುದು ಹಾಗೂ ಆರತಿದೀಪಗಳ ಸಮೇತ ಅಗ್ನಿಕುಂಡ ಪ್ರವೇಶ ನೆರವೇರಲಿದೆ ಎಂದು ಎಂದು ವಹ್ನಿಕುಲ ಕ್ಷತ್ರಿಯ ಮಂಡಳಿಯ ಸಂಚಾಲಕ ಮು.ಕೃಷ್ಣಮೂರ್ತಿ ತಿಳಿಸಿದ್ದಾರೆ.

'ಬುಧವಾರ ರಾತ್ರಿ 12 ಗಂಟೆಗೆ ಮಹೇಶ್ವರಮ್ಮ ದೇವಿಯ ಹೂವಿನ ಕರಗ ಮಹೋತ್ಸವ ಮತ್ತು ಪಲ್ಲಕ್ಕಿ ಉತ್ಸವ ನಡೆಯಲಿದೆ. ಸುತ್ತಮುತ್ತಲಿನ ಗ್ರಾಮಗಳ 25 ದೇವರುಗಳ ಮುತ್ತಿನ ಪಲ್ಲಕ್ಕಿಗಳು ಉತ್ಸವದಲ್ಲಿ ಪಾಲ್ಗೊಳ್ಳಲಿವೆ' ಎಂದು ಅವರು ಮಾಹಿತಿ ನೀಡಿದ್ದಾರೆ.

ಉತ್ಸವದ ಪ್ರಯುಕ್ತ ಇಲ್ಲಿನ ಕೆರೆಯಲ್ಲಿರುವ ಕರಗ ಮಂಟಪವನ್ನು ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿದೆ. ಈ ಸಲ ಮುನಿರಾಜು ಅವರು ಕರಗವನ್ನು ಹೊರಲಿದ್ದಾರೆ. ಶಕ್ತಿದೇವತೆ ಮಹೇಶ್ವರಮ್ಮನವರ ಕರಗ, ಮನೆಗಳ ಮುಂಭಾಗಕ್ಕೆ ಬರುತ್ತಿದ್ದಂತೆ ಆರತಿ ಬೆಳಗಿ ಹೂವಿನ ಅರ್ಚನೆ ಮಾಡುವುದು ಇಲ್ಲಿನ ವಿಶೇಷ.

ವಿವಿಧೆಡೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ನೆಲದಡಿಯಲ್ಲಿ ಕಾಮಗಾರಿ ಕೈಗೊಂಡಿರುವುದರಿಂದ ನಗರದ ಮೇ 16ರಿಂದ 23ರವರೆಗೆ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ.

ಮೇ 16: ಪೃಥ್ವಿ ಬಡಾವಣೆ ಮತ್ತು ಇಸಿಸಿ ರಸ್ತೆ ವೈಟ್‌ಫೀಲ್ಡ್, **17:** ದಿನ್ನೂರು ಮುಖ್ಯ ರಸ್ತೆ, ಪ್ರಶಾಂತ ಬಡಾವಣೆ, ವೈಟ್‌ಫೀಲ್ಡ್, **18:** ಚೆನ್ನಸಂದ್ರ ಮುಖ್ಯ ರಸ್ತೆ, ಕೊರಲೂರು, ತಿಮ್ಮಶೆಟ್ಟಿಹಳ್ಳಿ, ಹೊಸಹಳ್ಳಿ, ಸೌಕ್ಯ ರಸ್ತೆ, ಹೇಮಾನಂದಹಳ್ಳಿ, ಕಾಡುಗೋಡಿ, ವರ್ತೂರು, ಬಳಗೆರೆ ರಸ್ತೆ, **19:** ಪ್ರಶಾಂತ ಬಡಾವಣೆ, ಉಪಕಾರ ಬಡಾವಣೆ, ಪೃಥ್ವಿ ಬಡಾವಣೆ, ಸ್ವಾಮಿ ವಿವೇಕಾನಂದ ರಸ್ತೆ, ವೈಟ್‌ಫೀಲ್ಡ್ ರಸ್ತೆ, ಇಸಿಸಿ ರಸ್ತೆ, **20:** ಯಲ್ಲಮ್ಮ ದೇವಾಲಯ ರಸ್ತೆ, **23:** ಪ್ರಶಾಂತ ಬಡಾವಣೆ, ವೈಟ್‌ಫೀಲ್ಡ್, ಗುಂಜೂರ್ ಮುಖ್ಯ ರಸ್ತೆ, ಗೋಕುಲ್ ಸರ್ಕಲ್ ರಸ್ತೆ, ವರ್ತೂರು.

ಇರಿತ: ತೃತೀಯ ಲಿಂಗಿ ಸಾವು

ಬೆಂಗಳೂರು: ಹಣದ ವಿಚಾರಕ್ಕೆ ನಡೆದ ಗಲಾಟೆಯಲ್ಲಿ ಯುವಕನೊಬ್ಬ ಚಾಕುವಿನಿಂದ ಇರಿದಿದ್ದರಿಂದ ಗಂಭೀರ ವಾಗಿ ಗಾಯಗೊಂಡಿದ್ದ ತೃತೀಯ ಲಿಂಗಿ ಅರ್ಚನಾ (25) ಚಿಕಿತ್ಸೆಗೆ ಸ್ಪಂದಿಸದೆ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.

'ಅರ್ಚನಾ ಹಾಗೂ ಸಂಜನಾ (30) ವಿಜಯನಗರದ ಮೂಡಲಪಾಳ್ಯದಲ್ಲಿ ನೆಲೆಸಿದ್ದರು. ಇವರು ಭಿಕ್ಷೆ ಬೇಡುತ್ತಿದ್ದರು. ಇದೇ 13ರ ರಾತ್ರಿ ಇವರಿಗೆ ಅಂಕಿತ್ ಕುಮಾರ್ (25) ಎಂಬಾತನ ಪರಿಚಯವಾಗಿತ್ತು. ಲೈಂಗಿಕ ಸಂಪರ್ಕದ ಉದ್ದೇಶದಿಂದ ಮೂವರೂ ಠಾಣಾ ವ್ಯಾಪ್ತಿಯ ಲಾಡ್ಜ್‌ವೊಂದಕ್ಕೆ ಹೋಗಿದ್ದರು. ಅಲ್ಲಿ ಹಣಕಾಸಿನ ವಿಚಾರಕ್ಕೆ ಗಲಾಟೆ ನಡೆದು ಪರಸ್ಪರ ಹೊಡೆದಾಡಿಕೊಂಡಿದ್ದರು' ಎಂದು ಕಾಟನ್‌ಪೇಟೆ ಠಾಣೆ ಪೊಲೀಸರು ಹೇಳಿದ್ದಾರೆ.

ನಗರದಲ್ಲಿ ಇಂದು

ಬೋಧಿ ಸಪ್ತಾಹ ಮತ್ತು ವೈಶಾಖ ಬುದ್ಧ ಪೂರ್ಣಿಮೆ: ಆಯೋಜನೆ ಮತ್ತು ಸ್ಥಳ–ಮಹಾಬೋಧಿ ಸೊಸೈಟಿ, ಗಾಂಧಿನಗರ, ಬೆಳಿಗ್ಗೆ 5ರಿಂದ

ಸಮಗ್ರ ಪೋಷಕಾಂಶಗಳ ನಿರ್ವಹಣೆಯ ಸರ್ಟಿಫಿಕೇಟ್ ಕೋರ್ಸ್ ಕಾರ್ಯಕ್ರಮ ಉದ್ಘಾಟನೆ: ಕೆ.ಸಿ. ನಾರಾಯಣಸ್ವಾಮಿ, ಅತಿಥಿಗಳು–ಸಿ.ಟಿ. ಸುಬ್ಬರಾಯಪ್ಪ, ಅಧ್ಯಕ್ಷತೆ–ಎನ್. ದೇವಕುಮಾರ್, ಆಯೋಜನೆ ಮತ್ತು ಸ್ಥಳ–ಕೃಷಿ ವಿಶ್ವವಿದ್ಯಾಲಯ, ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಮಾವೇಶ ಭವನ, ಜಿಕೆವಿಕೆ, ಬೆಳಿಗ್ಗೆ 11

ಬುದ್ಧ ಜಯಂತಿ: ಸಾಮೂಹಿಕ ಪ್ರಾರ್ಥನೆ–ಪೂಜ್ಯ ಬಿಕ್ಕುಣಿ ಬುದ್ಧಮ್ಮ ಮತ್ತು ಭಿಕ್ಕು ಸಂಘ, ಪ್ರವಚನ–ಎಚ್. ಆರ್.ಸುರೇಂದ್ರ, ಅತಿಥಿ–ಮಲ್ಲಿಕಾರ್ಜುನ ಭಾಲ್ಕಿ, ಉದ್ಘಾಟನೆ–ಎಂ.ವೆಂಕಟಸ್ವಾಮಿ, ಆಯೋಜನೆ–ವಿಶ್ವ ಬುದ್ಧ ಧಮ್ಮ ಸಂಘ, ಸ್ಥಳ–ನಾಗಸೇನಾ ಬುದ್ಧವಿಹಾರ, ಸದಾಶಿವನಗರ, ಬೆಳಿಗ್ಗೆ 11

ಮಿನಿ ಒಲಿಂಪಿಕ್ ಕ್ರೀಡಾಕೂಟ–2022 ಉದ್ಘಾಟನೆ: ಅತಿಥಿಗಳು–ರಾಜ್ಯಪಾಲ ಥಾವರಚಂದ್ ಗೆಹಲೋತ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವ ಕೆ.ಸಿ.ನಾರಾಯಣ ಗೌಡ, ಅಧ್ಯಕ್ಷತೆ–ರಿಜ್ವಾನ್ ಅರ್ಷದ್, ಸ್ಥಳ–ಕಂಠೀರವ ಹೊರಾಂಗಣ ಕ್ರೀಡಾಂಗಣ, ಸಂಜೆ 5

ನಟಿ ಪೂರ್ಣಿಮಾ ಸುರೇಶ್ ಅವರಿಂದ 'ಸತ್ಯನಾಪುರದ ಸಿರಿ' ಏಕವ್ಯಕ್ತಿ ನಾಟಕ ಪ್ರದರ್ಶನ: ಆಯೋಜನೆ ಮತ್ತು ಸ್ಥಳ–ಕಪ್ಪಣ್ಣ ಅಂಗಳ, ಜೆ.ಪಿ. ನಗರ, ಸಂಜೆ 6.30

'159ನೇ ಹುಣ್ಣಿಮೆ ಹಾಡು': ಝೇಂಕಾರ ಗಾನ ಸಂಭ್ರಮ–ಪಂಡಿತ್ ಬಸವರಾಜ ಮುಗಳಖೋಡ ಮತ್ತು ತಂಡ, ಅಭಿನಂದನೆ–ಲೀಲಾ ಸಂಪಿಗೆ, ಅತಿಥಿಗಳು– ಬಿ.ಕೆ.ಶಿವರಾಂ, ಆಯೋಜನೆ–ಕಾಡುಮಲ್ಲೇಶ್ವರ ಗೆಳೆಯರ ಬಳಗ, ಸ್ಥಳ–ಕಾಡುಮಲ್ಲೇಶ್ವರ ಬಯಲು ರಂಗಮಂದಿರ, ಮಲ್ಲೇಶ್ವರ, ಸಂಜೆ 6.30

Govt. of Uttarakhand

ಚಾರ್ಧಾಮ ಯಾತ್ರೆ, ನಂಬಿಕೆಯ ವಾಸಸ್ಥಾನ

ಮತ್ತು ಭಕ್ತಿಯು ತನ್ನ ಎಲ್ಲಾ ಭಕ್ತರನ್ನು ಸ್ವಾಗತಿಸುತ್ತದೆ



ನರೇಂದ್ರ ಮೋದಿ
ಪ್ರಧಾನ ಮಂತ್ರಿಗಳು

2022 ಇಸವಿಯ ಚಾರ್ಧಾಮದ ಯಾತ್ರೆಯ ಎಲ್ಲಾ ಪ್ರಯಾಣಿಕರಿಗೆ ಕೆಲವು ಸಲಹೆಗಳು

ಚಾರ್ಧಾಮ ಯಾತ್ರೆಯ ಎಲ್ಲಾ ಧಾರ್ಮಿಕ ಸ್ಥಳಗಳು ಎತ್ತರದ ಹಿಮಾಲಯ ಪ್ರದೇಶಗಳಲ್ಲಿ ನೆಲೆಗೊಂಡಿವೆ. ಇವುಗಳ ಎತ್ತರವು ಸಮುದ್ರ ಮಟ್ಟದಿಂದ ಸುಮಾರು 2700 ಮೀಟರ್‌ಗಿಂತ ಹೆಚ್ಚು. ಈ ಕಾರಣದಿಂದಾಗಿ, ಭಕ್ತರು ಹೆಚ್ಚಿನ ಶೀತ, ಕಡಿಮೆ ಆರ್ದ್ರತೆ, ಅತಿಯಾದ ನೇರಳಾತೀತ ವಿಕಿರಣಗಳು, ಕಡಿಮೆ ಗಾಳಿಯ ಒತ್ತಡ ಮತ್ತು ಉಸಿರಾಡಲು ಆಮ್ಲಜನಕದ ಕಡಿಮೆ ಮಟ್ಟದಿಂದ ಬಳಲಬಹುದು. ಆದ್ದರಿಂದ, ಸುರಕ್ಷಿತ ಮತ್ತು ಅನುಕೂಲಕರ ಪ್ರಯಾಣಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರೂ ಈ ಕೆಳಗಿನ ಸೂಚನೆಗಳಿಗೆ ಬದ್ಧರಾಗಿ ತಪ್ಪದೆ ಪಾಲಿಸಬೇಕು.

- ನಿಗದಿತ ಆರೋಗ್ಯ ಪರೀಕ್ಷೆಗಳನ್ನು ಮಾಡಿಸಿಕೊಂಡು, ಸೂಕ್ತ ಅನಿಸಿದ ನಂತರವೇ ನಿಮ್ಮ ಪ್ರಯಾಣವನ್ನು ಪ್ರಾರಂಭಿಸಬೇಕು.
- ಈಗಾಗಲೇ ಇರುವ ಕಾಯಿಲೆಗಳಿಗೆ ಜನರು ಔಷಧಿಗಳ ಜೊತೆಗೆ ವೈದ್ಯರ ಸಮಾಲೋಚನಾ ಚೀಟಿಗಳು ಮತ್ತು ಅವರ ಸಂಪರ್ಕ ಸಂಖ್ಯೆಯನ್ನು ತಮ್ಮೊಂದಿಗೆ ಇಟ್ಟುಕೊಳ್ಳಲು ಸೂಚಿಸಲಾಗಿದೆ.
- ವಯಸ್ಸಾದವರು,ಈ ಹಿಂದೆ ಕೋವಿಡ್ ಅಥವಾ ಇತರೇ ಇನ್ನಾವುದೇ ಗಂಭೀರ ಕಾಯಿಲೆಗಳಿಂದ ಬಳಲುತ್ತಿರುವವರು ಪ್ರಯಾಣವನ್ನು ಮಾಡಬಾರದು ಅಥವಾ ಪ್ರಯಾಣದ ದಿನಾಂಕವನ್ನು ಮುಂದೂಡುವ ಆಯ್ಕೆಯನ್ನು ಪರಿಗಣಿಸಬೇಕು.
- ಯಾತ್ರಾ ಸ್ಥಳವನ್ನು ತಲುಪುವ ಒಂದು ದಿನದ ಮೊದಲು ವಿಶ್ರಾಂತಿಯನ್ನು ಸೂಚಿಸಲಾಗಿದೆ.
- ಬೆಚ್ಚಗಿನ ಮತ್ತು ಉಣ್ಣೆಯ ಬಟ್ಟೆಗಳನ್ನು ತಮ್ಮೊಂದಿಗೆ ತೆಗೆದುಕೊಂಡು ಹೋಗಲು ಜನರಿಗೆ ಸೂಚಿಸಲಾಗಿದೆ.
- ಹೃದಯ ತೊಂದರೆ, ಉಸಿರಾಟದ ತೊಂದರೆ, ಸಕ್ಕರೆ ಕಾಯಿಲೆ ಅಥವಾ ಅಧಿಕ ರಕ್ತದೊತ್ತಡದ ಸಮಸ್ಯೆಗಳಿಂದ ಬಳಲುತ್ತಿರುವ ಜನರು ಪ್ರಯಾಣದ ಸಮಯದಲ್ಲಿ ಹೆಚ್ಚಿನ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳಬೇಕೆಂದು ಸೂಚಿಸಲಾಗಿದೆ.
- ತಲೆನೋವು, ತಲೆ ಸುತ್ತುವುದು, ಭಯ ಅನಿಸುವುದು, ಹೃದಯ ಬಡಿತ ಹೆಚ್ಚುವುದು, ವಾಕರಿಕೆ, ಕೈ–ಕಾಲುಗಳ ಜೊತೆ ತುಟಿಗಳು ನೀಲಿ ಬಣ್ಣಕ್ಕೆ ತಿರುಗುವುದು, ಸುಸ್ತು, ಉಸಿರುಗಟ್ಟಿದಂತಾಗುವುದು, ಕೆಮ್ಮು ಅಥವಾ ಇತರೇ ಇನ್ನಾವುದೇ ಲಕ್ಷಣಗಳು ಕಂಡು ಬಂದಲ್ಲಿ ಹತ್ತಿರದ ಆರೋಗ್ಯ ಕೇಂದ್ರವನ್ನು ಸಂಪರ್ಕಿಸಬೇಕು ಅಥವಾ ಸಹಾಯವಾಣಿ ಸಂಖ್ಯೆ 104 ಕ್ಕೆ ಕರೆ ಮಾಡಬೇಕು.
- ಪ್ರಯಾಣ ಮಾಡುವಾಗ ಧೂಮಪಾನ ಅಥವಾ ಮದ್ಯಪಾನ ಮಾಡಬಾರದು.
- ಹಾನಿಕಾರಕ ಸೂರ್ಯನ ಕಿರಣಗಳಿಂದ ನಿಮ್ಮನ್ನು ನೀವು ರಕ್ಷಿಸಿಕೊಳ್ಳಲು SPF–50 ಇರುವ ಸನ್‌ಸ್ಕ್ರೀನ್ ಕ್ರೀಂಗಳನ್ನು ಬಳಸಲು ಸೂಚಿಸಲಾಗಿದೆ.
- ಹಾನಿಕಾರಕ ಯುವಿ ಕಿರಣಗಳಿಂದ ನಿಮ್ಮ ಕಣ್ಣುಗಳನ್ನು ರಕ್ಷಿಸಲು ಕನ್ನಡಕ ಬಳಸಲು ಸೂಚಿಸಲಾಗಿದೆ.
- ಆಗಾಗ್ಗೆ ನೀರು ಕುಡಿಯಲು ಮತ್ತು ನಿಯಮಿತವಾಗಿ ಆಹಾರವನ್ನು ಸೇವಿಸಲು ಸೂಚಿಸಲಾಗಿದೆ.
- ದೂರ ನಡೆಯುವಾಗ, ನಡುವೆ ವಿಶ್ರಾಂತಿ ತೆಗೆದುಕೊಳ್ಳಲು ಸೂಚಿಸಲಾಗಿದೆ.
- ಸಮುದ್ರ ಮಟ್ಟದಿಂದ ಎತ್ತರದಲ್ಲಿರುವಾಗ ವ್ಯಾಯಾಮ ಮಾಡುವುದನ್ನು ತಪ್ಪಿಸಲು ಸೂಚಿಸಲಾಗಿದೆ.
- ಆರೋಗ್ಯ ಸೇವೆಗಾಗಿ ಸಹಾಯವಾಣಿ ಸಂಖ್ಯೆ 104ಕ್ಕೆ ಮತ್ತು ಆಂಬ್ಯುಲೆನ್ಸ್ ಸೇವೆಗಾಗಿ ಸಹಾಯವಾಣಿ ಸಂಖ್ಯೆ 108ಕ್ಕೆ ಸಂಪರ್ಕಿಸಲು ಸೂಚಿಸಲಾಗಿದೆ.

"ಅಕ್ಷಯ ತೃತೀಯದ ಈ ಪುಣ್ಯ ಸುಸಂದರ್ಭಕ್ಕೆ, ದೇವಭೂಮಿಯಲ್ಲಿ ಪೂಜ್ಯ ಚಾರ್ಧಾಮ ಯಾತ್ರೆಯ ಬಾಗಿಲುಗಳನ್ನು ಈ ವರ್ಷ ಮೇ 3 ರಂದು ತೆರೆಯಲಾಯಿತು. ಈ ಹಿನ್ನೆಲೆಯಲ್ಲಿ, ಭಕ್ತರ ಬೇಕು–ಬೇಡಗಳನ್ನು ಅರಿತು ನೋಡಿಕೊಳ್ಳಲು ನಮ್ಮ ಸರ್ಕಾರವು ಸೂಕ್ತ ದಿಕ್ಕಿನಲ್ಲಿ ಮಹತ್ವದ ನಿರ್ಧಾರಗಳನ್ನು ಮಾಡಿಕೊಂಡಿದೆ. ಹೆಚ್ಚುತ್ತಿರುವ ಭಕ್ತರ ಸಂಖ್ಯೆ ಮತ್ತು ನೂಕುನುಗ್ಗಲನ್ನು ಗಣನೆಗೆ ತೆಗೆದುಕೊಂಡು, ಯಾತ್ರೆಯ ಸ್ಥಳ ತಲುಪುವ ಮೊದಲು ಕಡ್ಡಾಯವಾಗಿ https://registrationandtouristcare.uk.gov.in ನಲ್ಲಿ ನೋಂದಾಯಿಸಿಕೊಳ್ಳಬೇಕು ಎಂದು ಎಲ್ಲಾ ಆತ್ಮೀಯ ಭಕ್ತರಿಗೆ ನಮ್ಮ ಸರ್ಕಾರ ವಿನಮ್ರವಾಗಿ ಮನವಿ ಮಾಡಿಕೊಳ್ಳುತ್ತದೆ. ನಿಮ್ಮ ಯಾತ್ರೆಯ ಪ್ರಯಾಣವನ್ನು ಸುರಕ್ಷಿತವಾಗಿ ಮತ್ತು ಸ್ಮರಣೀಯವಾಗಿಸಲು, ಉತ್ತರಾಖಂಡ ಸರ್ಕಾರವು ಪ್ರತಿದಿನ ಭೇಟಿ ನೀಡುವ ಭಕ್ತರ ಸಂಖ್ಯೆಗೆ ಮಿತಿಯನ್ನು ನಿಗದಿಪಡಿಸಿದೆ. ಆದ್ದರಿಂದ ನೀವು ಪ್ರಯಾಣವನ್ನು ಆರಂಭಿಸುವ ಮುನ್ನ ಭೇಟಿ ಸಮಯದ ಲಭ್ಯತೆಗಾಗಿ ಪರಿಶೀಲಿಸಿಕೊಳ್ಳಿ, ಇದು ನಮ್ಮ ಪ್ರಾಮಾಣಿಕ ವಿನಂತಿಯಾಗಿದೆ. ಅತೀ ಎತ್ತರ, ತುಂಬಾ ತಣ್ಣನೆಯ ವಾತಾವರಣ ಮತ್ತು ಕಡಿಮೆ ಆಮ್ಲಜನಕ ದೊರೆಯುವ ಮಟ್ಟ ಆಗಿರುವುದರಿಂದ ಉಸಿರಾಟಕ್ಕೆ ಅಡಚಣೆ ಮತ್ತು ಹೃದಯ ಸಂಬಂಧಿ ತೊಂದರೆಗಳು ಕಾಣಿಸಿಕೊಂಡು ಪ್ರಯಾಣದಲ್ಲಿ ನಾನಾ ಅನಾನುಕೂಲತೆಗಳು ಎದುರಾಗುವ ಸಾಧ್ಯತೆ ಇರುವ ಕಾರಣ ವೃದ್ಧರು ಮತ್ತು ಮಕ್ಕಳು ಅಗತ್ಯವಾದ ಆರೋಗ್ಯ ಪರೀಕ್ಷೆಗಳನ್ನು ಮೊದಲೇ ಮಾಡಿಸಿಕೊಳ್ಳಬೇಕೆಂಬ ಅಂಶವನ್ನು ಭಕ್ತರು ವಿಶೇಷವಾಗಿ ಗಮನದಲ್ಲಿಟ್ಟುಕೊಳ್ಳಬೇಕು. ಈ ಯಾತ್ರೆಯನ್ನು ಸುಗಮವಾಗಿ ಪೂರ್ಣಗೊಳಿಸಲು ನಮ್ಮ ಇಲ್ಲಿನ ಅಧಿಕಾರಿಗಳೊಂದಿಗೆ ಸಹಕರಿಸಬೇಕೆಂದು ನಾವು ಈ ಮೂಲಕ ವಿನಂತಿಸಿಕೊಳ್ಳುತ್ತೇವೆ. ಉತ್ತರಾಖಂಡ ಸರ್ಕಾರವು ಪ್ರತಿ ಹಂತದಲ್ಲೂ ನಿಮ್ಮೊಂದಿಗಿದ್ದು ನಿಮ್ಮನ್ನು ಸ್ವಾಗತಿಸಲು ಮತ್ತು ನಿಮ್ಮ ಸೇವೆ ಮಾಡಲು ಯಾವಾಗಲೂ ಬದ್ಧವಾಗಿರುತ್ತದೆ."

ಪುಷ್ಕರ್ ಸಿಂಗ್ ಧಾಮಿ
ಮುಖ್ಯಮಂತ್ರಿ, ಉತ್ತರಾಖಂಡ ಸರ್ಕಾರ

Information & Public Relations Department, Issued in Public Interest by Uttarakhand | uttarakhandtourism.gov.in

Helpline No. 0135-2559898, 2552627, 3520100, Toll Free No. 1364, Other Estates +91 135 1364, Time-7.00 AM to 9.00 PM

ಗಂಡನ ಜೊತೆ ಜಗಳ: ಕೆರೆಗಿಳಿದ ಪತ್ನಿ

ಬೆಂಗಳೂರು: ವಾಯುವಿಹಾರಕ್ಕೆ ಹೋಗಿದ್ದ ವೇಳೆ ಕ್ಷುಲ್ಲಕ ಕಾರಣಕ್ಕೆ ಗಂಡನ ಜೊತೆ ಜಗಳ ಮಾಡಿಕೊಂಡ ಮಹಿಳೆಯೊಬ್ಬರು ಸಾಯುತ್ತೇನೆಂದು ಹೇಳಿ ಕೆರೆಯ ಮಧ್ಯಭಾಗಕ್ಕೆ ಹೋಗಿ ನಿಂತಿದ್ದ ಪ್ರಸಂಗ ಕೋರಮಂಗಲದಲ್ಲಿ ಭಾನುವಾರ ನಡೆದಿದೆ.

ಕೋರಮಂಗಲದ 3ನೇ ಬ್ಲಾಕ್‌ನಲ್ಲಿರುವ ಕೆರೆಯಲ್ಲಿ ಮಹಿಳೆ ನಿಂತಿರುವುದನ್ನು ಕಂಡು ಗಾಬರಿಯಾದ ನಾಗರಿಕರು ಆಕೆಯ ಮನವೊಲಿಸಲು ಪ್ರಯತ್ನಿಸಿದ್ದಾರೆ. ಮೇಲೆ ಬರುವಂತೆ ಗೋಗರೆದರೂ ಕೇಳದ ಆಕೆ 'ನೀರಿನಲ್ಲಿ ಮುಳುಗಿ ಪ್ರಾಣ ಬಿಡುತ್ತೇನೆ' ಎಂದು ಬೆದರಿಸಿದ್ದಾರೆ. ಇದರಿಂದ ಬೇಸತ್ತ ನಾಗರಿಕರು ಕೋರಮಂಗಲ ಪೊಲೀಸ್ ಠಾಣೆಗೆ ಕರೆಮಾಡಿ ಮಾಹಿತಿ ಮುಟ್ಟಿಸಿದ್ದಾರೆ. 'ನಾವು ಎಷ್ಟೇ ಬೇಡಿದರೂ ಆಕೆ ದಡಕ್ಕೆ ಬರಲು ಒಪ್ಪಲಿಲ್ಲ. ರಕ್ಷಣೆ ಮಾಡಲು ಬಂದರೆ ಆಳವಾದ ಜಾಗಕ್ಕೆ ಹೋಗುತ್ತೇನೆ ಎಂದು ಹೆದರಿಸಿದಳು. ಆಕೆಯ ರಂಪಾಟದಿಂದ ಬೇಸತ್ತು ಪೊಲೀಸರಿಗೆ ಕರೆಮಾಡಿ ವಿಷಯ ತಿಳಿಸಿದೆವು. ಅವರು ಬಂದು ಆಕೆಯ ಮನವೊಲಿಸಿ ಮೇಲಕ್ಕೆ ಕರೆತಂದರು' ಎಂದು ಸ್ಥಳೀಯರೊಬ್ಬರು ಹೇಳಿದ್ದಾರೆ.

ಬೆಂಗಳೂರು ಕಿರುನಾಟಕೋತ್ಸವ • ಅಂತಿಮ ಸ್ಪರ್ಧೆಯಲ್ಲಿ 6 ನಾಟಕ ಪ್ರದರ್ಶನ

ಅತ್ಯುತ್ತಮ ನಾಟಕ ಪ್ರಶಸ್ತಿ ಗೆದ್ದ 'ವಿದಗ್ಧೆ'

ಪ್ರಜಾವಾಣಿ ವಾರ್ತೆ

'ವಿದಗ್ಧೆ' ನಾಟಕ ಪ್ರದರ್ಶಿಸಿದ ಬೆಂಗಳೂರು ಥಿಯೇಟರ್ ಎನ್ಸೆಂಬಲ್ ತಂಡಕ್ಕೆ ಅತ್ಯುತ್ತಮ ನಾಟಕ ಪ್ರಶಸ್ತಿ ಪ್ರದಾನ ಮಾಡಲಾಯಿತು. ಎಂ.ಎಸ್.ವಿದ್ಯಾ, ಶ್ರೀಪಾದ ಭಟ್, ಅಭಿಷೇಕ್ ಅಯ್ಯಂಗಾರ್ ಇದ್ದಾರೆ –ಪ್ರಜಾವಾಣಿ ಚಿತ್ರ

ಮುಖ್ಯಾಂಶಗಳು

- 'ಪ್ರಜಾವಾಣಿ' ಸಹಯೋಗ, ಪೆಂಟಗಾನ್ ಸ್ಪೇಸ್ ಸಂಸ್ಥೆ ಪ್ರಾಯೋಜಕತ್ವ
- 'ಸಹನೆ' ವಿಷಯದಡಿ ಸ್ಪರ್ಧೆ

ಬೆಂಗಳೂರು: ಪ್ರವರ ಥಿಯೇಟರ್ ಮತ್ತು ಅಶ್ವಘೋಷ ಥಿಯೇಟರ್ ಟ್ರಸ್ಟ್‌ನ ಜಂಟಿ ಆಶ್ರಯದಲ್ಲಿ ಭಾನುವಾರ ನಡೆದ 'ಬೆಂಗಳೂರು ಕಿರುನಾಟಕೋತ್ಸವ'ದ (ಬಿಎಸ್‌ಪಿಎಫ್) ಅಂತಿಮ ಸುತ್ತಿನ ಸ್ಪರ್ಧೆಯಲ್ಲಿ ಬೆಂಗಳೂರು ಥಿಯೇಟರ್ ಎನ್ಸೆಂಬಲ್ ತಂಡದ 'ವಿದಗ್ಧೆ' ನಾಟಕ 'ಅತ್ಯುತ್ತಮ ನಾಟಕ ಪ್ರಶಸ್ತಿ' ಮುಡಿಗೇರಿಸಿಕೊಂಡಿತು.

'ಪ್ರಜಾವಾಣಿ' ಸಹಯೋಗದಲ್ಲಿ ಹಾಗೂ ಪೆಂಟಗಾನ್ ಸ್ಪೇಸ್ ಸಂಸ್ಥೆಯ ಪ್ರಾಯೋಜಕತ್ವದಲ್ಲಿ ನಡೆದ ಅಂತಿಮ ಸುತ್ತಿನಲ್ಲಿ ಒಟ್ಟು ಆರು ನಾಟಕಗಳು ಪ್ರದರ್ಶನಗೊಂಡವು. ಸ್ಪರ್ಧೆಯ ಮೊದಲ ಹಂತದಲ್ಲಿ ಭಾಗವಹಿಸಿದ್ದ 15 ತಂಡಗಳ ಪೈಕಿ ಆರು ನಾಟಕಗಳು ಅಂತಿಮ ಸುತ್ತಿನ ಸ್ಪರ್ಧೆಗೆ ಆಯ್ಕೆಯಾಗಿದ್ದವು.

ಅಭಿಮನ್ಯು ಭೂಪತಿ ನಿರ್ದೇಶನ ಮತ್ತು ರೋಹಿತ್ ರಚನೆಯಲ್ಲಿ ಮೂಡಿಬಂದ 'ವಿದಗ್ಧೆ' ನಾಟಕದ ಮೂಲಕ, ಮಾನಸಿಕವಾಗಿ ಹೆಂಡತಿಯಿಂದ ದೂರ ಉಳಿಯಲು ಪುಸ್ತಕ ಲೋಕದಲ್ಲಿ ಮುಳುಗಿರುವ ಯುವ ಲೇಖಕನೊಬ್ಬನ ಚಿತ್ರಣವನ್ನು ಕಟ್ಟಿಕೊಟ್ಟಿತು. ತಾನು ರಚಿಸಿದ ಕಥೆಯಲ್ಲಿನ 'ಮಹಾಪುರುಷ'ರ ಪತ್ನಿಯರ ಪಾತ್ರಗಳೇ ಜೀವ ತಾಳಿ, ತಮ್ಮ ವೇದನೆಗಳನ್ನು ತಿಳಿಸುತ್ತಾ ಲೇಖಕನನ್ನು ಪ್ರಶ್ನಿಸುತ್ತವೆ. ಪಿ.ಡಿ. ಸತೀಶ್ ಚಂದ್ರ ನಿರ್ದೇಶನದಲ್ಲಿ 'ಪ್ರಕಸಂ' ತಂಡ ಪ್ರದರ್ಶಿಸಿದ 'ಸಹನ ಮೂರ್ತಿ' ನಾಟಕದ ಹಾಸ್ಯ ಪ್ರಸಂಗಗಳು ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಿಸಿದವು.

ಪೌರಕಾರ್ಮಿಕರ ಸಹನೆ, ನೋವು, ಸಂಕಟಗಳನ್ನು ತೆರೆದಿಟ್ಟ ರಂಗ ಚಿರಂತನ ತಂಡದ 'ನಗರ ಪೂಜೆ' ನಾಟಕವು ಸಭಾಂಗಣದಲ್ಲಿ ನೆರೆದಿದ್ದವರನ್ನು ಮೂಕವಿಸ್ಮಿತರನ್ನಾಗಿಮಾಡಿತು.

ಕಲಾಕದಂಬ ಆರ್ಟ್ ಸೆಂಟರ್ ಪ್ರಸ್ತುತ ಪಡಿಸಿದ 'ಕ್ಷಮ' ನಾಟಕವು ತಮ್ಮ ಖುಷಿಯನ್ನು ತ್ಯಾಗ ಮಾಡಿ ತಾಳ್ಮೆಯನ್ನೇ ಮನೆ ಮಾಡಿಕೊಳ್ಳುವ ಮಹಿಳೆಯರ ಬದುಕನ್ನು ಚಿತ್ರಿಸಿತು.

ಅಂತರಂಗ ಬಹಿರಂಗ ತಂಡದ 'ಸಾಕ್ಷಾತ್ಕಾರ' ನಾಟಕ ಸಹಾಯ ಗುಣವನ್ನೇ ಜೀವವಾಗಿಸಿಕೊಂಡಿದ್ದ ಕುಟುಂಬವೊಂದರ ಕಥೆಯನ್ನು ತೆರೆದಿಟ್ಟಿತು. ಮಣ್ಣು ತಂಡದ 'ಅನಾಹುತ' ನಾಟಕವು ಸಹನೆ ಮತ್ತು ಅಧಿಕಾರದ ನಡುವಿನ ಸಂಬಂಧವನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿತು.

ತೀರ್ಪುಗಾರರು ಹಾಗೂ ಪ್ರೇಕ್ಷಕರಿಂದ ಆಯ್ಕೆಯಾದ ಎರಡು ನಾಟಕಗಳಿಗೆ ₹10 ಸಾವಿರ ನಗದು ಒಳಗೊಂಡಅತ್ಯುತ್ತಮ ನಾಟಕ ಪ್ರಶಸ್ತಿ, ತಲಾ ₹3 ಸಾವಿರ ನಗದು ಒಳಗೊಂಡ 'ಅತ್ಯುತ್ತಮ ವಿನ್ಯಾಸ' ಪ್ರಶಸ್ತಿ ಹಾಗೂ 'ಅತ್ಯುತ್ತಮ ಕಥೆ' ಸೇರಿದಂತೆ ವಿವಿಧ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು.

ಲೇಖಕಿ ಎಂ.ಎಸ್.ವಿದ್ಯಾ, ರಂಗ ನಿರ್ದೇಶಕ ಶ್ರೀಪಾದ ಭಟ್, ಬರಹಗಾರ ಅಭಿಷೇಕ್ ಅಯ್ಯಂಗಾರ್ ಸ್ಪರ್ಧೆಯ ತೀರ್ಪುಗಾರರಾಗಿದ್ದರು. ಅತಿಥಿಗಳಾಗಿ ಪೆಂಟಗಾನ್ ಸ್ಪೇಸ್ ಸಂಸ್ಥೆಯ ಸಂಸ್ಥಾಪಕ ರವಿಶಂಕರ್ ಆರಾಧ್ಯ, 'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ನಟಿ ಸುಮನ್ ನಗರ್ಕರ್ ಸೇರಿದಂತೆ ಹಲವರು ಭಾಗವಹಿಸಿದ್ದರು.

ಬೆಂಗಳೂರು ಕಿರುನಾಟಕೋತ್ಸವ ಪ್ರಶಸ್ತಿಗಳು

- ಅತ್ಯುತ್ತಮ ನಾಟಕ (ಪ್ರೇಕ್ಷಕರ ಆಯ್ಕೆ)–ಕ್ಷಮ (ಕಲಾ ಕದಂಬ ಆರ್ಟ್ ಸೆಂಟರ್)
- 'ಸಂಚಾರಿ ವಿಜಯ್' ಗೌರವಾರ್ಥ ಅತ್ಯುತ್ತಮ ನಟ–ಶ್ರೀಹರಿ ಕಶ್ಯಪ್ (ಸಹನ ಮೂರ್ತಿ)
- ಅತ್ಯುತ್ತಮ ನಟಿ–ಪ್ರತ್ಯಕ್ಷ (ನಗರ ಪೂಜೆ)
- ಅತ್ಯುತ್ತಮ ವಿನ್ಯಾಸ–ಪಿ.ಡಿ.ಸತೀಶ್ ಚಂದ್ರ (ಸಹನ ಮೂರ್ತಿ)
- ಅತ್ಯುತ್ತಮ ನಿರ್ದೇಶನ–ತೇಜಸ್ ಗೌಡ (ಕ್ಷಮ)
- ಅತ್ಯುತ್ತಮ ಕಥೆ (ಸ್ವರಚಿತ)–ಬೇಲೂರು ರಘುನಂದನ್ (ನಗರ ಪೂಜೆ)
- ಅತ್ಯುತ್ತಮ ಭಿತ್ತಿಚಿತ್ರ ವಿನ್ಯಾಸ–ನಿಹಾಲ್ ರಾಜ್ (ವಿದಗ್ಧೆ)

ಸುದ್ದಿ 2 ನಿಮಿಷ

ರೌಡಿ 'ಬಾಂಡ್' ಬಂಧನ

ಬೆಂಗಳೂರು: ಕಾಡುಗೊಂಡನಹಳ್ಳಿ (ಕೆ.ಜಿ.ಹಳ್ಳಿ) ಪೊಲೀಸ್ ಠಾಣೆಯ ರೌಡಿಶೀಟರ್ ಸೈಯದ್ ಮಾಜ್ ಅಲಿಯಾಸ್ ಬಾಂಡ್ (20) ಎಂಬಾತನನ್ನು ಸಿಸಿಬಿ ಪೊಲೀಸರು ಗೂಂಡಾ ಕಾಯ್ದೆಯಡಿ ಬಂಧಿಸಿದ್ದಾರೆ.

'ಕೆ.ಜಿ.ಹಳ್ಳಿಯ ವಿನೋಬಾನಗರ ನಿವಾಸಿಯಾಗಿರುವ ಆರೋಪಿಯು 2019ರಿಂದ 2022ರ ಫೆಬ್ರುವರಿ ಅವಧಿಯಲ್ಲಿ ಒಟ್ಟು 11 ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿದ್ದ. ಈತನ ವಿರುದ್ಧ ಒಟ್ಟು ಆರು ಪೊಲೀಸ್ ಠಾಣೆಗಳಲ್ಲಿ ಪ್ರಕರಣ ದಾಖಲಾಗಿತ್ತು. ಜಾಮೀನಿನ ಮೇಲೆ ಜೈಲಿನಿಂದ ಬಿಡುಗಡೆಯಾದ ನಂತರವೂ ಈತ ಅಪರಾಧ ಕೃತ್ಯಗಳನ್ನು ಮುಂದುವರಿಸಿದ್ದ' ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

'ಆರೋಪಿಯು ಗಾಂಜಾ ಮಾರಾಟ ಮಾಡುವುದನ್ನೇ ಕಸುಬು ಮಾಡಿಕೊಂಡಿದ್ದ. ಸಹಚರರ ಜೊತೆ ಸೇರಿ ಮಾರಕಾಸ್ತ್ರಗಳಿಂದ ನಾಗರಿಕರನ್ನು ಬೆದರಿಸಿ ಸುಲಿಗೆ ಮಾಡುತ್ತಿದ್ದ. ಸಮಾಜದಲ್ಲಿ ಶಾಂತಿ ಕದಡಲು ಪ್ರಯತ್ನಿಸುತ್ತಿದ್ದ. ಹೀಗಾಗಿ ಈತನನ್ನು ಒಂದು ವರ್ಷದವರೆಗೂ ಬಂಧನದಲ್ಲಿಡಲು ನಗರ ಪೊಲೀಸ್ ಕಮಿಷನರ್ ಆದೇಶಿಸಿದ್ದಾರೆ' ಎಂದು ಮಾಹಿತಿ ನೀಡಿದ್ದಾರೆ.

ಗಾಂಜಾ ಜಪ್ತಿ: ಪೆಡ್ಲರ್ ಬಂಧನ

ಬೆಂಗಳೂರು: ಹೊರ ರಾಜ್ಯಗಳಿಂದ ಕಡಿಮೆ ಬೆಲೆಗೆ ಗಾಂಜಾ ಖರೀದಿಸಿ ತಂದು ನಗರದಲ್ಲಿ ಮಾರಾಟ ಮಾಡುತ್ತಿದ್ದ ಪೆಡ್ಲರ್‌ನನ್ನು ಸಿಸಿಬಿ ಮಾದಕ ದ್ರವ್ಯ ನಿಗ್ರಹ ದಳದ ಅಧಿಕಾರಿಗಳು ಬಂಧಿಸಿದ್ದಾರೆ.

'ಆರೋಪಿಯು ಬೇಗೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ವಾಸವಿದ್ದ. ಈತನಿಂದ 5 ಕೆ.ಜಿ ಗಾಂಜಾ, ಕೃತ್ಯಕ್ಕೆ ಬಳಸಿದ್ದ ಮೊಬೈಲ್ ಹಾಗೂ ಎಲೆಕ್ಟ್ರಾನಿಕ್ ತೂಕದ ಯಂತ್ರ ಜಪ್ತಿ ಮಾಡಲಾಗಿದೆ. ಇವುಗಳ ಒಟ್ಟು ಮೌಲ್ಯ ₹ 5 ಲಕ್ಷ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಕೃತ್ಯದಲ್ಲಿ ಭಾಗಿಯಾಗಿದ್ದ ಮತ್ತೊಬ್ಬ ಪೆಡ್ಲರ್ ತಲೆಮರೆಸಿಕೊಂಡಿದ್ದಾನೆ. ಆತ ಆಂಧ್ರಪ್ರದೇಶದವನು. ಅವನಿಂದಲೇ ಬಂಧಿತ ಆರೋಪಿ ಮಾದಕವಸ್ತು ಖರೀದಿಸುತ್ತಿದ್ದ. ಅದನ್ನು 20 ಗ್ರಾಮ್‌ಗಳಂತೆ ವಿಂಗಡಿಸಿ ಪೊಟ್ಟಣಗಳಲ್ಲಿ ತುಂಬುತ್ತಿದ್ದ. ಪರಿಚಿತರು, ಕಾಲೇಜು ವಿದ್ಯಾರ್ಥಿಗಳು, ನಗರದಲ್ಲಿ ನೆಲೆಸಿರುವ ಉತ್ತರ ಭಾರತದ ಕೂಲಿ ಕಾರ್ಮಿಕರಿಗೆ ಮಾರಾಟ ಮಾಡುತ್ತಿದ್ದ. ಪ್ರತಿ ಪೊಟ್ಟಣಕ್ಕೆ ₹1,500ರಿಂದ ₹2 ಸಾವಿರದವರೆಗೆ ದರ ನಿಗದಿ ಮಾಡುತ್ತಿದ್ದ. ಈತನ ವಿರುದ್ಧ ಬೇಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದೇವೆ' ಎಂದು ಹೇಳಿದ್ದಾರೆ.

ಯಶವಂತಪುರ ಕ್ಷೇತ್ರ: ಜನಸ್ಪಂದನ 21ರಂದು

ಪ್ರಜಾವಾಣಿ ವಾರ್ತೆ

ಜನಸ್ಪಂದನ ಸಿಟಿಜ಼ನ್ಸ್ ಫಾರ್ ಚೇಂಜ್

ಎಸ್.ಟಿ. ಸೋಮಶೇಖರ್

ಬೆಂಗಳೂರು: ನೀವು ಯಶವಂತಪುರ ವಿಧಾನಸಭಾ ಕ್ಷೇತ್ರದ ನಿವಾಸಿಯೇ? ನಿಮ್ಮ ಮನೆಗೆ ಕುಡಿಯುವ ನೀರು ಸಮರ್ಪಕವಾಗಿ ಪೂರೈಕೆ ಆಗುತ್ತಿಲ್ಲವೇ? ವಾರ್ಡ್‌ನ ರಸ್ತೆಗಳು ಗುಂಡಿ ಬಿದ್ದಿವೆಯೇ? ಉದ್ಯಾನದ ನಿರ್ವಹಣೆ ಸಮರ್ಪಕವಾಗಿ ಆಗುತ್ತಿಲ್ಲವೇ... ನಿಮ್ಮ ಕ್ಷೇತ್ರದ ಇಂತಹ ಸಮಸ್ಯೆಗಳಿಗೆ ಪರಿಹಾರ ಕಂಡು ಕೊಳ್ಳಬೇಕೇ? ಹಾಗಾದರೆ, ಕೆಂಗೇರಿ ಉಪನಗರದ ಬಂಡೆಮಠ ಮದುವೆ ಹಾಲ್‌ಗೆ ಇದೇ 21 ರಂದು ಬನ್ನಿ.

ಯಶವಂತಪುರ ವಿಧಾನಸಭಾ ಕ್ಷೇತ್ರದ ಜನರ ಅಹವಾಲು ಆಲಿಸುವ ಸಲುವಾಗಿ 'ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್' ಪತ್ರಿಕೆಗಳ ವತಿಯಿಂದ ಶನಿ ವಾರ (ಇದೇ 21) ಇಲ್ಲಿ 'ಜನಸ್ಪಂದನ' ಕಾರ್ಯಕ್ರಮ ಏರ್ಪಡಿಸಲಾಗಿದೆ.

ಈ ಕ್ಷೇತ್ರದ ಶಾಸಕರೂ ಆಗಿರುವ ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಹಾಗೂ ಬಿಬಿಎಂಪಿ, ಜಲಮಂಡಳಿ, ಬಿಡಿಎ, ಬೆಸ್ಕಾಂ, ಪೊಲೀಸ್ ಇಲಾಖೆಗಳ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಸಾರ್ವಜನಿಕರ ಅಹವಾಲು ಆಲಿಸಲಿದ್ದಾರೆ.

ಈ ಕ್ಷೇತ್ರದ ನಿವಾಸಿಗಳು ಸ್ಥಳೀಯ ಸಮಸ್ಯೆಗಳನ್ನು ನೇರವಾಗಿ ಶಾಸಕರ ಹಾಗೂ ಅಧಿಕಾರಿಗಳ ಗಮನಕ್ಕೆ ತಂದು ಬಗೆಹರಿಸಿಕೊಳ್ಳಬಹುದು.

ಆಸಕ್ತರು ಬೆಳಿಗ್ಗೆ 10ರಿಂದ ಸ್ಥಳದಲ್ಲೇ ಹೆಸರು ನೋಂದಾಯಿಸಬಹುದು. ಮೊದಲು ನೋಂದಣಿ ಮಾಡಿಸಿದವರಿಗೆ ಆದ್ಯತೆ. ಬೆಳಿಗ್ಗೆ 11ರಿಂದ ಮಧ್ಯಾಹ್ನ 2 ಗಂಟೆವರೆಗೆ ಕಾರ್ಯಕ್ರಮ ನಡೆಯಲಿದೆ.

ಅಮೃತಹಳ್ಳಿ ಪೊಲೀಸರಿಂದ ಆರೋಪಿ ಬಂಧನ

ಟೆಸ್ಟ್ ಡ್ರೈವ್ ನೆಪದಲ್ಲಿ ಕಾರಿನೊಂದಿಗೆ ಪರಾರಿ

ಪ್ರಜಾವಾಣಿ ವಾರ್ತೆ

ವೆಂಕಟೇಶ್ ನಾಯ್ಕ

ಬೆಂಗಳೂರು: ಪರೀಕ್ಷಾರ್ಥ ಚಲಾಯಿಸಲು (ಟೆಸ್ಟ್ ಡ್ರೈವ್) ಪಡೆದು ಕೊಂಡ ಕಾರಿನೊಂದಿಗೆ ಪರಾರಿಯಾಗಿದ್ದ ಆರೋಪಿಯನ್ನು ಅಮೃತಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಅಮೃತನಗರದ ಎಂ.ಜಿ. ವೆಂಕಟೇಶ್ ನಾಯ್ಕ (36) ಬಂಧಿತ. ಈತನಿಂದ ವಿಟಾರಾ ಬ್ರೆಜಾ ಕಾರು ಹಾಗೂ ಮೊಬೈಲ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದ್ದಾರೆ.

'ಆರೋಪಿಯು ಪತ್ನಿಯನ್ನು ಚುನಾವಣೆಗೆ ನಿಲ್ಲಿಸಿದ್ದ. ಆಕೆಯನ್ನು ಗೆಲ್ಲಿಸಲು ಸಾಕಷ್ಟು ಹಣ ವ್ಯಯಿಸಿದ್ದ ಈತ ಹಲವರ ಬಳಿ ಸಾಲ ಮಾಡಿಕೊಂಡಿದ್ದ. ಅದನ್ನು ತೀರಿಸಲು ತನ್ನ ಬಳಿ ಇದ್ದ ವಿಟಾರಾ ಬ್ರೆಜಾ ಕಂಪನಿಯ ಬೂದು ಬಣ್ಣದ ಕಾರು ಮಾರಿದ್ದ. ಕಾರು ಇಲ್ಲದಿರುವುದನ್ನು ಕಂಡರೆ ನೆರೆ ಹೊರೆಯವರು ಹಾಗೂ ಸ್ನೇಹಿತರು ಅಪಹಾಸ್ಯ ಮಾಡುತ್ತಾರೆ ಎಂದು ಭಾವಿಸಿ ಇದೇ ಬಣ್ಣದ ಕಾರು ಕದಿಯಲು ಯೋಜನೆ ರೂಪಿಸಿದ್ದ' ಎಂದಿದ್ದಾರೆ.

'ಆರೋಪಿಯು ಬೂದು ಬಣ್ಣದ ಬ್ರೆಜಾ ಕಾರಿಗಾಗಿ ಒಎಲ್‌ಎಕ್ಸ್‌ನಲ್ಲಿ ಹುಡುಕಾಟ ನಡೆಸಿದ್ದ. ಕೆಂಪಾಪುರದ ರವೀಂದ್ರ ಎಂಬುವರು ಇದೇ ಬಣ್ಣದ ಕಾರನ್ನು ಮಾರಾಟಕ್ಕೆ ಇಟ್ಟಿರುವುದನ್ನು ಗಮನಿಸಿದ್ದ. ಅವರನ್ನು ಸಂಪರ್ಕಿಸಿ ಕಾರು ಕೊಳ್ಳುವುದಾಗಿ ತಿಳಿಸಿದ್ದ. ಜನವರಿ 30ರಂದು ರವೀಂದ್ರ ಅವರಿಗೆ ಕರೆ ಮಾಡಿದ್ದ ಈತ ಕಾರು ನೋಡಲು ಬರುವುದಾಗಿ ಹೇಳಿದ್ದ. ರಾತ್ರಿ 7 ಗಂಟೆ ಸುಮಾರಿಗೆ ಅವರ ಮನೆ ಬಳಿ ಹೋಗಿದ್ದ. ಟೆಸ್ಟ್ ಡ್ರೈವ್ ನೋಡುವುದಾಗಿ ಕೀ ಪಡೆದು ಕಾರಿನ ಸಮೇತ ಪರಾರಿಯಾಗಿದ್ದ' ಎಂದು ವಿವರಿಸಿದ್ದಾರೆ.

'ಸುಮಾರು ಹೊತ್ತು ಕಾದರೂ ಕಾರಿನೊಂದಿಗೆ ಆತ ಹಿಂತಿರುಗಿರಲಿಲ್ಲ. ಹೀಗಾಗಿ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಈತನ ಪತ್ತೆಗಾಗಿ ಸಿಬ್ಬಂದಿ ಸುಮಾರು ಮೂರು ತಿಂಗಳು ಪರಿಶ್ರಮಪಟ್ಟಿದ್ದರು. ಈ ಅವಧಿಯಲ್ಲಿ ಒಎಲ್‌ಎಕ್ಸ್‌ನ ಸುಮಾರು ಎರಡೂವರೆ ಸಾವಿರ ಐಪಿ ಅಡ್ರೆಸ್‌ಗಳನ್ನು ಜಾಲಾಡಿದ್ದರು. ಈ ವೇಳೆ ವೆಂಕಟೇಶ್‌ನ ಐಪಿ ಅಡ್ರೆಸ್ ಪತ್ತೆಯಾಗಿತ್ತು. ಅದರ ಆಧಾರದಲ್ಲಿ ಆತನನ್ನು ಇದೇ 10ರಂದು ದಾಸರಹಳ್ಳಿ ಮುಖ್ಯರಸ್ತೆಯಲ್ಲಿ ಬಂಧಿಸಲಾಯಿತು' ಎಂದು ಹೇಳಿದ್ದಾರೆ.

ಕದ್ದ ಮೊಬೈಲ್‌ನಲ್ಲೇ ಕರೆ

'ಕಾರು ಕಳವು ಮಾಡಲು ನಿಶ್ಚಯಿಸಿದ್ದ ಆರೋಪಿಯು ಅದಕ್ಕಾಗಿ ಬಾಗಲೂರು ಪೊಲೀಸ್ ಠಾಣೆಯ ಸರಹದ್ದಿನಲ್ಲಿ ವಿವೊ ಕಂಪನಿಯ ಮೊಬೈಲ್‌ವೊಂದನ್ನು ಕದ್ದಿದ್ದ. ಅದರಿಂದಲೇ ರವೀಂದ್ರ ಅವರಿಗೆ ಕರೆ ಮಾಡಿದ್ದ. ತನ್ನ ಮೊಬೈಲ್ ಸ್ವಿಚ್‌ಆಫ್ ಆಗಿದೆ. ಹೀಗಾಗಿ ಬೇರೊಬ್ಬರ ಮೊಬೈಲ್‌ನಿಂದ ಕರೆ ಮಾಡುತ್ತಿರುವುದಾಗಿ ಅವರಿಗೆ ತಿಳಿಸಿದ್ದ' ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಅಪರಾಧ ಸುದ್ದಿ

ಬೆತ್ತಲಾಗಿ ಓಡಾಡುತ್ತಿದ್ದವನ ಬಂಧನ

ಬೆಂಗಳೂರು: ಜನವಸತಿ ಪ್ರದೇಶಗಳಲ್ಲಿ ಬೆತ್ತಲಾಗಿ ಓಡಾಡುತ್ತಿದ್ದ ನೈಜೀರಿಯಾದ ಪ್ರಜೆಯನ್ನು ಸಂಪಿಗೆಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ. 'ಕೆವಿನ್ ಜೇಮ್ಸ್ ಬಂಧಿತ. ಈತ ಸಾರ್ವಜನಿಕ ಸ್ಥಳಗಳಲ್ಲಿ ಬೆತ್ತಲೆಯಾಗಿ ಓಡಾಡುತ್ತಾ ನಾಗರಿಕರಿಗೆ ತೊಂದರೆ ಕೊಡುತ್ತಿದ್ದ. ಬಂಧಿಸಲು ಹೋಗಿದ್ದಾಗ ಸಿಬ್ಬಂದಿ ಮೇಲೆ ಹಲ್ಲೆಗೆ ಮುಂದಾಗಿದ್ದ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

'ಕೇರಳದಲ್ಲಿ ಟ್ವೆಂಟಿ–20 ಪಕ್ಷದೊಂದಿಗೆ ಎಎಪಿ ಮೈತ್ರಿ'

ಕೊಚ್ಚಿ (ಪಿಟಿಐ): ಕೇರಳದಲ್ಲಿ ಟ್ವೆಂಟಿ-20 ಪಕ್ಷದೊಂದಿಗೆ ಮೈತ್ರಿ ಮಾಡಿಕೊಳ್ಳುವುದಾಗಿ ಆಮ್ ಆದ್ಮಿ ಪಕ್ಷದ (ಎಎಪಿ) ರಾಷ್ಟ್ರೀಯ ಸಂಚಾಲಕ ಮತ್ತು ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರು ಭಾನುವಾರ ಘೋಷಿಸಿದ್ದಾರೆ.

ಈ ಮೈತ್ರಿಕೂಟಕ್ಕೆ ಪೀಪಲ್ಸ್ ವೆಲ್‌ಫೇರ್ ಅಲಯನ್ಸ್ (ಪಿಡಬ್ಲ್ಯುಎ) ಎಂದು ಹೆಸರಿಡಲಾಗಿದೆ.

'ಟ್ವೆಂಟಿ–20' ಅಸಾಂಪ್ರದಾಯಿಕ ರಾಜಕೀಯ ಪಕ್ಷವಾಗಿದ್ದು, ಲಾಭರಹಿತ ದತ್ತಿ ಸಂಸ್ಥೆಯಾಗಿ ಪ್ರಾರಂಭವಾಯಿತು. ಅದರ ವಾರ್ಷಿಕೋತ್ಸವದಲ್ಲಿ ಅರವಿಂದ ಕೇಜ್ರಿವಾಲ್ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು.

ಮೈತ್ರಿಕೂಟ ಅಧಿಕಾರಕ್ಕೆ ಬಂದರೆ ರಾಜ್ಯದ ಜನತೆಗೆ ಉಚಿತ ವಿದ್ಯುತ್ ನೀಡುವುದಾಗಿ ಅವರು ಘೋಷಿಸಿದರು.

'ದೆಹಲಿಯಲ್ಲಿ ದಿನದ 24 ಗಂಟೆಯ ವಿದ್ಯುತ್ ಪೂರೈಕೆಯಿಂದಾಗಿ ಜನರೇಟರ್ ಅಂಗಡಿಗಳನ್ನು ಮುಚ್ಚಲಾಗಿದೆ' ಎಂದು ಅವರು ಸಮಾರಂಭವೊಂದರಲ್ಲಿ ಹೇಳಿದರು.

ರಾಜಕೀಯ ರಂಗದ 'ಸ್ಟಾರ್ಟ್ ಅಪ್' ರೀತಿ ಕಾರ್ಯನಿರ್ವಹಿಸುತ್ತಿರುವ ಟ್ವೆಂಟಿ–20, ಈಗಾಗಲೇ ಕೇರಳದ ಕಿಳಕ್ಕಂಬಲಂ ಗ್ರಾಮ ಪಂಚಾಯಿತಿಯನ್ನು ಗೆಲ್ಲುವ ಮೂಲಕ ಛಾಪು ಮೂಡಿಸಿದೆ.

ಸುಧಾ ಓದಿರಿ

ಬಸ್ ನಿಲ್ದಾಣದಲ್ಲಿ ಕುಳಿತಿದ್ದಾಗ ವಿದ್ಯುತ್ ಸ್ಪರ್ಶ: ಯುವಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸ್ ನಿಲ್ದಾಣದಲ್ಲಿ ಕುಳಿತಿದ್ದ ಅಪರಿಚಿತ ಯುವಕ ವಿದ್ಯುತ್ ಸ್ಪರ್ಶಿಸಿ ಮೃತಪಟ್ಟಿದ್ದಾರೆ. ಈ ಸಂಬಂಧ ಹೆಬ್ಬಾಳ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

'ಶನಿವಾರ ರಾತ್ರಿ 9.30ರ ಸುಮಾರಿಗೆ ಘಟನೆ ನಡೆದಿದೆ. ಮೃತರಿಗೆ ಸುಮಾರು 28 ವರ್ಷ ವಯಸ್ಸಾಗಿದೆ. ಅವರು ಬಸ್‌ಗಾಗಿ ಕಾದು ಕುಳಿತಿದ್ದರು ಎಂಬುದು ಗೊತ್ತಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಶನಿವಾರ ರಾತ್ರಿ ಮಳೆ ಸುರಿಯುತ್ತಿತ್ತು. ನಿಲ್ದಾಣದಲ್ಲಿ ಪ್ರಯಾಣಿಕರಿಗಾಗಿ ಹಾಕಲಾಗಿದ್ದ ಲೋಹದ ಆಸನದ ಮೇಲೆ ಮೃತ ಯುವಕನ ಜೊತೆ ಇನ್ನೂ ಮೂವರು ಕುಳಿತಿದ್ದರು. ವಿದ್ಯುತ್ ಸ್ಪರ್ಶದ ಅನುಭವವಾಗಿದ್ದರಿಂದ ಅವರು ಅಲ್ಲಿಂದ ದೂರ ಓಡಿಹೋಗಿದ್ದರು. ಚಪ್ಪಲಿ ಕೆಳಗೆ ಬಿಟ್ಟಿದ್ದ ಯುವಕ ಅದನ್ನು ಹಾಕಿಕೊಂಡು ಓಡಲು ಮುಂದಾದಾಗ ನಿಲ್ದಾಣದ ಬಳಿಯ ಫಲಕವೊಂದಕ್ಕೆ ಕೈ ತಾಗಿತ್ತು. ಆಗ ಆತನ ದೇಹದೊಳಗೆ ವಿದ್ಯುತ್ ಪ್ರವಹಿಸಿದೆ' ಎಂದು ಮಾಹಿತಿ ನೀಡಿದ್ದಾರೆ.

ಅಕ್ರಮ ಜಾಹೀರಾತು ಫಲಕದಿಂದ ಅವಘಡ: 'ಟೈಮ್ಸ್ ಇನೋವೇಟಿವ್ ಮೀಡಿಯಾ ಹೆಸರಿನ ಜಾಹೀರಾತು ಕಂಪನಿಯೊಂದು ನಿಲ್ದಾಣದ ಸಮೀಪದ ವಿದ್ಯುತ್ ಕಂಬದಿಂದ ಅಕ್ರಮವಾಗಿ ವಿದ್ಯುತ್ ಸಂಪರ್ಕ ಪಡೆದು ನಿಲ್ದಾಣದ ಸುತ್ತಲೂ ಜಾಹೀರಾತು ಫಲಕ ಅಳವಡಿಸಿದೆ. ಆ ಫಲಕದ ತಂತಿಯಿಂದ ವಿದ್ಯುತ್ ಸ್ಪರ್ಶಿಸಿ ಯುವಕ ಮೃತಪಟ್ಟಿದ್ದಾನೆ' ಎಂದು ಹೆಬ್ಬಾಳ ವಿಭಾಗದ ಬೆಸ್ಕಾಂ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಜಾಹೀರಾತು ಫಲಕಕ್ಕೆ ನೀಡಿದ್ದ ವಿದ್ಯುತ್ ಸಂಪರ್ಕವನ್ನು 2020ರ ಡಿಸೆಂಬರ್‌ನಲ್ಲೇ ಸ್ಥಗಿತಗೊಳಿಸಲಾಗಿತ್ತು. ಇತ್ತೀಚೆಗೆ ಅಕ್ರಮವಾಗಿ ವಿದ್ಯುತ್ ಸಂಪರ್ಕ ಪಡೆದು ಕಂಪನಿಯು ಜಾಹೀರಾತು ಫಲಕ ಅಳವಡಿಸಿದೆ. ಬೆಸ್ಕಾಂ ನಿರ್ಲಕ್ಷ್ಯದಿಂದ ಈ ಅವಘಡ ನಡೆದಿಲ್ಲ. ಜಾಹೀರಾತು ಸಂಸ್ಥೆಯ ವಿರುದ್ಧ ನಾವು ದೂರು ದಾಖಲಿಸುತ್ತೇವೆ' ಎಂದೂ ಹೇಳಿದ್ದಾರೆ.

ರೌಡಿ ಬರ್ನ್ ಸಿದ್ದಿಕಿ ಬಂಧನ

ಬೆಂಗಳೂರು: ಸಾರ್ವಜನಿಕ ಸ್ಥಳಗಳಲ್ಲಿ ನಿಲ್ಲಿಸಿರುತ್ತಿದ್ದ ದ್ವಿಚಕ್ರ ವಾಹನಗಳನ್ನು ಕದಿಯುತ್ತಿದ್ದ ಹಾಗೂ ಮಾರಕಾಸ್ತ್ರಗಳಿಂದ ಬೆದರಿಸಿ ನಾಗರಿಕರನ್ನು ಸುಲಿಗೆ ಮಾಡುತ್ತಿದ್ದ ರೌಡಿ ಬರ್ನ್ ಸಿದ್ದಿಕಿ (28) ಎಂಬಾತನನ್ನು ಪುಲಿಕೇಶಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080 - 45557160 /161/ 162/ 163/ 164 9845114560 / 9731810277/ 9886213331

BUSINESS

Business Offers

Finance

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

WANTED BUSINESS Partner Non Veg Hotel 10 Lakhs Investment Monthly Income 2 Lakhs: 9606701007/ 8892501007

EDUCATIONAL

Admission

JOIN BEFORE 31-5-2022. MOST INNOVATIVE UGC NAAC 'A' GRADE Government Recognised South Indian University. Examinations November 2022. MBA (20 Specialisations) MCA/M.Sc/ MA/ M.Com/BA/B.Com/BBA/ BCA/B.Sc. 100% Pass. LOWEST FEE EVER. Asha Academy, Bangalore. Ph: 9448460103/ 7093438248

JOB OPPORTUNITIES

Engg/ Production Technical

WANTED MECHANICAL ENGINEERS & DIPLOMA HOLDERS as machine shop trainee for an aircraft component manufacturing industry. Training period 1 year, stipend 6 months- Rs.12000, balance period Rs.14000. Mail your resume to mail@ayyappa-cnc.com Ph: 9845012616

General

WANTED EXPERIENCED, Efficient Retired officials andEntrepreneurs Male /Female for INDIA'S MOST TRUSTED BRAND 9886326012

Marketing & Sales

ECOPLANET ELEVATORS & ESCALATORS PVT LTD Looking ForMarketing Executive, Technicians & Helpers:- 9741639096/ 9591274266

Part-Time Jobs

REPUTED MNC COMPANT will Provide WORK FROM HOME, Earn 30000 to 35000 Malleshwaram. Contact: 7019215243/ 9886641282

Teachers/ Professors

REQUIRED TEACHERS Pre-School Graduates with NTT, High School SOCIAL. ROYAL PUBLIC SCHOOL, Jnanabharati, Ullal. Contact: 8867569333

REQUIRED TEACHERS Pre-School Graduates with NTT, High School SOCIAL. ROYAL PUBLIC SCHOOL, Jnanabharati,Ullal. Contact: 8867569333

WANTED, NURSERY, PRIMARY, HIGH SCHOOL TEACHERS for English Medium School in Hanumanthnagar. Call: 26604512 (between 10- 2)

Wanted

WANTED FEMALE Office Assistant Qualification any Degree, Good Communication Skills: Kannada, English, Hindi. in around Rajajinagar Contact: 23307910/ 9108458798

GALAXY PARTTIME. Join work with college girl. Housewife. Teachers. Doctors. Earn (15000- 25000). 7043061715, 9557041436.

Classifieds

Book Your Classifieds Ads

Online Log in to dhclassifieds.com

For More Details Call 9880856233 • 9886213331

Email: Santhoshkumar@deccanherald.co.in

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

GM-Advertisement

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ: peoplesproblem@prajavani.co.in. ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

ಬಾಗಿಲು ತೆರೆದ ಶೌಚಾಲಯ

ವರದಿ ಪರಿಣಾಮ

ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ಬಿಎಂಟಿಸಿ ಬಸ್‌ಗಳು ನಿಲ್ಲುವ ಪ್ಲಾಟ್‌ಫಾರ್ಮ್ 19ರ ಬಳಿ ಇರುವ ಸಾರ್ವಜನಿಕ ಶೌಚಾಲಯಗಳ ಬಾಗಿಲು ತೆರೆಯಲಾಗಿದೆ. ಶೌಚಾಲಯಗಳು ಈಗ ಪ್ರಯಾಣಿಕರ ಬಳಕೆಗೆ ಮುಕ್ತವಾಗಿವೆ.

'ಸಾವಿರಾರು ಮಂದಿ ಪ್ರತಿನಿತ್ಯ ಬರುವ ನಿಲ್ದಾಣದಲ್ಲಿ ಪ್ರಯಾಣಿಕರ ಅನುಕೂಲಕ್ಕಾಗಿ ನಿರ್ಮಿಸಿರುವ ಶೌಚಾಲಯಗಳು ಐದು ತಿಂಗಳುಗಳಿಂದ ಮುಚ್ಚಿದ್ದವು. ಇದರಿಂದ ಪ್ರಯಾಣಿಕರಿಗೆ ಸಮಸ್ಯೆಯಾಗಿತ್ತು.

'ಶೌಚಾಲಯದ ಬಾಗಿಲು ಮುಚ್ಚಿರುವುದರಿಂದ ಪುರುಷರು ಪ್ಲಾಟ್‌ಫಾರ್ಮ್ ಪಕ್ಕದಲ್ಲೇ ಮೂತ್ರ ವಿಸರ್ಜನೆ ಮಾಡುತ್ತಿದ್ದು, ಇತರ ಪ್ರಯಾಣಿಕರಿಗೆ ಕಿರಿಕಿರಿಯಾಗುವುದಲ್ಲದೆ, ದುರ್ನಾತ ಬೀರುತ್ತದೆ. ಕೂಡಲೇ ಶೌಚಾಲಯಗಳ ಬಾಗಿಲು ತೆರೆಯಬೇಕು' ಎಂದು ಸಾರ್ವಜನಿಕರು ದೂರಿದ್ದರು. ಈ ಕುರಿತು 'ಶೌಚಾಲಯದ ಬಾಗಿಲು ತೆರೆಯಿರಿ' ಶೀರ್ಷಿಕೆಯಡಿ ಕಳೆದ ವಾರದ 'ಕುಂದು ಕೊರತೆ' ಅಂಕಣದಲ್ಲಿ ವರದಿ ಪ್ರಕಟವಾಗಿತ್ತು. ವರದಿ ಬಳಿಕ ಎಚ್ಚೆತ್ತ ಅಧಿಕಾರಿಗಳು ಶೌಚಾಲಯಗಳ ಬಾಗಿಲು ತೆರೆಯಲು ಕ್ರಮ ಕೈಗೊಂಡಿದ್ದಾರೆ.



ಮೆಜೆಸ್ಟಿಕ್‌ನಲ್ಲಿರುವ ನಾಡಪ್ರಭು ಕೆಂಪೇಗೌಡ (ಬಿಎಂಟಿಸಿ) ಬಸ್ ನಿಲ್ದಾಣದ ಶೌಚಾಲಯದ ಬಾಗಿಲು ತೆರೆಯಲಾಗಿದೆ.

ಚರಂಡಿ ಕೆಲಸ ಪೂರ್ಣಗೊಳಿಸಿ

ನಗರದ ಪ್ರಮುಖ ವ್ಯಾಪಾರ ಕೇಂದ್ರವಾಗಿರುವ ಕೆ.ಆರ್.ಮಾರುಕಟ್ಟೆ ಮಳಿಗೆಗಳ ಬಳಿ ಚರಂಡಿ ಸ್ವಚ್ಛಗೊಳಿಸುವ ಕೆಲಸ ಮಾರ್ಚ್ ಕೊನೆಯ ವಾರದಲ್ಲಿ ಶುರುವಾಗಿತ್ತು. ಬಳಿಕ ಅದನ್ನು ಅರ್ಧಕ್ಕೆ ನಿಲ್ಲಿಸಲಾಗಿದ್ದು, ಇದರಿಂದ ಸ್ಥಳೀಯ ಮಳಿಗೆದಾರರ ಹಾಗೂ ಸಾರ್ವಜನಿಕರ ಆರೋಗ್ಯದ ಮೇಲೂ ವ್ಯತಿರಿಕ್ತ ಪರಿಣಾಮ ಉಂಟಾಗುವ ಅಪಾಯವಿದೆ.

ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳನ್ನು ವಿಚಾರಿಸಿದರೆ, 'ಚರಂಡಿಯನ್ನು ಎತ್ತರಿಸಿ ಅದಕ್ಕೆ ಚಪ್ಪಡಿಗಳನ್ನು ಹಾಕಿಸಬೇಕು. ಅದಕ್ಕೆ ಹೆಚ್ಚು ಸಮಯ ಬೇಕು' ಎಂದು ಹೇಳುತ್ತಿದ್ದಾರೆ. ಚರಂಡಿ ತೆರೆದುಕೊಂಡಿರುವುದರಿಂದ ದುರ್ನಾತ ಹೆಚ್ಚು. ಚರಂಡಿಗೆ ಶೀಘ್ರವಾಗಿ ಚಪ್ಪಡಿಗಳನ್ನು ಅಳವಡಿಸಬೇಕು.

ಮಹೇಶ್, ಸಾರ್ವಜನಿಕ

ಕೆ.ಆರ್.ಮಾರುಕಟ್ಟೆ ಬಳಿಯ ಚರಂಡಿ ಸ್ಥಿತಿ

ರಸ್ತೆಯಲ್ಲಿರುವ ಗುಂಡಿ ಮುಚ್ಚಿ

ಅನ್ನಪೂರ್ಣೇಶ್ವರಿ ದೇವಸ್ಥಾನಕ್ಕೆ ಸಂಪರ್ಕ ಕಲ್ಪಿಸುವ ನಾಗರಬಾವಿ 2ನೇ ಹಂತದ 8ನೇ ಅಡ್ಡರಸ್ತೆ ದುಃಸ್ಥಿತಿ ತಲುಪಿದೆ. ಹಲವು ದಿನಗಳ ಹಿಂದೆ ಈ ರಸ್ತೆಯಲ್ಲಿ ಕೇಬಲ್ ಅಳವಡಿಸಲು ದೊಡ್ಡ ಗುಂಡಿ ತೆಗೆದಿದ್ದರು.

ಕೇಬಲ್ ಕೊಳವೆಗಳೆಲ್ಲ ಗುಂಡಿಯಿಂದ ಮೇಲೆ ಬಂದು ಅಪಾಯಕ್ಕೆ ಆಹ್ವಾನ ನೀಡುವಂತಿವೆ. ಇದು ವಾಣಿಜ್ಯ ಪ್ರದೇಶ ಆಗಿರುವುದರಿಂದ ಜನ ಸಂಚಾರ ಹೆಚ್ಚು. ಮಕ್ಕಳು ಹಾಗೂ ಹಿರಿಯರ ಹಿತದೃಷ್ಟಿಯಿಂದ ಗುಂಡಿಯನ್ನು ತುರ್ತಾಗಿ ಮುಚ್ಚಿದರೆ ಅನುಕೂಲ.

ತುಕಾರಾಂ, ಬಾಲಗಂಗಾಧರನಗರ



ನಾಗರಬಾವಿ 2ನೇ ಹಂತದ ರಸ್ತೆಯಲ್ಲಿ ದುರಸ್ತಿಯಾಗದ ಗುಂಡಿ

ಬಿಎಂಟಿಸಿ ಬಸ್ ಸೇವೆ ಕಲ್ಪಿಸಿ

ದತ್ತಾತ್ರೇಯ ನಗರ ಹಾಗೂ ಹೊಸಕೆರೆಹಳ್ಳಿ ಬಿಎಂಟಿಸಿ ಬಸ್ ನಿಲ್ದಾಣಗಳ ನಡುವೆ ಸುಮಾರು 1.5 ಕಿ.ಮೀ ಅಂತರವಿದೆ. ಈ ಪ್ರದೇಶದಲ್ಲಿ ವಿದ್ಯಾರ್ಥಿಗಳು ಹಾಗೂ ಉದ್ಯೋಗಿಗಳು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ದತ್ತಾತ್ರೇಯ ನಗರದಿಂದ ಯಾವುದೇ ಬಸ್‌ಗಳ ಸಂಚಾರವಿಲ್ಲ. ಇದರಿಂದ ಸ್ಥಳೀಯ ನಿವಾಸಿಗಳಿಗೆ ಬಹಳ ಸಮಸ್ಯೆಯಾಗಿದೆ. ತುರ್ತು ಸಂದರ್ಭಗಳಲ್ಲಿ ಇಲ್ಲಿ ಆಟೊ ರಿಕ್ಷಾಗಳೂ ಸಿಗುವುದಿಲ್ಲ. ಈ ಪ್ರದೇಶಕ್ಕೆ ಬಿಎಂಟಿಸಿ ಬಸ್‌ಗಳ ಸೇವೆ ಕಲ್ಪಿಸಿದರೆ ಅನುಕೂಲ.

ಸುನೀತಾ, ಹೊಸಕೆರೆಹಳ್ಳಿ ನಿವಾಸಿ

ಫ್ಲೆಕ್ಸ್ ತೆರವು ಮಾಡಿ

ಕೆ.ಆರ್.ಪುರದ ಬಸವನಪುರ ರಸ್ತೆಯಲ್ಲಿ ಅಳವಡಿಸಿರುವ ಅನಧಿಕೃತ ಫ್ಲೆಕ್ಸ್

ಕೆ.ಆರ್.ಪುರದ ಬಸವನಪುರ ಹಾಗೂ ದೇವಸಂದ್ರ ಮುಖ್ಯರಸ್ತೆಗಳ ತಿರುವಿನಲ್ಲಿ ಅನಧಿಕೃತ ಫ್ಲೆಕ್ಸ್‌ಗಳನ್ನು ಅಳವಡಿಸಲಾಗಿದೆ. ಇದರಿಂದ ಸಾರ್ವಜನಿಕರಿಗೆ ಬಹಳ ತೊಂದರೆಯಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಫ್ಲೆಕ್ಸ್‌ಗಳ ತೆರವಿಗೆ ಕ್ರಮ ಕೈಗೊಳ್ಳಬೇಕು. ನಗರ ಪ್ರದೇಶದಲ್ಲಿ ಇಂತಹ ಅನಧಿಕೃತ ಫ್ಲೆಕ್ಸ್‌ಗಳಿಗೆ ಕಡಿವಾಣ ಹಾಕಬೇಕು.

–ನೊಂದ ನಾಗರಿಕರು

ರಸ್ತೆಗೆ ವಾಲಿದ ಕಂಬ

ಅಬ್ಬಿಗೆರೆ ಪೈಪ್‌ಲೈನ್ ರಸ್ತೆ ಹಾಗೂ ಕೆರೆಗುಡ್ಡದಹಳ್ಳಿ ರಸ್ತೆಗಳನ್ನು ಸಂಧಿಸುವ ವೃತ್ತದ ಬಳಿ ವಿದ್ಯುತ್ ಕಂಬ ರಸ್ತೆ ಕಡೆಗೆ ವಾಲಿಕೊಂಡಿದೆ. ಇದರಿಂದ ಅಕ್ಕಪಕ್ಕದ ಕಂಬಗಳೂ ತುಸು ವಾಲಿವೆ. ಈ ರಸ್ತೆಯಲ್ಲಿ ವಾಹನ ಸವಾರರು ಮತ್ತು ಸಾರ್ವಜನಿಕರು ಕಂಬ ಬೀಳಬಹುದು ಎಂಬ ಆತಂಕದಲ್ಲೇ ಸಾಗಬೇಕಾದ ಸ್ಥಿತಿ ಇದೆ.

ಬೆಸ್ಕಾಂ ಅಧಿಕಾರಿಗಳು ಇದೇ ರಸ್ತೆಯಲ್ಲಿ ಸಂಚರಿಸುತ್ತಾರೆ. ಆದರೆ, ಕಂಬದ ದುರಸ್ತಿಗೆ ಮುಂದಾಗಿಲ್ಲ. ಮಳೆ ಬಂದಾಗ ಕಂಬ ನೆಲಕ್ಕುರುಳಿದರೆ, ವಿದ್ಯುತ್ ಪ್ರವಹಿಸಿ ಜೀವಹಾನಿಯಾಗುವ ಅಪಾಯವೂ ಇದೆ. ಕಂಬದ ದುರಸ್ತಿಗೆ ಬೆಸ್ಕಾಂ ಕೂಡಲೇ ಕ್ರಮ ಕೈಗೊಳ್ಳಬೇಕು.

ವರದರಾಜನ್, ಅಬ್ಬಿಗೆರೆ ನಿವಾಸಿ

ಅಬ್ಬಿಗೆರೆ ಪೈಪ್‌ಲೈನ್ ರಸ್ತೆಯ ವೃತ್ತದ ಬಳಿ ವಾಲಿರುವ ವಿದ್ಯುತ್ ಕಂಬ

ಸಗಟು ಬೆಲೆ ಕ್ವಿಂಟಲ್‌ಗೆ ₹5,330: ರೈತರ ಮುಖದಲ್ಲಿ ಸಂತಸ

ದಾಖಲೆ ಬೆಲೆಗೆ ಟೊಮೆಟೊ ಮಾರಾಟ

ಪ್ರಜಾವಾಣಿ ವಾರ್ತೆ

ಕೋಲಾರ: ಕೆಲವು ತಿಂಗಳ ಹಿಂದೆ ತೀವ್ರ ಕುಸಿತ ಕಂಡಿದ್ದ ಟೊಮೆಟೊ ಭಾನುವಾರ ಸ್ಥಳೀಯ ಮಾರುಕಟ್ಟೆಯಲ್ಲಿ ಕ್ವಿಂಟಲ್‌ಗೆ ₹5,330 ಸಗಟು ಬೆಲೆಗೆ ಮಾರಾಟವಾಗಿದೆ. ಇದು ಜಿಲ್ಲೆಯ ಮಟ್ಟಿಗೆ ದಾಖಲೆ ಬೆಲೆಯಾಗಿದೆ.

ಸಗಟು ದರಕ್ಕೆ ಅನುಗುಣವಾಗಿ ಚಿಲ್ಲರೆ ಮಾರಾಟ ಬೆಲೆಯೂ ಏರಿಕೆಯಾಗಿದೆ. 15 ದಿನದ ಹಿಂದೆ ಸ್ಥಳೀಯ ಮಾರುಕಟ್ಟೆಯಲ್ಲಿ ಟೊಮೆಟೊ ಸಗಟು ಬೆಲೆ ಕ್ವಿಂಟಲ್‌ಗೆ ಕನಿಷ್ಠ ₹ 670 ಮತ್ತು ಗರಿಷ್ಠ ₹ 3,470 ಇತ್ತು.

ಕೆಲವು ದಿನಗಳಿಂದ ಮಳೆಯಾಗುತ್ತಿರುವುದರಿಂದ ಟೊಮೆಟೊ ಬೆಳೆ ನಾಶವಾಗಿದ್ದು, ಮಾರುಕಟ್ಟೆಗಳಲ್ಲಿಯೂ ಆವಕ ಕುಸಿದಿದೆ. ಇದರಿಂದ ಬೆಲೆ ಏರಿಕೆಯಾಗಿದೆ ಎನ್ನುತ್ತಾರೆ ಮಾರುಕಟ್ಟೆ ತಜ್ಞರು.

ಕೋವಿಡ್ ಲಾಕ್‌ಡೌನ್‌ನಿಂದ 2 ವರ್ಷ ಹೊರ ರಾಜ್ಯ, ಜಿಲ್ಲೆಗಳಿಗೆ ಸಾಗಣೆ ಸ್ಥಗಿಗೊಂಡಿತ್ತು. ಸ್ಥಳೀಯ ಮಾರುಕಟ್ಟೆಯಲ್ಲಿಯೂ ಟೊಮೆಟೊ ಕೇಳುವವರು ಇಲ್ಲದೆ ರೈತರು ರಸ್ತೆಗೆ ಸುರಿದಿದ್ದರು. ಜಮೀನಿನಲ್ಲೇ ಟೊಮೆಟೊ ಕೊಳೆತಿದ್ದವು.

‘ಈ ಬಾರಿ ಕೋವಿಡ್ 4ನೇ ಅಲೆ ಕಾರಣಕ್ಕೆ ಲಾಕ್‌ಡೌನ್ ಜಾರಿಯಾದರೆ ಬೆಲೆ ಕುಸಿತವಾಗಬಹುದೆಂಬ ಆತಂಕದಲ್ಲಿ ರೈತರು ಟೊಮೆಟೊ ಬೆಳೆಯುವುದನ್ನು ಕಡಿಮೆ ಮಾಡಿದ್ದು, ಇದರಿಂದ ಇಳುವರಿ ಗಣನೀಯವಾಗಿ ಕುಸಿದಿದೆ. ಇದು ಸಹ ಬೆಲೆ ಹೆಚ್ಚಳಕ್ಕೆ ಕಾರಣವಾಗಿದೆ’ ಎನ್ನುತ್ತಾರೆ ಎಪಿಎಂಸಿ ಅಧಿಕಾರಿಗಳು.

ಕೋಲಾರ ಎಪಿಎಂಸಿಯಲ್ಲಿ ಟೊಮೆಟೊ ವಹಿವಾಟಿನ ನೋಟ

ಲಕ್ಷಾಂತರ ರೂಪಾಯಿ ವಹಿವಾಟು (ವಿಜಯಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ ವರದಿ): ಸ್ಥಳೀಯ ಮಾರುಕಟ್ಟೆಯಲ್ಲಿ 15 ಕೆ.ಜಿ. ಟೊಮೆಟೊ ಕ್ರೇಟ್ ₹750 –₹980ವರೆಗೂ ಮಾರಾಟವಾಗುತ್ತಿದೆ. ಕೆಲ ದಿನಗಳ ಹಿಂದೆ ಒಂದು ಕ್ರೇಟ್ ಕೇವಲ ₹200ಕ್ಕೆ ಮಾರಾಟವಾಗುತ್ತಿತ್ತು. ಇದರಿಂದ ಚಿಕ್ಕಬಳ್ಳಾಪುರ, ಚಿಂತಾಮಣಿ, ಬಾಗೇಪಲ್ಲಿ ಮಾರುಕಟ್ಟೆಗಳಲ್ಲಿ ಪ್ರತಿನಿತ್ಯ ಲಕ್ಷಾಂತರ ರೂಪಾಯಿ ವಹಿವಾಟು ನಡೆಯುವಂತಾಗಿದೆ.

ಸರ್ಕಾರ ಜಿಲ್ಲೆಗೊಂದು ಉತ್ಪನ್ನ ಯೋಜನೆಯಡಿಯಲ್ಲಿ ಟೊಮೊಟೊ ಬೆಳೆ ಆಯ್ಕೆ ಮಾಡಿಕೊಂಡಿರುವುದು ಬೆಳೆಗಾರರಿಗೆ ಹೆಚ್ಚಿನ ಪ್ರೋತ್ಸಾಹ ನೀಡಿದಂತಾಗಿದೆ ಎನ್ನುತ್ತಾರೆ ಸ್ಥಳೀಯ ರೈತರು.

> ಕೆಲ ತಿಂಗಳಿಂದ ದಿಢೀರ್ ಬೆಲೆ ಕುಸಿತವಾದ ಕಾರಣ ಟೊಮೆಟೊಗಳನ್ನು ಚರಂಡಿಗೆ ಸುರಿದೆವು. ಉಚಿತವಾಗಿ ನೀಡಿದೆವು. ಈಗ ಬೆಲೆ ಬಂದಿದೆ. ಆದರೆ, ಈಗ ಗಿಡದಲ್ಲಿ ಹಣ್ಣಿಲ್ಲ
>
> **ನಾರಾಯಣಸ್ವಾಮಿ,** ರೈತ ವಿಜಯಪುರ

> ಟೊಮೆಟೊಗೆ ಈಗ ಒಳ್ಳೆಯ ಬೆಲೆ ಬಂದಿರುವ ಖುಷಿಯಿದೆ. ಆದರೆ, ಮಾರುಕಟ್ಟೆಯಲ್ಲಿ ಇನ್ನೂ ಎಷ್ಟು ದಿನ ಈ ಬೆಲೆ ಇರುತ್ತದೆಯೋ ಗೊತ್ತಿಲ್ಲ
>
> **ಅಶ್ವಥಪ್ಪ,** ರೈತ, ವಿಜಯಪುರ

ಬುದ್ಧನ ಮಂದಹಾಸ

ಬುದ್ಧ ಪೂರ್ಣಿಮೆ ಪ್ರಯುಕ್ತ ಕಲಬುರಗಿ ಹೈಕೋರ್ಟ್ ಸಮೀಪ ಅಲ್ಟ್ರಾಥ್ ಆರ್ಟ್ ಸ್ಟುಡಿಯೋದಿಂದ ಸಿದ್ಧವಾದ ಬುದ್ಧನ ಮೂರ್ತಿಗಳನ್ನು ಕಾರ್ಮಿಕರೊಬ್ಬರು ಸ್ವಚ್ಛಗೊಳಿಸುತ್ತಿರುವುದು ಭಾನುವಾರ ಕಂಡು ಬಂತು

ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

‘ಸತ್ಯ ಹೇಳಿದರೆ ದೇಶದ್ರೋಹಿ ಪಟ್ಟ’

ಜ್ಞಾನ ವಿಜ್ಞಾನ ಸಮಿತಿಯ ರಾಜ್ಯ ಮಟ್ಟದ ಸಮಾವೇಶದಲ್ಲಿ ಕುಂ.ವೀ ಹೇಳಿಕೆ

ಪ್ರಜಾವಾಣಿ ವಾರ್ತೆ

ತುಮಕೂರು: ‘ದೇಶದಲ್ಲಿ ಅಘೋಷಿತ ತುರ್ತುಸ್ಥಿತಿ ನಿರ್ಮಾಣವಾಗಿದೆ. ರಾಜಕಾರಣಿಗಳ ತಪ್ಪಿನ ವಿರುದ್ಧ ಯಾರೂ ಧ್ವನಿ ಎತ್ತುತ್ತಿಲ್ಲ. ಇಂದು ಅನ್ಯಾಯದ ವಿರುದ್ಧ ಧ್ವನಿ ಎತ್ತದಿದ್ದರೆ ಮುಂದಿನ ದಿನಗಳು ಇನ್ನಷ್ಟು ಕಷ್ಟಕರವಾಗಲಿವೆ’ ಎಂದು ಸಾಹಿತಿ ಕುಂ. ವೀರಭದ್ರಪ್ಪ ಅಭಿಪ್ರಾಯಪಟ್ಟರು.

‘ಸತ್ಯ ಹೇಳಿದ ಕಾರಣಕ್ಕೆ ಸಂಶೋಧಕ ಎಂ.ಎಂ.ಕಲಬುರ್ಗಿ, ಗೌರಿ ಲಂಕೇಶ್ ಅವರನ್ನು ಹತ್ಯೆ ಮಾಡಲಾಯಿತು. ಉತ್ತಮ ಕಾರ್ಯ, ಭಾವೈಕ್ಯ, ಸಮಾನತೆ, ಸಹಬಾಳ್ವೆಗೆ ಜೀವ ಕೊಟ್ಟರೆ ಅದು ನಿಜವಾಗಲೂ ಸಾರ್ಥಕ’ ಎಂದರು.

ನಗರದಲ್ಲಿ ಭಾನುವಾರ ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿಯಿಂದ (ಕೆಜೆವಿಎಸ್) ಹಮ್ಮಿಕೊಂಡಿದ್ದ ರಾಜ್ಯ ಮಟ್ಟದ ಕಾರ್ಯಕರ್ತರ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

‘ಪ್ರಸ್ತುತ ದಿನಗಳಲ್ಲಿ ದೇವರು, ಮೂಢನಂಬಿಕೆ ವಿರುದ್ಧ ಮಾತನಾಡಿದರೆ ಪ್ರಧಾನಿ ನರೇಂದ್ರ ಮೋದಿ ಅವರು ದೇಶದ್ರೋಹಿ ಪಟ್ಟ ಕಟ್ಟುತ್ತಾರೆ. ನೀವು ಹಿಂದೂ ವಿರೋಧಿಗಳು, ನಿಮ್ಮನ್ನು ಕೊಲೆ ಮಾಡಲಾಗುತ್ತದೆ ಎಂದು ನನಗೂ ಎರಡು ಪ್ರೇಮಪತ್ರಗಳು (ಜೀವ ಬೆದರಿಕೆ ಪತ್ರ) ಬಂದಿದ್ದವು’ ಎಂದು ಹೇಳಿದರು.

‘ಸ್ವಾಮಿಗಳು ಅತ್ಯಂತ ಭಯಾನಕ. ಸಮಾಜದಲ್ಲಿ ಈಗ ಹೈಟೆಕ್ ಸ್ವಾಮಿಗಳ ಸಂಖ್ಯೆ ಹೆಚ್ಚಾಗಿದೆ. ಅಂಥವರ ಕಾಲಿಗೆ ಬೀಳುವ ರಾಜಕಾರಣಿಗಳಿಗಿಂತ ಮೂರ್ಖರು ಬೇರೆ ಯಾರೂ ಇಲ್ಲ. ರಾಜಕಾರಣಿಗಳು ವೈಚಾರಿಕತೆಯ ಪುಸ್ತಕಗಳಿಗಿಂತ ವಾಸ್ತುಶಾಸ್ತ್ರ, ವಾಮಾಚಾರಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಹೆಚ್ಚಾಗಿ ಓದುತ್ತಾರೆ’ ಎಂದು ಅವರು ತರಾಟೆಗೆ ತೆಗೆದುಕೊಂಡರು.

‘ವಿರೋಧ ಪಕ್ಷದವರ ಬಾಯಿ ಮುಚ್ಚಿಸುವುದು ಹೇಗೆ? ಅವರನ್ನು ಚುನಾವಣೆಯಲ್ಲಿ ಸೋಲಿಸುವುದು ಹೇಗೆ? ಎನ್ನುವುದಕ್ಕೂ ರಾಜಕಾರಣಿಗಳು ಹೋಮ, ಹವನ ಮಾಡಿಸುತ್ತಿದ್ದಾರೆ. ವೈಜ್ಞಾನಿಕ ದೃಷ್ಟಿಕೋನವುಳ್ಳ ರಾಜಕಾರಣಿಗಳ ಅವಶ್ಯಕತೆಯಿದೆ. ಶಿಕ್ಷಣವಂತರೇ ಮೂಢನಂಬಿಕೆಗಳನ್ನು ಹೆಚ್ಚಾಗಿ ನಂಬುತ್ತಾರೆ’ ಎಂದು ಕುಂ.ವೀ ವಿಷಾದಿಸಿದರು.

‘ಪುರೋಹಿತರು ನಮ್ಮನ್ನು ಭಯಾನಕ ಪರಿಸ್ಥಿತಿಯಲ್ಲಿ ಇಟ್ಟಿದ್ದಾರೆ. ಮೂಢನಂಬಿಕೆ ಬೇರೂರಿದೆ. ಮಕ್ಕಳಿಗೆ ಹೆಸರಿಡುವ ಸ್ವಾತಂತ್ರ್ಯವೂ ನಮಗಿಲ್ಲ. ಮಕ್ಕಳನ್ನು ಭಯದಲ್ಲಿ ಬೆಳೆಸುತ್ತಿದ್ದೇವೆ. ಅವರಲ್ಲಿ ಪ್ರಶ್ನಿಸುವ ಮನೋಭಾವ ರೂಢಿಸಬೇಕಿದೆ’ ಎಂದು ಸಲಹೆ ಮಾಡಿದರು.

ರಥದ ಚಕ್ರ ಹರಿದು ಇಬ್ಬರು ಸಾವು

ಪ್ರಜಾವಾಣಿ ವಾರ್ತೆ

ಗುಂಡ್ಲುಪೇಟೆ (ಚಾಮರಾಜನಗರ): ತಾಲ್ಲೂಕಿನ ಪ್ರಸಿದ್ಧ ಧಾರ್ಮಿಕ ಕ್ಷೇತ್ರ ಸ್ಕಂದಗಿರಿಯಲ್ಲಿ (ಪಾರ್ವತಿ ಬೆಟ್ಟ) ಭಾನುವಾರ ನಡೆದ ರಥೋತ್ಸವದ ವೇಳೆ ರಥದ ಚಕ್ರ ಹರಿದು ಕಂದೇಗಾಲ ಗ್ರಾಮದ ಸರ್ಪಭೂಷಣ್ (27) ಹಾಗೂ ಸ್ವಾಮಿ (40) ಎಂಬುವವರು ಮೃತಪಟ್ಟಿದ್ದಾರೆ.

ಅವಘಡದಲ್ಲಿ ಕೊಡಸೋಗೆ ಗ್ರಾಮದ ಕರಿನಾಯಕ (50) ಎಂಬುವವರ ಕಾಲು ಮುರಿದಿದೆ.

ಭಕ್ತರು ಒಮ್ಮೆಲೆ ತೇರು ಎಳೆದಿದ್ದರಿಂದ, ರಥ ವೇಗವಾಗಿ ಮುಂದೆ ಚಲಿಸಿತು. ಆಗ ನೂಕು ನುಗ್ಗಲು ಉಂಟಾಗಿ ಸರ್ಪಭೂಷಣ್ ಕೆಳಕ್ಕೆ ಬಿದ್ದು ಚಕ್ರಕ್ಕೆ ಸಿಲುಕಿದರು. ರಥ ಅವರ ಮೇಲೆ ಹರಿಯಿತು. ತಕ್ಷಣವೇ ಆಸ್ಪತ್ರೆಗೆ ಕರೆದೊಯ್ಯಲಾಯಿತು. ದಾರಿ ಮಧ್ಯೆ ಮೃತಪಟ್ಟರು. ಗಾಯಗೊಂಡಿದ್ದ ಸ್ವಾಮಿ ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ರಾತ್ರಿ ಕೊನೆಯುಸಿರೆಳೆದಿದ್ದಾರೆ.

ಆದೇಶ ಪಾಲಿಸಲು ಮುಸ್ಲಿಂ ಧರ್ಮಗುರುಗಳ ತೀರ್ಮಾನ

ಬೆಳಿಗ್ಗೆ 6ರ ಬಳಿಕವಷ್ಟೇ ಮಸೀದಿಗಳಲ್ಲಿ ಆಜಾನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಎಲ್ಲ ಮಸೀದಿಗಳಲ್ಲೂ ಬೆಳಿಗ್ಗೆ 5 ಗಂಟೆಗೆ ಮೈಕ್ ಮೂಲಕ ಆಜಾನ್ ಕೂಗದಿರಲು ನಿರ್ಧರಿಸಲಾಗಿದೆ. ಅಲ್ಲದೆ, ಬೆಳಿಗ್ಗೆ 6 ಗಂಟೆಯ ಬಳಿಕ ಆಜಾನ್ ಕೂಗಲು ಮೈಕ್ ಬಳಕೆಗೆ ಸರ್ಕಾರ ಮತ್ತು ಸುಪ್ರೀಂಕೋರ್ಟ್ ನೀಡಿರುವ ಆದೇಶ ಮತ್ತು ಮಾರ್ಗಸೂಚಿಯನ್ನು ಪಾಲಿಸಲು ಮುಸ್ಲಿಂ ಧರ್ಮ ಗುರುಗಳು, ಮೌಲ್ವಿಗಳು ಮತ್ತು ಮುಖಂಡರ ಸಭೆ ತೀರ್ಮಾನಿಸಿದೆ.

ಷರಿಯತ್–ಎ–ಹಿಂದ್ ಸಂಘಟನೆ ಈ ಸಂಬಂಧ ಏರ್ಪಡಿಸಿದ್ದ ಸಭೆಯಲ್ಲಿ ಒಮ್ಮತದ ತೀರ್ಮಾನ ತೆಗೆದುಕೊಳ್ಳಲಾಗಿದೆ. ಈ ಸಂಘಟನೆಯ ಅಮೀರ್–ಎ–ಷರಿಯತ್ ಆಗಿರುವ ಮೌಲಾನ ಸಗೀರ್ ಅಹಮದ್ ಅಧ್ಯಕ್ಷತೆಯಲ್ಲಿ ಶನಿವಾರ ಸಭೆ ನಡೆಯಿತು.

ಸಭೆಯ ಕುರಿತು ಸುದ್ದಿಗಾರರರಿಗೆ ಮಾಹಿತಿ ನೀಡಿದ ಉಮರ್ ಶರೀಫ್, ಈ ನಿರ್ಧಾರ ರಾಜ್ಯದ ಎಲ್ಲ ಭಾಗಗಳಿಗೂ ಅನ್ವಯವಾಗಲಿದೆ. ಎಲ್ಲ ಮಸೀದಿಗಳ ಮುಖಂಡರೂ ಒಪ್ಪಿಗೆ ನೀಡಿದ್ದಾರೆ. ಇದಕ್ಕೆ ಯಾರ ವಿರೋಧವೂ ವ್ಯಕ್ತವಾಗಿಲ್ಲ. ಬೆಳಿಗ್ಗೆ 5 ಕ್ಕೆ ಆಜಾನ್ ಕೂಗುವುದಿಲ್ಲ. ಉಳಿದ ಸಮಯದಲ್ಲಿ ಸರ್ಕಾರ ಮತ್ತು ಸುಪ್ರೀಂಕೋರ್ಟ್ ತೀರ್ಮಾನವನ್ನು ಚಾಚೂ ತಪ್ಪದೇ ಪಾಲಿಸಲು ನಿರ್ಧರಿಸಿದ್ದೇವೆ ಎಂದರು.

‘ಮುಸ್ಲಿಮರು ಕಾನೂನಿಗೆ ಬೆಲೆ ಕೊಡುವುದಿಲ್ಲ ಎಂಬ ವದಂತಿ ಹರಡಿತ್ತು. ನಾವೂ ಕಾನೂನು ಪಾಲಿಸುತ್ತೇವೆ. ವದಂತಿ ಸುಳ್ಳು ಎಂಬುದು ಸಾಬೀತಾಗಿದೆ’ ಎಂದು ಅವರು ಹೇಳಿದರು.

ಕರ್ನಾಟಕ ವಕ್ಫ್ ಮಂಡಳಿ ಅಧ್ಯಕ್ಷ ಮೊಹಮ್ಮದ್ ಷಫಿ ಸಾ ಅದಿ ಮಾತನಾಡಿ, ಬೆಳಿಗ್ಗೆ 5 ಕ್ಕೆ ಆಜಾನ್ ಕೂಗುವುದು ಪ್ರಾರ್ಥನೆ ಅಲ್ಲ. ಪ್ರಾರ್ಥನೆ ಮಾಡಲು ಕರೆಯುವ ಸಂದೇಶ. ಆಜಾನ್‌ಗೆ ಸರ್ಕಾರ ಅಥವಾ ಸುಪ್ರೀಂಕೋರ್ಟ್‌ನ ವಿರೋಧವಿಲ್ಲ. ಪ್ರಾರ್ಥನೆಗೆ ಮೈಕ್ ಮೂಲಕವೇ ಕರೆ ನೀಡಬೇಕಾಗುತ್ತದೆ. ಅದನ್ನು ಸರ್ಕಾರದ ಆದೇಶವನ್ನು ಪಾಲಿಸಿಯೇ ಮಾಡುತ್ತೇವೆ. ಬೆಳಿಗ್ಗೆ 6 ಗಂಟೆಯ ಬಳಿಕ ಮೈಕ್ ಬಳಸಲು ಎಲ್ಲ ಮಸೀದಿಗಳೂ ಪೊಲೀಸರಿಂದ ಅನುಮತಿ ಪಡೆಯುವಂತೆ ಸೂಚನೆ ನೀಡಲಾಗುವುದು ಎಂದು ಹೇಳಿದರು.

‘ಯಾವ ಪಕ್ಷವೂ ದಲಿತರನ್ನು ಸಿ.ಎಂ ಮಾಡಲ್ಲ’

ಪ್ರಜಾವಾಣಿ ವಾರ್ತೆ

ಆನೇಕಲ್: ‘ಯಾವ ರಾಜಕೀಯ ಪಕ್ಷವೂ ರಾಜ್ಯದಲ್ಲಿ ದಲಿತರನ್ನು ಮುಖ್ಯಮಂತ್ರಿ ಮಾಡುವುದಿಲ್ಲ. ದಲಿತ ಮುಖ್ಯಮಂತ್ರಿ ಎನ್ನುವುದು ಬರೀ ಕನಸು’ ಎಂದು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ರಾಜ್ಯ ಸಚಿವ ಎ.ನಾರಾಯಣಸ್ವಾಮಿ ಹೇಳಿದ್ದಾರೆ.

ಭಾನುವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ದಲಿತ ಮುಖ್ಯಮಂತ್ರಿ ಎನ್ನುವ ಕೂಗು ಕೇವಲ ರಾಜಕಾರಣದ ತೆವಲಿಗೆ ಹುಟ್ಟಿಕೊಂಡ ಚರ್ಚೆ. ದಲಿತರೊಬ್ಬರು ಮುಖ್ಯಮಂತ್ರಿ ಆಗುತ್ತಾರೆ ಎಂದು ಕನಸು ಕಾಣುವವರು ಹುಚ್ಚರು’ ಎಂದರು.

‘ಡಾ.ಬಿ.ಆರ್.ಅಂಬೇಡ್ಕರ್ ಅವರನ್ನೇ ಐದು ವರ್ಷ ಸಚಿವರಾಗಿ ಉಳಿಸಿಕೊಳ್ಳಲು ಯಾವ ಪಕ್ಷಗಳೂ ಮುಂದಾಗಲಿಲ್ಲ. ರಾಜ್ಯದಲ್ಲಿ ಒಂಬತ್ತು ಬಾರಿ ಶಾಸಕರಾಗಿದ್ದ ಮಲ್ಲಿಕಾರ್ಜುನ ಖರ್ಗೆ ಅವರನ್ನು ಕಾಂಗ್ರೆಸ್ ಮುಖ್ಯಮಂತ್ರಿ ಮಾಡಲಿಲ್ಲ. ಪರಮೇಶ್ವರ್ ಅವರು ಸಿ.ಎಂ ಆಗಬಹುದು ಎಂದೇ ಉದ್ದೇಶಪೂರ್ವಕವಾಗಿ ಸೋಲಿಸಲಾಯಿತು’ ಎಂದು ಅವರು ಹೇಳಿದರು.

ಶ್ರೀರಂಗಪಟ್ಟಣಕ್ಕೆ ಪಾದಯಾತ್ರೆ: ಋಷಿ ಕುಮಾರ ಸ್ವಾಮೀಜಿ

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣ: ‘ಟಿಪ್ಪು ಮಸೀದಿ ಆವರಣದಲ್ಲಿರುವ ಹಿಂದೂಗಳ ಪವಿತ್ರ ತೀರ್ಥ ಕೊಳದ ದರ್ಶನಕ್ಕೆ ಮಂಡ್ಯ ಜಿಲ್ಲಾಡಳಿತ ಅವಕಾಶ ನೀಡಬೇಕು. ಇಲ್ಲದಿದ್ದರೆ 6–7 ಲಕ್ಷ ಹನುಮ ಮಾಲಾಧಾರಿಗಳ ಜೊತೆಗೂಡಿ ಬೆಂಗಳೂರಿನಿಂದ ಶ್ರೀರಂಗಪಟ್ಟಣದವರೆಗೆ ಪಾದಯಾತ್ರೆ ನಡೆಸಲಾಗುವುದು’ ಎಂದು ಕಾಳಿ ಮಠದ ಋಷಿಕುಮಾರ ಸ್ವಾಮೀಜಿ ಎಚ್ಚರಿಕೆ ನೀಡಿದರು.

ಭಾನುವಾರ ಪಶ್ಚಿಮ ವಾಹಿನಿಗೆ ಭೇಟಿ ನೀಡಿ ಮಾತನಾಡಿದ ಅವರು, ‘ಆಂಜನೇಯನ ದೇವಾಲಯ ಒಡೆದು ಜಾಮಿಯಾ ಮಸೀದಿ ನಿರ್ಮಿಸಿರುವುದಕ್ಕೆ ಸಾಕಷ್ಟು ಕುರುಹುಗಳಿವೆ. ಅಲ್ಲಿ ಆಂಜನೇಯನ ಪೂಜೆಗೆ ಅವಕಾಶ ನೀಡಬೇಕು’ ಎಂದು ಒತ್ತಾಯಿಸಿದರು.

‘ಮಸೀದಿ ಆವರಣದಲ್ಲಿ ಕೊಳದಲ್ಲಿ ಸ್ನಾನ ಮಾಡಿದರೆ, ತೀರ್ಥ ಸೇವನೆ ಮಾಡಿದರೆ ರೋಗರುಜಿನಗಳು ವಾಸಿಯಾಗುತ್ತವೆ. ಈ ಬಗ್ಗೆ ದಾಖಲೆಗಳಿವೆ. ತೀರ್ಥ ಸೇವನೆಗೂ ಮಂಡ್ಯ ಜಿಲ್ಲಾಧಿಕಾರಿ ಅವಕಾಶ ನೀಡಬೇಕು. ಹನುಮ ಮಾಲಾಧಾರಿಗಳು ಅಲ್ಲಿ ಸ್ನಾನ ಮಾಡಿ ಧ್ಯಾನ ಮಾಡಲು, ಪೂಜೆ ಸಲ್ಲಿಸಲೂ ಅವಕಾಶ ಕಲ್ಪಿಸಬೇಕು’ ಎಂದು ಒತ್ತಾಯಿಸಿದರು.

‘ಹಿಂದೂ ದೇವಾಲಯಗಳನ್ನು ಹಿಂಪಡೆಯುತ್ತೇವೆ’

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ‘ಇತರೆ ಧರ್ಮೀಯರು ಆಕ್ರಮಿಸಿಕೊಂಡಿರುವ ಹಿಂದೂ ದೇವಾಲಯಗಳನ್ನು ನಾವು ಕಾನೂನಾತ್ಮಕವಾಗಿಯೇ ಹಿಂಪಡೆಯುತ್ತೇವೆ’ ಎಂದು ಶಾಸಕ ಕೆ.ಎಸ್. ಈಶ್ವರಪ್ಪ ಹೇಳಿದರು.

‘ಶ್ರೀ ರಂಗಪಟ್ಟಣದ ಮಸೀದಿ ಜಾಗದಲ್ಲಿ ಆಂಜನೇಯ ದೇವಸ್ಥಾನ ಇತ್ತು. ಮಸೀದಿ ಕಟ್ಟುವಾಗ ದೇವಸ್ಥಾನವನ್ನು ಪಕ್ಕಕ್ಕೆ ಸ್ಥಳಾಂತರಿಸಿ, ಆಂಜನೇಯ ದೇವಸ್ಥಾನ ಉಳಿಸಿಕೊಟ್ಟಿದ್ದೇವೆ ಎಂದು ಮುಸ್ಲಿಮರೇ ಹೇಳುತ್ತಿದ್ದಾರೆ’ ಎಂದು ತಿಳಿಸಿದರು.

‘ದೇಶದಲ್ಲಿ ಮೊಘಲರು 36 ಸಾವಿರ ದೇವಸ್ಥಾನಗಳನ್ನು ಛಿದ್ರ ಛಿದ್ರ ಮಾಡಿದ್ದಾರೆ. ಇದು ದಿನೇ ದಿನೇ ಬೆಳಕಿಗೆ ಬರುತ್ತಿದೆ. ಸಂಘರ್ಷ ಇಲ್ಲದೇ ಕೋರ್ಟ್ ಆದೇಶದಂತೆ 36 ಸಾವಿರ ದೇವಸ್ಥಾನಗಳನ್ನೂ ಜೀರ್ಣೋದ್ಧಾರ ಮಾಡುತ್ತೇವೆ’ ಎಂದು ಭರವಸೆ ನೀಡಿದರು.

‘ಆಜಾನ್ ಕೂಗುವ ವಿಚಾರದಲ್ಲಿ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಅವರು, ಮುಸ್ಲಿಮರು ಬಹಳ ವರ್ಷದಿಂದ ಆಜಾನ್ ಕೂಗುತ್ತಾರೆ, ಬಿಜೆಪಿಯವರು ಏಕೆ ಅಡ್ಡ ಬರುತ್ತಾರೆ ಎಂದು ಹೇಳಿದ್ದಾರೆ. ಹಿಂದೂ ಮತ್ತು ಮುಸ್ಲಿಮರು ಒಟ್ಟಾಗಿ ಹೋಗೋಣ ಅಂದುಕೊಂಡಿದ್ದರೂ, ಕಾಂಗ್ರೆಸ್‌ನವರು ಇದಕ್ಕೆ ಬಿಡುತ್ತಿಲ್ಲ’ ಎಂದು ದೂರಿದರು.

ಪ್ರಿಯಾಂಕಾ ಗಾಂಧಿ ರಾಜ್ಯಕ್ಕೆ ಬಂದರೆ ಕಾಂಗ್ರೆಸ್ ನಿರ್ನಾಮ: ಈಶ್ವರಪ್ಪ

ಪ್ರಿಯಾಂಕಾ ಗಾಂಧಿ ಕರ್ನಾಟಕದಿಂದ ರಾಜ್ಯಸಭೆಗೆ ಸ್ಪರ್ಧಿಸಲಿ ಎಂದು ಡಿ.ಕೆ. ಶಿವಕುಮಾರ್ ಆಹ್ವಾನಿಸಿದ್ದಾರೆ. ಅವರು ಕರ್ನಾಟಕಕ್ಕೆ ಬಂದರೆ ವಿರೋಧ ಪಕ್ಷದಲ್ಲೂ ಕಾಂಗ್ರೆಸ್ ಇರಲ್ಲ ಎಂದು ಶಾಸಕ ಕೆ.ಎಸ್.ಈಶ್ವರಪ್ಪ ಭಾನುವಾರ ವ್ಯಂಗ್ಯವಾಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಉತ್ತರಪ್ರದೇಶದಲ್ಲಿ 394 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಠೇವಣಿ ಕಳೆದುಕೊಂಡಿತು. ಕಾಂಗ್ರೆಸ್ ಸೋಲಿನಲ್ಲಿ ಅವರ ಪಾತ್ರವೂ ಇದೆ. ಪ್ರಿಯಾಂಕಾ ಗಾಂಧಿ ಇಲ್ಲಿಂದ ರಾಜ್ಯಸಭೆಗೆ ಸ್ಪರ್ಧಿಸಿದರೆ ಅವರು ಗೆಲ್ಲುತ್ತಾರೆ. ರಾಜ್ಯದ ಉಸ್ತುವಾರಿ ವಹಿಸಿಕೊಳ್ಳುತ್ತಾರೆ. ನಂತರ ರಾಜ್ಯದಲ್ಲಿ ಕಾಂಗ್ರೆಸ್ ವಿರೋಧ ಪಕ್ಷದ ಸ್ಥಾನದಲ್ಲೂ ಉಳಿಯಲ್ಲ’ ಎಂದು ಭವಿಷ್ಯ ನುಡಿದರು.

ಸಂಪುಟ ವಿಸ್ತರಣೆ: ಸಿ.ಎಂ ಮತ್ತೆ ಪ್ರಸ್ತಾಪ

ಒಂದನೇ ಪುಟದಿಂದ

ಸಂಕಷ್ಟ ತರಬಲ್ಲ ವಿಸ್ತರಣೆ: ಖಾಲಿ ಇರುವ ಐದು ಸಚಿವ ಸ್ಥಾನಗಳ ಭರ್ತಿ ಮಾಡುವ ಕಸರತ್ತು ಪಕ್ಷದಲ್ಲಿ ಭಾರಿ ತಲ್ಲಣ ಸೃಷ್ಟಿಸುವ ಸಾಧ್ಯತೆಯೂ ಇದೆ. ಸಚಿವ ಸ್ಥಾನಕ್ಕೆ ದೊಡ್ಡ ದಂಡೇ ಸಿದ್ಧವಾಗಿ ನಿಂತಿದೆ. ಯಾರೋ ಒಬ್ಬರಿಗೆ ಕೊಟ್ಟು ಬೇರೆಯವರಿಗೆ ಬಿಟ್ಟರೆ ಅಸಮಾಧಾನ ಭುಗಿಲೇಳುವುದು ಖಚಿತ ಎಂಬ ಚರ್ಚೆಯೂ ಪಕ್ಷದ ವಲಯದಲ್ಲಿ ನಡೆದಿದೆ.

ವಿಸ್ತರಣೆ ಬದಲಿಗೆ ಸಂಪುಟ ಪುನರ್ ರಚನೆ ಕಸರತ್ತಿಗೆ ಕೈ ಹಾಕಿದರೆ, ಕೆಲವು ಸಚಿವರನ್ನು ಕೈಬಿಟ್ಟು ಹೆಚ್ಚು ಶಾಸಕರಿಗೆ ಅವಕಾಶ ನೀಡಬಹುದು. ಇದರಿಂದ ದೊಡ್ಡ ಮಟ್ಟದ ಪ್ರತಿರೋಧವನ್ನು ತಣಿಸಲು ಸಾಧ್ಯ. ವರಿಷ್ಠರು ಈ ಎಲ್ಲವನ್ನು ಅಳೆದು ತೂಗಿ ಸೂಚನೆಗಳನ್ನು ನೀಡಬಹುದು ಎಂದು ಮೂಲಗಳು ಹೇಳಿವೆ.

ಮುಂಬರುವ ವಿಧಾನಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡೇ ಸಚಿವ ಸ್ಥಾನವನ್ನು ಭರ್ತಿ ಮಾಡಲಾಗುತ್ತದೆ. ಗುಜರಾತ್, ಉತ್ತರಾಖಂಡ ರಾಜ್ಯಗಳಲ್ಲಿ ಮಾಡಿದ ಬದಲಾವಣೆ ರೀತಿಯಲ್ಲೇ ಎರಡು ಪೈಕಿ ಒಂದು ಮಾದರಿಯನ್ನು ಅನುಸರಿಸುವ ಸಾಧ್ಯತೆ ಇದೆ.

ಶ್ವಾಸ ಯೋಗ ಸಂಸ್ಥೆ, ಪತಂಜಲಿ ಯೋಗ ಸಂಸ್ಥೆ, ಕೇಂದ್ರ ಸರ್ಕಾರದ ಮೊರಾರ್ಜಿ ದೇಸಾಯಿ ಯೋಗ ವಿಜ್ಞಾನ ಸಂಸ್ಥೆ ಹಾಗೂ ಆಯುಷ್ ಇಲಾಖೆಯ ಸಹಭಾಗಿತ್ವದಲ್ಲಿ ಭಾನುವಾರ ಹಂಪಿಯ ಕಲ್ಲಿನ ರಥದ ಬಳಿ ಹಮ್ಮಿಕೊಂಡಿದ್ದ ‘ಯೋಗ ಉತ್ಸವ’ದಲ್ಲಿ ಹರಿಹರ ಪಂಚಮಸಾಲಿ ಪೀಠದ ಪೀಠಾಧ್ಯಕ್ಷ ವಚನಾನಂದ ಸ್ವಾಮೀಜಿ ಅವರು ಯೋಗ ಹೇಳಿಕೊಟ್ಟರು —ಪ್ರಜಾವಾಣಿ ಚಿತ್ರ

ಚಿಂಚೋಳಿಯಲ್ಲಿ ಭಾರಿ ಮಳೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಜಿಲ್ಲೆಯ ಚಿಂಚೋಳಿ ತಾಲ್ಲೂಕಿನಲ್ಲಿ ಭಾನುವಾರ ಸಂಜೆ ಬಿರುಸಿನ ಮಳೆ ಸುರಿಯಿತು. ಕಾಳಗಿ, ಆಳಂದ ಹಾಗೂ ಸೇಡಂ ತಾಲ್ಲೂಕುಗಳಲ್ಲೂ ಬಿರುಗಾಳಿ ಇತ್ತು.

ಗುಡುಗು ಸಹಿತ ಭಾರಿ ಬಿರುಗಾಳಿ ಬೀಸಿದ್ದು, ಗ್ರಾಮೀಣ ಪ್ರದೇಶದಲ್ಲಿ ಮನೆಯ ಮುಂದಿನ ಪತ್ರಾಸ್‌ಗಳು ಹಾರಿ ಹೋದವು. ಮರಗಳು ಉರುಳಿದವು. ಅಲ್ಲಲ್ಲಿ ವಿದ್ಯುತ್ ಪೂರೈಕೆ ವ್ಯತ್ಯಯಗೊಂಡಿತು.

ಶಾಲಾ ಆವರಣದಲ್ಲಿ ಶಸ್ತ್ರಾಸ್ತ್ರ ತರಬೇತಿ

ಒಂದನೇ ಪುಟದಿಂದ

‘ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರೇ, ಶಾಲೆಗಳಲ್ಲಿ ಹಿಜಾಬ್ ನಿರ್ಬಂಧ ವಿಧಿಸಿರುವ ನಿಮ್ಮ ಸರ್ಕಾರ, ಬಜರಂಗದಳಕ್ಕೆ ಒಂದು ವಾರ ಅಕ್ರಮ ಶಸ್ತ್ರಾಸ್ತ್ರ ತರಬೇತಿ ಶಿಬಿರ ನಡೆಸಲು ಅನುಮತಿ ಕೊಟ್ಟ ಪೊನ್ನಂಪೇಟೆಯ ಸಾಯಿ ಶಂಕರ ಶಿಕ್ಷಣ ಸಂಸ್ಥೆಯ ವಿರುದ್ಧ ಯಾವ ಕ್ರಮ ಕೈಗೊಂಡಿದೆ’ ಎಂದು ಎಸ್‌ಡಿಪಿಐ ರಾಜ್ಯ ಪ್ರಧಾನ ಕಾರ್ಯದರ್ಶಿ ಅಫ್ಸರ್ ಕೊಡ್ಲಿಪೇಟೆ ಟ್ವಿಟರ್‌ನಲ್ಲಿ ಪ್ರಶ್ನಿಸಿದ್ದಾರೆ.

‘ವಿಚಾರ ತಿಳಿಯದೆ ಆಕ್ಷೇಪಿಸುತ್ತಿರುವರಿಗೆ ತಲೆ ಸರಿಯಿಲ್ಲ. ಶೌರ್ಯ ಪ್ರಶಿಕ್ಷಣ ವರ್ಗದಲ್ಲಿ ಶಸ್ತ್ರಾಸ್ತ್ರ ತರಬೇತಿ ಕೊಡುವುದಿಲ್ಲ. ಯೋಗ ಕಲಿಸುವ, ಆತ್ಮಸ್ಥೈರ್ಯ ತುಂಬುವ ಕೆಲಸ ನಡೆಯಲಿದೆ’ ಎಂದು ವಿಶ್ವ ಹಿಂದೂ ಜಾಗರಣಾ ವೇದಿಕೆ ಜಿಲ್ಲಾ ಅಧ್ಯಕ್ಷ ಪಿ.ಕೃಷ್ಣಮೂರ್ತಿ ಹೇಳಿದರು.

ಕಾರ್ಯಕ್ರಮದ ಚಿತ್ರಗಳು ಜಾಲತಾಣದಲ್ಲಿ ವೈರಲ್ ಆದ ನಂತರ ಪೊಲೀಸರು ಶಿಬಿರದ ಮಾಹಿತಿ ಕಲೆಹಾಕಿದ್ದಾರೆ ಎಂದು ಮೂಲಗಳು ತಿಳಿಸಿವೆ. ಪ್ರತಿಕ್ರಿಯೆಗೆ ಎಸ್‌ಪಿ ಅಯ್ಯಪ್ಪ ಅವರನ್ನು ಸಂಪರ್ಕಿಸಿದರೂ ಕರೆ ಸ್ವೀಕರಿಸಲಿಲ್ಲ.

ರಸ್ತೆ ದಾಟುವಾಗ ಬೈಕ್ ಡಿಕ್ಕಿ: ನಿರ್ಮಾಪಕ ಬಾಲರಾಜ್ ಸಾವು

ಬೆಂಗಳೂರು: ಬೈಕ್ ಡಿಕ್ಕಿಹೊಡೆದು ಗಂಭೀರವಾಗಿ ಗಾಯಗೊಂಡಿದ್ದ ಚಲನಚಿತ್ರ ನಿರ್ಮಾಪಕ ಆನೇಕಲ್ ಬಾಲರಾಜ್ (64) ಚಿಕಿತ್ಸೆಗೆ ಸ್ಪಂದಿಸದೆ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.

‘ಜೆ.ಪಿ.ನಗರ 7ನೇ ಹಂತದಲ್ಲಿ ವಾಸವಿದ್ದ ಬಾಲರಾಜ್ ಅವರು, ಬೆಳಿಗ್ಗೆ 8ಗಂಟೆ ಸುಮಾರಿಗೆ ವಾಯುವಿಹಾರಕ್ಕೆ ಹೋಗಿದ್ದರು. ರಸ್ತೆ ದಾಟುವಾಗ ಪಲ್ಸರ್ ಬೈಕ್ ಗುದ್ದಿದೆ. ಬಿದ್ದಾಗ ಪಾದಚಾರಿ ಮಾರ್ಗಕ್ಕೆ ಅಳವಡಿಸಿದ್ದ ಸಿಮೆಂಟ್ ಇಟ್ಟಿಗೆಗೆ ತಲೆ ಬಡಿದು ತೀವ್ರ ರಕ್ತಸ್ರಾವವಾಗಿತ್ತು. ಸ್ಥಳೀಯರೊಬ್ಬರು ಹತ್ತಿರದ ಆಸ್ಪತ್ರೆಗೆ ದಾಖಲಿಸಿದ್ದರು’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಆರೋಪಿ ಬೈಕ್‌ನೊಂದಿಗೆ ಪರಾರಿಯಾಗಿದ್ದಾನೆ. ಸ್ಥಳದ ಸುತ್ತಲೂ ಇರುವ ಸಿಸಿಟಿವಿ ಕ್ಯಾಮೆರಾದಲ್ಲಿನ ದೃಶ್ಯಗಳನ್ನು ಪರಿಶೀಲಿಸುತ್ತಿದ್ದೇವೆ’ ಎಂದು ಹೇಳಿದ್ದಾರೆ. ಕುಮಾರಸ್ವಾಮಿ ಲೇಔಟ್ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆನೇಕಲ್ ಬಾಲರಾಜ್

ಬಾಲರಾಜ್ ಅವರು ದರ್ಶನ್ ಅಭಿನಯದ ‘ಕರಿಯ’ ಹಾಗೂ ‘ಕರಿಯ–2’, ‘ಗಣಪ’ ಮತ್ತು ‘ಬರ್ಕ್ಲಿ’ ಚಿತ್ರಗಳನ್ನು ನಿರ್ಮಿಸಿದ್ದರು. ಅವರಿಗೆ ಪತ್ನಿ, ಒಬ್ಬ ಪುತ್ರ, ಒಬ್ಬ ಪುತ್ರಿ ಇದ್ದಾರೆ. ಅಂತ್ಯಕ್ರಿಯೆ ಮೇ 16ರ ಬೆಳಿಗ್ಗೆ ಆನೇಕಲ್‌ನಲ್ಲಿ ನಡೆಯಲಿದೆ.

ಜಿ.ಟಿ.ದೇವೇಗೌಡರ ಮೊಮ್ಮಗಳು ನಿಧನ

ಮೈಸೂರು: ಶಾಸಕ ಜಿ.ಟಿ.ದೇವೇಗೌಡ ಅವರ ಮೊಮ್ಮಗಳು ಹಾಗೂ ಎಂಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶಗೌಡ ಅವರ ಪುತ್ರಿ ಗೌರಿ (3) ಅನಾರೋಗ್ಯದಿಂದ ಬೆಂಗಳೂರಿನ ನಾರಾಯಣ ಹೃದಯಾಲಯದಲ್ಲಿ ಶನಿವಾರ ತಡರಾತ್ರಿ ನಿಧನ ಹೊಂದಿದ್ದಾಳೆ.

ಗೌರಿ

ಮಗು ಕಳೆದ 8 ತಿಂಗಳಿಂದ ಅನಾರೋಗ್ಯದಿಂದ ಬಳಲುತ್ತಿತ್ತು. ಚಿಕಿತ್ಸೆಗೆ ಸ್ಪಂದಿಸಲಿಲ್ಲ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಅಂತ್ಯಕ್ರಿಯೆ ಭಾನುವಾರ ಮೈಸೂರು ತಾಲ್ಲೂಕಿನ ಗುಂಗ್ರಾಲ್ ಛತ್ರದಲ್ಲಿ ನಡೆಯಿತು.

ಸಿಕೆಸಿ ಗ್ರೂಪ್ | 150 ವರ್ಷಗಳು — ಎಥಿಕ್ಸ್ ಸಿನ್ಸ್ 1869

ಸಿ. ಕೃಷ್ಣಯ್ಯ ಚೆಟ್ಟಿ ಸತ್ಯವನ್ನು ಬಹಿರಂಗ ಪಡಿಸುತ್ತಾರೆ.

ಹಳೆಯ ಆಭರಣಗಳನ್ನು ಹೊಸದೆಂದು ಮಾರಾಟ ಮಾಡುವುದು ಅನೈತಿಕ.

ರಹಸ್ಯವಾಗಿ ಹಳೆಯ ಆಭರಣಗಳನ್ನು ಹೊಸದೆಂದು ಮರು ಮಾರಾಟ ಮಾಡುವುದನ್ನು ಬೇಡ ಅನ್ನೋಣ.

ಬಳಸಿದ ಹಳೆಯ ಆಭರಣಗಳು ಏನಾಗುತ್ತವೆ? ಅವು ಮರು ಮಾರಾಟ ಮಾಡಲು ಯೋಗ್ಯ ವಿದ್ದಾಗ. ಸಿ ಕೃಷ್ಣಯ್ಯ ಚೆಟ್ಟಿ ಯಲ್ಲಿ ಮಾತ್ರ ಅವುಗಳನ್ನು ನೈತಿಕವಾಗಿ ಬಳಸಿದ ಪ್ರೀ-ಲವ್ಡ್ ಆಭರಣಗಳ ಸಂಗ್ರಹದಲ್ಲಿ ಮಾರಾಟ ಮಾಡಲಾಗುತ್ತದೆ. ಹಸಿರು ಟ್ಯಾಗ್ ಮತ್ತು ಬಿಲ್ ಗಳನ್ನು ಪಾರದರ್ಶಕವಾಗಿ ಪ್ರೀ-ಲವ್ಡ್ ಸಂಗ್ರಹದಲ್ಲಿ ಬಹಿರಂಗ ಪಡಿಸಲಾಗಿದೆ. ನಾವು ಸತ್ಯವನ್ನು ಹೇಳೋಣ. ಮರು ಕಂಡೀಷನ್ ಮಾಡಿದ, ನವೀಕರಿಸಿದ ಮತ್ತು ಗುಣಮಟ್ಟವನ್ನು ಪರಿಶೀಲಿಸಿದ ಹಳೆಯ ಬಳಸಿದ ಆಭರಣಗಳನ್ನು ಉತ್ತಮ ಬೆಲೆಗೆ ಖರೀದಿಸಿ.

ಮೇಲಿನ ಚಿತ್ರ: ಪ್ರೀ-ಲವ್ಡ್ ಸಂಗ್ರಹದಲ್ಲಿನ ಕಿವಿಯ ಆಭರಣಗಳ ಜೋಡಿ.

ಸಿ. ಕೃಷ್ಣಯ್ಯ ಚೆಟ್ಟಿ™ ಗ್ರೂಪ್ ಆಫ್ ಜ್ಯುವೆಲರ್ಸ್

ಕಮರ್ಷಿಯಲ್ ಸ್ಟ್ರೀಟ್ • ಮೇನ್ ಗಾರ್ಡ್ ಕ್ರಾಸ್ ರೋಡ್ • ಜಯನಗರ • ಮಲ್ಲೇಶ್ವರಂ • ಫೀನಿಕ್ಸ್ ಮಾರ್ಕೆಟ್ ಸಿಟಿ

Tel: +91 80 4000 1869 / 4100 1869 • blogs.ckcjewellers.com

ಲೋಗೋಗಳು ಮತ್ತು ಟ್ರೇಡ್‌ಮಾರ್ಕ್‌ಗಳ ಯಾವುದೇ ದುರುಪಯೋಗವನ್ನು ನಿಷೇಧಿಸಲಾಗಿದೆ

ಸಿಕೆಸಿ ಸಮೂಹ ಕಂಪನಿಗಳು: C. Krishniah Chetty & Sons | C. Krishniah Chetty Jewellers | C. Krishniah Chetty & Sons | The 1869 Guild — C. Krishniah Chetty & Sons Manufacturers | C. Krishniah Chetty Charitable Trust | C. Krishniah Chetty Foundation

www.ckcjewellers.com

ದಿನಕ್ಕೆ 50 ಕಿ.ಮೀ ಹೆದ್ದಾರಿ ನಿರ್ಮಾಣ

ಪ್ರಜಾವಾಣಿ ವಾರ್ತೆ

ನವದೆಹಲಿ: 2022–23ನೇ ಸಾಲಿನಲ್ಲಿ ಪ್ರತಿ ದಿನ 50 ಕಿ.ಮೀ. ನಂತೆ ದಾಖಲೆಯ 18,000 ಕಿ.ಮೀ ಹೆದ್ದಾರಿ ನಿರ್ಮಾಣ ಮಾಡುವ ಗುರಿ ಹಾಕಿಕೊಳ್ಳಲಾಗಿದೆ ಎಂದು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಭಾನುವಾರ ತಿಳಿಸಿದೆ.

‘2025ರ ಒಳಗಾಗಿ 2 ಲಕ್ಷ ಕಿ.ಮೀ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿಪಡಿಸುವ ಉದ್ದೇಶ ಇದೆ. ಕೋವಿಡ್ ಸಂಬಂಧಿತ ಅಡೆತಡೆಗಳು ಮತ್ತು ದೇಶದ ಕೆಲವು ಭಾಗಗಳಲ್ಲಿ ವಾಡಿಕೆಗಿಂತ ಹೆಚ್ಚು ಕಾಲದವರೆಗೆ ಮಳೆ ಮುಂದುವರಿದ ಕಾರಣ 2021–22ನೇ ಸಾಲಿನಲ್ಲಿ ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಕಾಮಗಾರಿ ನಿಧಾನಗೊಂಡಿತ್ತು. ದಿನಕ್ಕೆ ಕೇವಲ 28.64 ಕಿ.ಮೀ ರಸ್ತೆಯನ್ನು ಮಾತ್ರ ನಿರ್ಮಾಣ ಮಾಡಲಾಗಿದೆ. ಆದರೆ 2020–21ರಲ್ಲಿ ದಿನವೊಂದಕ್ಕೆ ದಾಖಲೆಯ 37 ಕಿ.ಮೀ ರಸ್ತೆ ನಿರ್ಮಾಣ ಮಾಡಲಾಗಿತ್ತು’ ಎಂದು ಅದು ತಿಳಿಸಿದೆ.

ಪ್ರಾದೇಶಿಕ ಪಕ್ಷಗಳಿಗೆ ಸಿದ್ಧಾಂತವಿಲ್ಲ: ಕಾಂಗ್ರೆಸ್ ಚಿಂತನ ಶಿಬಿರದ ಸಮಾರೋಪದಲ್ಲಿ ರಾಹುಲ್

‘ಬಿಜೆಪಿ ಸೋಲಿಸಲು ಕಾಂಗ್ರೆಸ್‌ಗಷ್ಟೇ ಸಾಧ್ಯ’

ಪ್ರಜಾವಾಣಿ ವಾರ್ತೆ

ಉದಯಪುರ (ರಾಜಸ್ಥಾನ): ಸಿದ್ಧಾಂತವಿಲ್ಲದ ಪ್ರಾದೇಶಿಕ ಪಕ್ಷಗಳು, ಬಿಜೆಪಿ ಮತ್ತು ಆರ್‌ಎಸ್‌ಎಸ್ ವಿರುದ್ಧ ಹೋರಾಡುವುದು ಸಾಧ್ಯವಿಲ್ಲ ಎಂದು ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಹೇಳಿದ್ದಾರೆ. ಕಾಂಗ್ರೆಸ್ ಚಿಂತನ ಶಿಬಿರದ ಸಮಾರೋಪದಲ್ಲಿ ಅವರು ಭಾನುವಾರ ಮಾತನಾಡಿದರು. ಚಿಂತನ ಶಿಬಿರದಲ್ಲಿ 430 ಮುಖಂಡರು ಭಾಗವಹಿಸಿದ್ದರು.

‘ಪ್ರಾದೇಶಿಕ ಪಕ್ಷಗಳು ಹೋರಾಡುವುದಕ್ಕೇ ಸಾಧ್ಯವಿಲ್ಲ. ಇದು ಸಿದ್ಧಾಂತಕ್ಕಾಗಿ ಇರುವ ಹೋರಾಟ. ಪ್ರಾದೇಶಿಕ ಪಕ್ಷಗಳಿಗೆ ಸ್ಥಾನ ಇದ್ದೇ ಇದೆ. ಆದರೆ, ಈ ಪಕ್ಷಗಳು ಬಿಜೆಪಿಯನ್ನು ಸೋಲಿಸಲು ಸಾಧ್ಯವಿಲ್ಲ. ಏಕೆಂದರೆ ಈ ಪಕ್ಷಗಳಿಗೆ ಸಿದ್ಧಾಂತವೇ ಇಲ್ಲ. ಅವರ ಧೋರಣೆಯೇ ಭಿನ್ನ. ಆದರೆ, ನಮ್ಮದು ಕೇಂದ್ರೀಕೃತ ಧೋರಣೆ’ ಎಂದು ರಾಹುಲ್ ಹೇಳಿದ್ದಾರೆ.

ಬಿಜೆಪಿ ವಿರುದ್ಧದ ಹೋರಾಟದಲ್ಲಿ ಸಮಾನಮನಸ್ಕ ಪಕ್ಷಗಳ ಜತೆಗೆ ಮೈತ್ರಿ ಮಾಡಿಕೊಳ್ಳಲು ಕಾಂಗ್ರೆಸ್ ಮುಕ್ತವಾಗಿದೆ ಎಂದು ಚಿಂತನ ಶಿಬಿರದಲ್ಲಿ ಹೇಳಲಾಗಿದೆ. ಆದರೆ,

> **ಈ ದೇಶದ ಸಂಸ್ಥೆಗಳು ಕೆಲಸ ಮಾಡುವುದನ್ನು ನಿಲ್ಲಿಸಿದ ದಿನವೇ ದೇಶವು ತನ್ನೊಂದಿಗೆ ನಡೆಸುವ ಸಂವಾದವೂ ನಿಲ್ಲುತ್ತದೆ. ಅದು ಗಂಭೀರ ಸಮಸ್ಯೆ ತಂದೊಡ್ಡಬಹುದು**
> **ರಾಹುಲ್ ಗಾಂಧಿ,** ಕಾಂಗ್ರೆಸ್ ನಾಯಕ

ಪ್ರಾದೇಶಿಕ ಪಕ್ಷಗಳ ಬಗ್ಗೆ ವಿಶ್ವಾಸವಿಲ್ಲ ಎಂಬ ಅರ್ಥದ ಮಾತನ್ನು ಅದೇ ಶಿಬಿರದಲ್ಲಿ ರಾಹುಲ್ ಹೇಳಿದ್ದಾರೆ.

‘ಜನರ ಜೊತೆ ಕಾಂಗ್ರೆಸ್ ಸಂಪರ್ಕವು ಮುರಿದುಬಿದ್ದಿದೆ’ ಎಂದೂ ರಾಹುಲ್ ಅವರು ಹೇಳಿದರು.

‘ನಮ್ಮ ಹೋರಾಟ ಸಿದ್ಧಾಂತಕ್ಕಾಗಿ. ನಾವು ಜನರ ಬಳಿ ಹೋಗಿ ಅವರ ಜೊತೆ ಕುಳಿತುಕೊಳ್ಳಬೇಕು. ಜನರ ಜೊತೆ ಪಕ್ಷಕ್ಕಿದ್ದ ಸಂಪರ್ಕವನ್ನು ಪುನಃಸ್ಥಾಪಿಸಬೇಕು. ಅದಕ್ಕಾಗಿ ಅಕ್ಟೋಬರ್‌ನಲ್ಲಿ ಯಾತ್ರೆ ಕೈಗೊಳ್ಳಬೇಕು. ಜನರ ಬಳಿ ಹೋಗಿಯೇ ಅವರ ಜೊತೆ ಸಂಪರ್ಕ ಸಾಧಿಸಬೇಕು. ಜನರ ಜೊತೆ ಸಂಪರ್ಕ ಸಾಧಿಸುವ ಕೆಲಸ ಅಡ್ಡದಾರಿಯ ಮೂಲಕ ಸಾಧ್ಯವಿಲ್ಲ’ ಎಂದು ರಾಹುಲ್ ಗಾಂಧಿ ಈ ವೇಳೆ ಹೇಳಿದರು.

ಶಿಬಿರದಲ್ಲಿ ತೆಗೆದುಕೊಳ್ಳಲಾದ

ಕಾಂಗ್ರೆಸ್ ಚಿಂತನ ಶಿಬಿರಕ್ಕೆ ಬಂದ ಸೋನಿಯಾ ಗಾಂಧಿ ಅವರನ್ನು ಪಕ್ಷದ ಮುಖಂಡರು ಸ್ವಾಗತಿಸಿದರು — ಪಿಟಿಐ ಚಿತ್ರ

ಸ್ಪಷ್ಟ ನಿರ್ಧಾರಗಳ ಕುರಿತು ಸಂತಸ ವ್ಯಕ್ತಪಡಿಸಿದ ರಾಹುಲ್, ಕಾಂಗ್ರೆಸ್ ಪಕ್ಷದ ಭಾವನೆ ಏನು ಎಂಬುದನ್ನು ಪಕ್ಷದ ನಾಯಕತ್ವದ ಎದುರು ನೇರವಾಗಿ ಹೇಳಲು ಅವಕಾಶ ನೀಡಲಾಗಿದೆ. ಈ ರೀತಿಯ ಅವಕಾಶವನ್ನು ಬೇರೆ ಯಾವ ಪಕ್ಷವೂ ನೀಡುವುದಿಲ್ಲ. ಬಿಜೆಪಿ ಮತ್ತು ಆರ್‌ಎಸ್‌ಎಸ್‌ನಲ್ಲಿ ಈ ರೀತಿಯ ಸಭೆಗಳು ನಿಶ್ಚಿತವಾಗಿ ನಡೆಯುವುದಿಲ್ಲ. ಜನರು ತಮ್ಮ ಅನಿಸಿಕೆಯನ್ನು ಮುಕ್ತವಾಗಿ ಹಂಚಿಕೊಳ್ಳಲು ಕಾಂಗ್ರೆಸ್ ಸದಾ ವೇದಿಕೆ ಒದಗಿಸುತ್ತದೆ ಎಂದರು.

‘ದೇಶದ ಜನರನ್ನು ಜನಾಂಗದ ಆಧಾರದ ಮೇಲೆ ವಿಭಜಿಸಿದರೆ ಅದು ಒಂದು ದಿನ ಜನಾಂಗೀಯ ವಿಪತ್ತಾಗಿ ಬದಲಾಗುತ್ತದೆ. ಈ ವಿಪತ್ತಿಗೆ ಬಿಜೆಪಿಯೇ ಹೊಣೆ ಆಗಬೇಕಾಗುತ್ತದೆ’ ಎಂದು ಹೇಳಿದರು.

ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳಿಗೆ ಪಕ್ಷವನ್ನು ಸಜ್ಜುಗೊಳಿಸುವ ಸಲುವಾಗಿ ಪಕ್ಷದ ಸಂಘಟನೆಯಲ್ಲಿ ಆಮೂಲಾಗ್ರ ಸುಧಾರಣೆ ತರುವ ದಿಸೆಯಲ್ಲಿ ‘ನವ ಸಂಕಲ್ಪ’ ನಕ್ಷೆಯನ್ನು ಕಾಂಗ್ರೆಸ್ ಇದೇ ವೇಳೆ ಸ್ವೀಕರಿಸಿತು.

‘ಜ್ಞಾನವಾಪಿ ಮಸೀದಿ ಸಮೀಕ್ಷೆ ಬಹುತೇಕ ಪೂರ್ಣ’

ವಾರಾಣಸಿ (ಪಿಟಿಐ): ಇಲ್ಲಿನ ಜ್ಞಾನವಾಪಿ ಮಸೀದಿ ಸಂಕೀರ್ಣದ ವಿಡಿಯೊ ಚಿತ್ರೀಕರಣ ಮತ್ತು ಸಮೀಕ್ಷೆ ನ್ಯಾಯಾಲಯದ ಆದೇಶದಂತೆ, ಸತತ ಎರಡನೇ ದಿನ ಭಾನುವಾರ ಶಾಂತಿಯುತವಾಗಿ ನಡೆಯಿತು. ಮಸೀದಿ ಸಂಕೀರ್ಣದ ಹೆಚ್ಚಿನ ಭಾಗದ (ಶೇ 65ರಷ್ಟು) ಸಮೀಕ್ಷೆ ಪೂರ್ಣಗೊಂಡಿದೆ. ಬಾಕಿ ಉಳಿದಿರುವ ಸಮೀಕ್ಷೆ ಸೋಮವಾರವೂ ಮುಂದುವರಿಯಲಿದೆ.

ಭಾನುವಾರ ಬೆಳಿಗ್ಗೆ 8 ಗಂಟೆಯಿಂದ ಮಧ್ಯಾಹ್ನ 12 ಗಂಟೆವರೆಗೆ ಬಿಗಿ ಭದ್ರತೆಯಲ್ಲಿ, ನ್ಯಾಯಾಲಯ ನೇಮಿಸಿರುವ ಮೂವರು ಅಡ್ವೋಕೇಟ್ ಕಮಿಷನರ್‌ಗಳು ಹಾಗೂ ಈ ಪ್ರಕರಣಕ್ಕೆ ಸಂಬಂಧಿಸಿದ ಎಲ್ಲರ ಸಮ್ಮುಖದಲ್ಲಿ ಸಮೀಕ್ಷೆ ಮತ್ತು ವಿಡಿಯೊ ಚಿತ್ರೀಕರಣ ನಡೆಯಿತು. ಬಾಕಿ ಇರುವ ಸಮೀಕ್ಷೆ ಸೋಮವಾರ ಬೆಳಿಗ್ಗೆ 8ರಿಂದ ಆರಂಭವಾಗಲಿದೆ ಎಂದು ಜಿಲ್ಲಾಧಿಕಾರಿ ಕೌಶಲ್ ರಾಜ್ ಶರ್ಮಾ ತಿಳಿಸಿದರು.

‘ಮಸೀದಿಯ ಆವರಣದೊಳಗೆ ವಿಡಿಯೊ ಚಿತ್ರೀಕರಣಕ್ಕೆ ಅವಕಾಶವಿಲ್ಲ, ಅಲ್ಲದೇ ಪಕ್ಷಪಾತದ ಸಮೀಕ್ಷೆ ನಡೆಯುತ್ತಿದೆ’ ಎಂದು ಮಸೀದಿಯ ಆಡಳಿತ ಸಮಿತಿ ಆಕ್ಷೇಪಿಸಿದ್ದರಿಂದ ಕಳೆದ ವಾರ ಸಮೀಕ್ಷೆ ಸ್ಥಗಿತಗೊಂಡಿತ್ತು. ನ್ಯಾಯಾಲಯ ನೇಮಿಸಿರುವ ಅಡ್ವೋಕೇಟ್ ಕಮಿಷನರ್‌ಗಳ ಸಮ್ಮುಖದಲ್ಲಿ ಶನಿವಾರದಿಂದ ಸಮೀಕ್ಷೆ, ವಿಡಿಯೊ ಚಿತ್ರೀಕರಣ ಪುನರಾರಂಭವಾಗಿದೆ. ಜ್ಞಾನವಾಪಿ ಮಸೀದಿಯು ಇಲ್ಲಿನ ಹೆಸರಾಂತ ಕಾಶಿ ವಿಶ್ವನಾಥ ದೇಗುಲಕ್ಕೆ ಹೊಂದಿಕೊಂಡಂತೇ ಇದೆ. ಹಿಂದೂ ದೇವರ ಮೂರ್ತಿಗಳ ಪೂಜೆಗೆ ಅವಕಾಶ ಕಲ್ಪಿಸುವಂತೆ ಕೋರಿ ಐವರು ಮಹಿಳೆಯರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸುತ್ತಿರುವ ಸ್ಥಳೀಯ ನ್ಯಾಯಾಲಯ ಸಮೀಕ್ಷೆಗೆ ಆದೇಶಿಸಿತ್ತು.

ಅಸ್ಸಾಂನಲ್ಲಿ ಪ್ರವಾಹ... ಅಸ್ಸಾಂನ ನಾಗೋನ್ ಜಿಲ್ಲೆಯ ಬಕುಲಾ ಗುರಿ ಗ್ರಾಮದಲ್ಲಿ ಭಾನುವಾರ ಉಂಟಾದ ಪ್ರವಾಹದ ನೀರಿನಲ್ಲಿ ರಸ್ತೆ ದಾಟಲು ಸ್ಥಳೀಯರು ನಾಡ ದೋಣಿ ಬಳಸಿದರು – ಪಿಟಿಐ ಚಿತ್ರ

ಕೇರಳದ ಐದು ಜಿಲ್ಲೆಗಳಿಗೆ ರೆಡ್ ಅಲರ್ಟ್

ತಿರುವನಂತಪುರ (ಪಿಟಿಐ): ನೈರುತ್ಯ ಮುಂಗಾರು ಪ್ರವೇಶಕ್ಕೆ ಪೂರ್ವಭಾವಿಯಾಗಿ ಕೇರಳದಾದ್ಯಂತ ಭಾರಿ ಮಳೆಯಾಗುತ್ತಿದ್ದು, ಐದು ಜಿಲ್ಲೆಗಳಾದ ಎರ್ನಾಕುಲಂ, ಇಡುಕ್ಕಿ, ತ್ರಿಶ್ಶೂರ್, ಕೋಯಿಕ್ಕೋಡ್, ಕಣ್ಣೂರಿನಲ್ಲಿ ಸೋಮವಾರದವರೆಗೆ ರೆಡ್ ಅಲರ್ಟ್ ಘೋಷಿಸಲಾಗಿದೆ.

ಕಾಸರಗೋಡು ಹೊರತುಪಡಿಸಿ ರಾಜ್ಯದ ಇತರ ಜಿಲ್ಲೆಗಳಲ್ಲಿ ಭಾನುವಾರ ಆರೆಂಜ್ ಅಲರ್ಟ್‌ಅನ್ನು ಭಾರತೀಯ ಹವಾಮಾನ ಇಲಾಖೆ ಘೋಷಿಸಿತ್ತು.

ಈ ಬಗ್ಗೆ ಮಾಧ್ಯಮಗಳಿಗೆ ತಿಳಿಸಿದ ರಾಜ್ಯ ಕಂದಾಯ ಸಚಿವ ಕೆ.ರಾಜನ್, ‘ರಾಜ್ಯದಲ್ಲಿ ಸದ್ಯಕ್ಕೆ ನಿರಾಶ್ರಿತರ ಶಿಬಿರಗಳ ಅಗತ್ಯ ಇಲ್ಲ. ಇದೇ ರೀತಿ ಮಳೆ ಮುಂದುವರಿದರೆ ಭೂಕುಸಿತ ಉಂಟಾಗುವ ಸಾಧ್ಯತೆ ಇದೆ. ಅಪಾಯಪೀಡಿತ ಸ್ಥಳಗಳಿಂದ ಜನರನ್ನು ಸ್ಥಳಾಂತರಿಸಲು ಸಂಬಂಧಿತ ಇಲಾಖೆಗಳಿಗೆ ಸೂಚಿಸಲಾಗಿದೆ’ ಎಂದು ಹೇಳಿದರು.

ಭೂಕುಸಿತ ಮೂವರ ಸಾವು(ಗುವಾಹಟಿ ವರದಿ): ಅಸ್ಸಾಂನ ದಿಮಾ ಹಸಾವೊ ಜಿಲ್ಲೆಯಲ್ಲಿ ಶನಿವಾರ ರಾತ್ರಿ ಸಂಭವಿಸಿದ ಭಾರಿ ಭೂಕುಸಿತದಲ್ಲಿ ಮಹಿಳೆ ಸೇರಿ ಮೂವರು ಮೃತಪಟ್ಟಿದ್ದಾರೆ.

ಭೂಕುಸಿತದಿಂದ ವಿವಿಧ ನಗರಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆ, ರೈಲು ಸಂಪರ್ಕಗಳು ಕಡಿತಗೊಂಡಿವೆ ಎಂದು ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ ತಿಳಿಸಿದೆ.

ಪ್ರವಾಹದಿಂದ ಕಚಾರ್ ಜಿಲ್ಲೆಗೆ ಹೆಚ್ಚು ಹಾನಿಯಾಗಿದ್ದು, 21 ಸಾವಿರಕ್ಕೂ ಹೆಚ್ಚು ಜನ ಸಂತ್ರಸ್ತರಾಗಿದ್ದಾರೆ. ಕರ್ಬಿ ಆಂಗ್ಲಾಂಗ್, ದೇಮಾಜಿಯಲ್ಲಿ ಸಹ ತೊಂದರೆ ಉಂಟಾಗಿದೆ.

ಸುದ್ದಿ 2 ನಿಮಿಷ

ರಾಜ್ಯದ ನೀತಿಯಂತೆ ಅಪರಾಧಿಯ ಬಿಡುಗಡೆ ಪರಿಗಣಿಸಿ: ಸುಪ್ರೀಂ ಕೋರ್ಟ್

ನವದೆಹಲಿ (ಪಿಟಿಐ): ‘ಅಪರಾಧ ಎಸಗಿದ ರಾಜ್ಯದಲ್ಲಿ ಅನ್ವಯವಾಗುವ ನೀತಿಯ ಪ್ರಕಾರ ಅಪರಾಧಿಯ ಅವಧಿಪೂರ್ವ ಬಿಡುಗಡೆಯನ್ನು ಪರಿಗಣಿಸಬೇಕೇ ಹೊರತು ವಿಚಾರಣೆಯನ್ನು ವರ್ಗಾಯಿಸಿ ಮುಕ್ತಾಯಗೊಳಿಸಿದ ಸ್ಥಳವನ್ನು ಆಧರಿಸಿ ಅಲ್ಲ’ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ಅಜಯ್ ರಸ್ತೋಗಿ ಮತ್ತು ವಿಕ್ರಮ್ ನಾಥ್ ಅವರನ್ನೊಳಗೊಂಡ ನ್ಯಾಯಪೀಠವು, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ (ಸಿಆರ್‌ಪಿಸಿ) 1973, ಸೆಕ್ಷನ್ 432 (7) ಅನ್ನು ಉಲ್ಲೇಖಿಸಿ ಪ್ರಕರಣವೊಂದರ ವಿಚಾರಣೆ ವೇಳೆ ಈ ರೀತಿಯಾಗಿ ಅಭಿಪ್ರಾಯಪಟ್ಟಿದೆ.

ಶಿಕ್ಷೆಯ ಸಮಯದಲ್ಲಿ ಅಸ್ತಿತ್ವದಲ್ಲಿದ್ದ ಕಾಯ್ದೆಯ ಅಡಿಯಲ್ಲಿ ಅವಧಿಪೂರ್ವ ಬಿಡುಗಡೆಗಾಗಿ ತನ್ನ ಅರ್ಜಿಯನ್ನು ಪರಿಗಣಿಸಲು ಗುಜರಾತ್ ರಾಜ್ಯಕ್ಕೆ ನಿರ್ದೇಶನವನ್ನು ಕೋರಿ ಅಪರಾಧಿಯೊಬ್ಬರು ಸಲ್ಲಿಸಿದ ಮನವಿಯನ್ನು ಸುಪ್ರೀಂ ಕೋರ್ಟ್ ವಿಚಾರಣೆ ನಡೆಸುತ್ತಿದೆ.

ಮುಖ್ಯ ಚುನಾವಣಾ ಆಯುಕ್ತರಾಗಿ ರಾಜೀವ್ ಕುಮಾರ್ ಅಧಿಕಾರ ಸ್ವೀಕಾರ

ನವದೆಹಲಿ (ಪಿಟಿಐ): ಮಾಜಿ ಹಣಕಾಸು ಕಾರ್ಯದರ್ಶಿ ರಾಜೀವ್ ಕುಮಾರ್ ಅವರು 25ನೇ ಮುಖ್ಯ ಚುನಾವಣಾ ಆಯುಕ್ತರಾಗಿ (ಸಿಇಸಿ) ಭಾನುವಾರ ಅಧಿಕಾರ ವಹಿಸಿಕೊಂಡರು.

ರಾಜೀವ್ ಕುಮಾರ್ ಅವರು 2020ರ ಸೆ. 1ರಿಂದ ಚುನಾವಣಾ ಆಯುಕ್ತರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಈ ಹಿಂದೆ ಹಣಕಾಸು ಸೇವೆಗಳ ಕಾರ್ಯದರ್ಶಿ ಮತ್ತು ಹಣಕಾಸು ಕಾರ್ಯದರ್ಶಿಯಾಗಿಯೂ ಕಾರ್ಯ ನಿರ್ವಹಿಸಿದ್ದರು.

ಜುಲೈ ಮತ್ತು ಆಗಸ್ಟ್‌ನಲ್ಲಿ ನಡೆಯಲಿರುವ ರಾಷ್ಟ್ರಪತಿ ಮತ್ತು ಉಪ ರಾಷ್ಟ್ರಪತಿ ಸ್ಥಾನಗಳ ಚುನಾವಣೆ ಸೇರಿದಂತೆ 2024ರ ಲೋಕಸಭಾ ಚುನಾವಣೆ ಮತ್ತು ಹಲವು ರಾಜ್ಯಗಳ ವಿಧಾನಸಭಾ ಚುನಾವಣೆಗಳು ರಾಜೀವ್ ಕುಮಾರ್ ಅವರ ಮೇಲ್ವಿಚಾರಣೆಯಲ್ಲಿ ನಡೆಯಲಿವೆ. ರಾಜೀವ್ ಅವರ ಅಧಿಕಾರಾವಧಿ 2025ರ ಫೆಬ್ರುವರಿವರೆಗೆ ಇದೆ.

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net

Prajavani.net Prajavani Prajavani

ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಮತಾಂತರ ನಿಷೇಧಕ್ಕೆ ಕಾಯ್ದೆ ಬೇಕಿತ್ತಾ?

ಭಾಗವಹಿಸುವವರು:

ಬಸವ ನಾಗಿದೇವ ಸ್ವಾಮೀಜಿ, ಚಲವಾದಿ ಗುರುಪೀಠ, ಚಿತ್ರದುರ್ಗ

ಅಕ್ಬರ್ ಅಲಿ ಉಡುಪಿ, ರಾಜ್ಯ ಕಾರ್ಯದರ್ಶಿ, ಜಮಾಅತೆ ಇಸ್ಲಾಮಿ ಹಿಂದ್ ಕರ್ನಾಟಕ

ಶ್ರೀಧರ ಪ್ರಭು, ವಕೀಲ, ಬೆಂಗಳೂರು

ಎ. ಡೆರಿಕ್ ಅನಿಲ್, ವಕೀಲ, ಬೆಂಗಳೂರು

ಸಂವಾದ ಬೆಳಿಗ್ಗೆ 11 ರಿಂದ 12

ಪ್ರಜಾವಾಣಿ ಕನ್ನಡ ಧ್ವನಿ

ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9

ಸಂಪಾದಕೀಯ: ಬೆಳಿಗ್ಗೆ 9.30

ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ಒಳನೋಟ

ಪ್ರತಿಕ್ರಿಯೆಗಳಿಗಾಗಿ ಈ ಲಿಂಕ್‌ಗೆ ಭೇಟಿ ನೀಡಿ https://bit.ly/3wpcwzL

ತ್ರಿಪುರಾ ಮುಖ್ಯಮಂತ್ರಿಯಾಗಿ ಡಾ.ಮಾಣಿಕ್ ಪ್ರಮಾಣವಚನ

ಅಗರ್ತಲಾ (ಪಿಟಿಐ): ತ್ರಿಪುರಾದ ನೂತನ ಮುಖ್ಯಮಂತ್ರಿಯಾಗಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಡಾ.ಮಾಣಿಕ್ ಸಾಹಾ ಅವರು ಭಾನುವಾರ ಬೆಳಿಗ್ಗೆ ಪ್ರಮಾಣವಚನ ಸ್ವೀಕರಿಸಿದರು.

ಇಲ್ಲಿನ ರಾಜಭವನದಲ್ಲಿ ಸಾಹಾ ಅವರಿಗೆ ರಾಜ್ಯಪಾಲ ಎಸ್.ಎನ್.ಆರ್ಯ ಪ್ರಮಾಣವಚನ ಬೋಧಿಸಿದರು. ತ್ರಿಪುರಾದಲ್ಲಿ ನಡೆದ ದಿಢೀರ್ ರಾಜಕೀಯ ಬೆಳವಣಿಗೆಯಲ್ಲಿ ಶನಿವಾರ ಸಂಜೆ ಬಿಪ್ಲಬ್ ದೇಬ್ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಬಳಿಕ ನಡೆದ ತುರ್ತು ಸಭೆಯಲ್ಲಿ ಮಾಣಿಕ್ ಸಾಹಾ ಅವರನ್ನು ಶಾಸಕಾಂಗ ಪಕ್ಷದ ನಾಯಕರನ್ನಾಗಿ ಆಯ್ಕೆ ಮಾಡಲಾಯಿತು.

ದಂತವೈದ್ಯರಾಗಿರುವ ಸಾಹಾ 2016ರಲ್ಲಿ ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದ್ದರು. 2020ರಲ್ಲಿ ಬಿಜೆಪಿಯ ರಾಜ್ಯ ಘಟಕದ ಅಧ್ಯಕ್ಷರಾಗಿ ನೇಮಕವಾಗಿದ್ದರು. ಈ ವರ್ಷ ಮಾರ್ಚ್‌ನಲ್ಲಿ ರಾಜ್ಯಸಭೆಗೆ ಆಯ್ಕೆಯಾಗಿದ್ದರು.



ಪ್ರಮಾಣ ವಚನ ಸ್ವೀಕರಿಸಿದ ಮಾಣಿಕ್ ಸಾಹಾ —ಪಿಟಿಐ ಚಿತ್ರ

‘ಪ್ರಧಾನಿ ನರೇಂದ್ರ ಮೋದಿ ಅವರ ಅಭಿವೃದ್ಧಿಯ ಕಾರ್ಯಸೂಚಿಯ ಮೇರೆಗೆ ತ್ರಿಪುರಾದ ಜನರಿಗಾಗಿ ಕೆಲಸ ಮಾಡುತ್ತೇನೆ’ ಎಂದು ಪ್ರಮಾಣವಚನ ಸ್ವೀಕಾರ ಸಮಾರಂಭದ ನಂತರ ಮಾಣಿಕ್ ಸಾಹಾ ಹೇಳಿದ್ದಾರೆ.

ಬಹಿಷ್ಕಾರ: ಬಿಜೆಪಿ ಆಡಳಿತದಲ್ಲಿ ರಾಜ್ಯದಲ್ಲಿ ಫ್ಯಾಸಿಸ್ಟ್ ಧೋರಣೆಯ ಹಿಂಸಾಚಾರ ನಡೆಯುತ್ತಿದೆ ಎಂದು ಆರೋಪಿಸಿ ಪ್ರತಿಪಕ್ಷ ಸಿಪಿಎಂ ಶಾಸಕರು ಪ್ರಮಾಣವಚನ ಸಮಾರಂಭವನ್ನು ಬಹಿಷ್ಕರಿಸಿದರು.

ಮುಂಬರುವ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯು ಗೆಲುವು ಸಾಧಿಸುವ ತಂತ್ರದ ಭಾಗವಾಗಿ ಸಾಹಾ ಅವರನ್ನು ನೇಮಕ ಮಾಡಲಾಗಿದೆ ಎಂದು ರಾಜಕೀಯ ತಜ್ಞರು ವಿಶ್ಲೇಷಿಸಿದ್ದಾರೆ.

ಕಾಂಗ್ರೆಸ್‌ಗೆ ವಿದಾಯ: ವಾರದಲ್ಲಿ ಹಾರ್ದಿಕ್ ಪಟೇಲ್ ನಿರ್ಧಾರ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಗುಜರಾತ್ ಕಾಂಗ್ರೆಸ್ ಕಾರ್ಯಾಧ್ಯಕ್ಷ ಹಾರ್ದಿಕ್ ಪಟೇಲ್ ಅವರು ಪಕ್ಷದಲ್ಲಿಯೇ ಮುಂದುವರಿಯಬೇಕೇ ಅಥವಾ ಪಕ್ಷ ತ್ಯಜಿಸಬೇಕೇ ಎಂಬುದರ ಬಗ್ಗೆ ಒಂದು ವಾರದಲ್ಲಿ ನಿರ್ಧರಿಸಲಿದ್ದಾರೆ.

ಹಾರ್ದಿಕ್ ಪಟೇಲ್ ಯಾವುದೇ ಸಮಯದಲ್ಲಿ ಕಾಂಗ್ರೆಸ್ ಪಕ್ಷ ತೊರೆಯಬಹುದು ಎಂಬ ವದಂತಿ ಬೆನ್ನಲ್ಲೇ, ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳಲು ನರೇಶ್ ಪಟೇಲ್ ಸೇರಿದಂತೆ ಪ್ರಮುಖ ಪಾಟೀದಾರ್ ನಾಯಕರೊಂದಿಗೆ ಅವರು ಭಾನುವಾರ ಸಭೆ ನಡೆಸಿದರು. ಸಭೆಯಲ್ಲಿ ‘ಹಾರ್ದಿಕ್ ಪಟೇಲ್ ಕಾಂಗ್ರೆಸ್ ಹೈಕಮಾಂಡ್ ಭೇಟಿಯಾಗಿ ಅನಂತರ ಒಂದು ವಾರದ ಒಳಗಾಗಿ ಅಂತಿಮ ನಿರ್ಧಾರ ಕೈಗೊಳ್ಳಬೇಕು’ ಎಂಬ ನಿರ್ಣಯಕ್ಕೆ ಬರಲಾಗಿದೆ ಎಂದು ಮೂಲಗಳು ತಿಳಿಸಿವೆ.

ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ನರೇಶ್ ಪಟೇಲ್, ‘ಇಲ್ಲಿಯವರೆಗೂ ಏನೂ ಬದಲಾಗಿಲ್ಲ. ಹಾರ್ದಿಕ್ ಕಾಂಗ್ರೆಸ್ ಪಕ್ಷದಲ್ಲೇ ಇದ್ದಾರೆ. ಕಾಂಗ್ರೆಸ್ ತ್ಯಜಿಸಬೇಕೇ ಅಥವಾ ಇನ್ನೊಂದು ಪಕ್ಷ ಸೇರ್ಪಡೆಯಾಗಬೇಕೇ ಎಂಬ ಬಗ್ಗೆ ಸಭೆಯಲ್ಲಿ ಚರ್ಚಿಸಿಲ್ಲ. ಈ ಬಗ್ಗೆ ಅಂತಿಮ ನಿರ್ಧಾರ ಕೈಗೊಳ್ಳಲು ಮುಂದಿನ 5–7 ದಿನದಲ್ಲಿ ಮತ್ತೊಂದು ಮಹತ್ವದ ಸಭೆ ಕರೆಯಲು ನಿರ್ಣಯ ತೆಗೆದುಕೊಂಡಿದ್ದೇವೆ’ ಎಂದು ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ಸಚಿವರ ಪುತ್ರನ ಬಂಧನಕ್ಕೆ ಜೈಪುರ ತಲುಪಿದ ಪೊಲೀಸ್

ಜೈಪುರ/ ನವದೆಹಲಿ (ಪಿಟಿಐ): ಯುವತಿ ಮೇಲೆ ಅತ್ಯಾಚಾರ ನಡೆಸಿದ ಆರೋಪ ಪ್ರಕರಣದಲ್ಲಿ ತಲೆಮರೆಸಿಕೊಂಡಿರುವ ರಾಜಸ್ಥಾನದ ಆರೋಗ್ಯ ಸಚಿವ ಮಹೇಶ್ ಜೋಶಿ ಅವರ ಪುತ್ರ ರೋಹಿತ್ ಜೋಶಿಯನ್ನು ಬಂಧಿಸಲು ದೆಹಲಿ ಪೊಲೀಸ್ ಅಧಿಕಾರಿಗಳು ಭಾನುವಾರ ಜೈಪುರ ತಲುಪಿದ್ದಾರೆ.

ಇದನ್ನು ರಾಜಸ್ಥಾನ ಪೊಲೀಸರು ಖಚಿತಪಡಿಸಿದ್ದು, ‘ನಾವು ತನಿಖೆಗೆ ಸಂಪೂರ್ಣ ಸಹಕಾರ ನೀಡುತ್ತೇವೆ’ ಎಂದು ಜೈಪುರ ಪೊಲೀಸ್ ಆಯುಕ್ತ ಆನಂದ್ ಶ್ರೀವಾಸ್ತವ ತಿಳಿಸಿದ್ದಾರೆ.

ದೆಹಲಿ ಪೊಲೀಸರು ಜೈಪುರದ ಸೇನ್ ಕಾಲೋನಿಯಲ್ಲಿ ಸಚಿವ ಜೋಶಿ ಅವರ ನಿರ್ಮಾಣ ಹಂತದ ನಿವಾಸಕ್ಕೆ ಹೋಗಿ, ರೋಹಿತ್ ಮೇ 18ರಂದು ಮಧ್ಯಾಹ್ನ 1 ಗಂಟೆಯೊಳಗೆ ವಿಚಾರಣೆಗೆ ಹಾಜರಾಗಬೇಕೆಂದು ನೋಟಿಸ್ ಅಂಟಿಸಿದ್ದಾರೆ.

ಸಚಿವರ ಅಧಿಕೃತ ನಿವಾಸಕ್ಕೆ ಪೊಲೀಸರು ಕಾಲಿಟ್ಟಿಲ್ಲ.

‘ಸಚಿವರ ಪುತ್ರ ರೋಹಿತ್ ಒಂದು ವರ್ಷದಲ್ಲಿ ಅನೇಕ ಬಾರಿ ತನ್ನ ಮೇಲೆ ಅತ್ಯಾಚಾರ ನಡೆಸಿದ್ದಾನೆ’ ಎಂದು ಜೈಪುರದ 23 ವರ್ಷದ ಯುವತಿ ದೂರು ನೀಡಿದ್ದರು. ದೆಹಲಿಯ ಪಿಎಸ್ ಸದರ್ ಬಜಾರ್ ಠಾಣೆ ಪೊಲೀಸರು ‘ಜೀರೊ ಎಫ್‌ಐಆರ್’ (ಠಾಣಾ ವ್ಯಾಪ್ತಿಯ ಹೊರಗೆ ನಡೆದ ಪ್ರಕರಣ ವಿಳಂಬ ಮಾಡದೇ ಶೀಘ್ರ ಕ್ರಮಕ್ಕಾಗಿ ದಾಖಲಿಸುವ ಎಫ್‌ಐಆರ್) ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ನಟಿ ಚಿತಳೆ 18ರವರೆಗೆ ಪೊಲೀಸ್ ಕಸ್ಟಡಿಗೆ

ಠಾಣೆ (ಪಿಟಿಐ): ಎನ್‌ಸಿಪಿ ಅಧ್ಯಕ್ಷ ಶರದ್ ಪವಾರ್ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಅವಹೇಳನಕಾರಿ ಪೋಸ್ಟ್ ಹಂಚಿಕೊಂಡಿರುವ ಆರೋಪದ ಮೇಲೆ ಶನಿವಾರ ಬಂಧಿತರಾಗಿರುವ ಮರಾಠಿ ನಟಿ ಕೇತಕಿ ಚಿತಳೆ ಅವರನ್ನು ಇದೇ 18ರ ವರೆಗೆ ಪೊಲೀಸ್ ಕಸ್ಟಡಿಗೆ ಒಪ್ಪಿಸಲಾಗಿದೆ.

ಮರಾಠಿ ಭಾಷೆಯಲ್ಲಿರುವ ಪೋಸ್ಟ್ ಅನ್ನು ಚಿತಳೆ ಶುಕ್ರವಾರ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದರು. ‘ನೀವು ಬ್ರಾಹ್ಮಣರನ್ನು ದ್ವೇಷಿಸುತ್ತೀರಿ, ನಿಮಗಾಗಿ ನರಕ ಕಾಯುತ್ತಿದೆ’ ಎಂದು ಅದರಲ್ಲಿ ಬರೆಯಲಾಗಿತ್ತು. ಚಿತಳೆ ಅವರಲ್ಲದೆ ಫಾರ್ಮಸಿ ವಿದ್ಯಾರ್ಥಿ ನಿಖಿಲ್ ಭಾಮ್ರೆ ಎಂಬುವವರನ್ನೂ ಬಂಧಿಸಲಾಗಿದೆ.

ಮತ್ತೆ ಮೂರು ಎಫ್‌ಐಆರ್ ದಾಖಲು: ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇತಕಿ ಚಿತಳೆ ವಿರುದ್ಧ ಮುಂಬೈನಲ್ಲಿ ಎರಡು ಹಾಗೂ ಅಕೋಲಾ ಜಿಲ್ಲೆಯಲ್ಲಿ ಒಂದು ಎಫ್‌ಐಆರ್ ದಾಖಲಾಗಿವೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

ಈ ಹಿಂದೆ ಠಾಣೆ, ಪುಣೆ ಮತ್ತು ಧುಲೆ ಜಿಲ್ಲೆಯಲ್ಲೂ ಇವರ ವಿರುದ್ಧ ಪ್ರಕರಣಗಳು ದಾಖಲಾಗಿದ್ದವು.

ಹಳ್ಳದಲ್ಲಿ ಉದ್ಯಮಿಯ ಮೃತದೇಹ ಪತ್ತೆ

ಠಾಣೆ(ಪಿಟಿಐ): ಮುಂಬೈಯ ಉದ್ಯಮಿಯೊಬ್ಬರ ಮೃತದೇಹವು ಇಲ್ಲಿನ ಹಳ್ಳವೊಂದರಲ್ಲಿ ಭಾನುವಾರ ಪತ್ತೆಯಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಇಲ್ಲಿನ ವಾಶಿಯ ಹಳ್ಳದಲ್ಲಿ ಮೃತದೇಹ ಗಮನಿಸಿದ ದಾರಿಹೋಕರು ಪೊಲೀಸರಿಗೆ ಮಾಹಿತಿ ನೀಡಿದರು. ಮೃತರನ್ನು ಮುಂಬೈ ಉಪನಗರ ಭಾಂಡೂಪ್ ನಿವಾಸಿ ಪ್ರಶಾಂತ್ ತುಕಾರಂ ವಿಚಾರೆ(54) ಎಂದು ಗುರುತಿಸಲಾಗಿದ್ದು, ದೇಹವನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಗಿದೆ.

‘ಶಿವಸೇನಾ ಹಿಂದುತ್ವ ತ್ಯಜಿಸಿದೆ’

ನವದೆಹಲಿ (ಪಿಟಿಐ): ಮಹಾರಾಷ್ಟ್ರದ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರ ವಿರುದ್ಧ ಭಾನುವಾರ ತೀವ್ರ ವಾಗ್ದಾಳಿ ನಡೆಸಿದ ಸಂಸದೆ ನವನೀತ್ ಕೌರ್ ರಾಣಾ ಅವರು, ‘ಶಿವಸೇನಾವು ಅದರ ಸಂಸ್ಥಾಪಕ ಬಾಳಾ ಸಾಹೇಬ್ ಠಾಕ್ರೆ ಅವರ ಹಿಂದುತ್ವದ ಹಾದಿಯನ್ನು ತ್ಯಜಿಸಿದ್ದು, ನಂ. 10 ಜನಪಥ್‌ನ (ಕಾಂಗ್ರೆಸ್ ಅಧ್ಯಕ್ಷರ ನಿವಾಸ) ನಿರ್ದೇಶನದದಂತೆ ವರ್ತಿಸುತ್ತಿದೆ’ ಎಂದು ಆರೋಪಿಸಿದ್ದಾರೆ.

‘ಔರಂಗಾಬಾದ್ ಅನ್ನು ಸಂಭಾಜಿ ನಗರ ಎಂದು ಮರುನಾಮಕರಣ ಮಾಡುವುದಾಗಿ ಹಿಂದೆ ಶಿವಸೇನಾ ಘೋಷಿಸಿತ್ತು. ಆದರೆ, ಈಗ ಮುಖ್ಯಮಂತ್ರಿ ಅದರ ಅಗತ್ಯವಿಲ್ಲ ಎನ್ನುತ್ತಿದ್ದಾರೆ. ಮರು ನಾಮಕರಣ ಮಾಡಿದರೆ ಮೈತ್ರಿಕೂಟದ ಪಾಲುದಾರರು ತಮ್ಮ ಬೆಂಬಲ ವಾಪಸ್ ಪಡೆಯುತ್ತಾರೆ ಎಂಬ ಭಯ ಮುಖ್ಯಮಂತ್ರಿ ಅವರನ್ನು ಆವರಿಸಿದೆ’ ಎಂದು ದೂರಿದ್ದಾರೆ.

ಹೆಚ್ಚುತ್ತಿರುವ ಕೋವಿಡ್: ಮೃತರ ಸಂಖ್ಯೆ 42ಕ್ಕೆ ಏರಿಕೆ

ಉತ್ತರ ಕೊರಿಯಾದಲ್ಲಿ 15 ಮಂದಿ ಸಾವು

ಸೋಲ್ (ಎಪಿ): ಉತ್ತರ ಕೊರಿಯಾದಲ್ಲಿ ಕೋವಿಡ್‌ನಿಂದ ಭಾನುವಾರ 15 ಮಂದಿ ಮೃತಪಟ್ಟಿದ್ದಾರೆ. ಸಾವಿರಾರು ಜನರು ಸೋಂಕು ಪೀಡಿತರಾಗಿದ್ದಾರೆ ಎಂದು ಸ್ಥಳೀಯ ಮಾಧ್ಯಮ ವರದಿ ಮಾಡಿದೆ.

ದೇಶ ಕೋವಿಡ್ ಮುಕ್ತವಾಗಿದೆ ಎಂದು ಪ್ರತಿಪಾದಿಸಿದ್ದ ಉತ್ತರ ಕೊರಿಯಾ ಕಳೆದ ಗುರುವಾರ ಪ್ರಥಮ ಬಾರಿಗೆ ಮೊದಲ ಸೋಂಕು ಪ್ರಕರಣ ಪತ್ತೆಯಾಗಿದೆ ಎಂದು ಪ್ರಕಟಿಸಿತ್ತು. ಹಿಂದೆಯೇ ದೇಶವ್ಯಾಪಿ ಲಾಕ್‌ಡೌನ್ ಘೋಷಿಸಿತ್ತು.

ಕೊರಿಯಾದ ಅಧಿಕೃತ ಸೆಂಟ್ರಲ್ ನ್ಯೂಸ್ ಏಜೆನ್ಸಿ ಪ್ರಕಾರ, ಭಾನುವಾರವೇ 2,96,180 ಮಂದಿ ಸೋಂಕಿತರಾಗಿದ್ದು, ಸೋಂಕಿತರ ಸಂಖ್ಯೆ 8,20,620ಕ್ಕೆ ಏರಿದೆ. ಭಾನುವಾರ 15 ಮಂದಿ ಸತ್ತಿದ್ದು, ಮೃತರ ಸಂಖ್ಯೆ 42ಕ್ಕೆ ಏರಿದೆ.

ಶಂಕಿತ ಸೋಂಕು ಬಾಧಿತರನ್ನು ತಪಾಸಣೆಗೆ ಒಳಪಡಿಸಲು ಉತ್ತರ ಕೊರಿಯಾದಲ್ಲಿ ಅಗತ್ಯ ಕಿಟ್‌ಗಳು ಲಭ್ಯವಿಲ್ಲ ಎಂದು ಉತ್ತರ ಕೊರಿಯಾದ ಸೆಜೊಂಗ್ ಇನ್‌ಸ್ಟಿಟ್ಯೂಟ್‌ನ ತಜ್ಞ ಚಿಯೊಂಗ್ ಸಿಯೊಂಗ್ ಚಾಂಗ್ ಅಭಿಪ್ರಾಯಪಟ್ಟಿದ್ದಾರೆ.

ದೇಶದಲ್ಲಿ ಸಕ್ರಿಯ ಪ್ರಕರಣ ಇಳಿಕೆ

ನವದೆಹಲಿ (ಪಿಟಿಐ): ಕೆಲ ದಿನಗಳ ಹಿಂದೆ ಏರಿಕೆಯಾಗುತ್ತಿದ್ದ ಕೋವಿಡ್ ಸಕ್ರಿಯ ಪ್ರಕರಣಗಳು ಸಂಖ್ಯೆ ಭಾನುವಾರ 17,692ಕ್ಕೆ ಇಳಿಕೆಯಾಗಿದ್ದು, 2,487 ಹೊಸ ಪ್ರಕರಣಗಳು ವರದಿಯಾಗಿವೆ. 13 ಸೋಂಕಿತರು ಮೃತಪಟ್ಟಿದ್ದಾರೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಹೇಳಿದೆ.

ಸಕ್ರಿಯ ಪ್ರಕರಣಗಳ ಪ್ರಮಾಣ ಶೇ 0.04 ರಷ್ಟಿದೆ. ಚೇತರಿಕೆ ಪ್ರಮಾಣ ಶೇ 98.74 ರಷ್ಟಿದೆ. ಪ್ರತಿನಿತ್ಯದ ಸೋಂಕು ದೃಢಪ್ರಮಾಣ ಶೇ 0.61 ರಷ್ಟಿದೆ.

ದೇಶದಲ್ಲಿ ಇದುವರೆಗೆ 4,31,21,599 ಪ್ರಕರಣಗಳು ವರದಿಯಾಗಿವೆ. 5,24,214 ಮಂದಿ ಸೋಂಕಿನಿಂದ ಮೃತಪಟ್ಟಿದ್ದಾರೆ. 4,25,79,693 ಜನರು ಚೇತರಿಸಿಕೊಂಡಿದ್ದಾರೆ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

ಶಾಂಘೈ: ವಾಣಿಜ್ಯ ಚಟುವಟಿಕೆ ಭಾಗಶಃ ಮುಕ್ತ

ತೈಪೆ (ಎ.ಪಿ): ಕೋವಿಡ್ ಸ್ಥಿತಿ ನಿಯಂತ್ರಣದಲ್ಲಿರುವ ಕಾರಣ ಚೀನಾದ ಶಾಂಘೈನಲ್ಲಿ ವಾಣಿಜ್ಯ ಚಟುವಟಿಕೆ ಸೋಮವಾರ ಭಾಗಶಃ ಮುಕ್ತವಾಗಲಿದ್ದು, ಸೂಪರ್ ಮಾರ್ಕೆಟ್, ರೆಸ್ಟೋರೆಂಟ್ ತೆರೆಯಲು ಅವಕಾಶ ಕಲ್ಪಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದಿನಸಿ ಮಳಿಗೆ, ಮಾಲ್‌ಗಳು, ಔಷಧ ಮಳಿಗೆಗಳಿಗೆ ಅವಕಾಶ ಇರಲಿದೆ. ಆದರೆ, ಜನದಟ್ಟಣೆ ನಿಯಂತ್ರಣಕ್ಕಾಗಿ ನಿರ್ಬಂಧಗಳು ಮುಂದುವರಿಯಲಿವೆ ಎಂದು ಶಾಂಘೈನ ಉಪ ಮೇಯರ್ ಚೆನ್ ತೊಂಗ್ ತಿಳಿಸಿದ್ದಾರೆ. ಚೀನಾದಲ್ಲಿ ಭಾನುವಾರ 1,718 ಕೋವಿಡ್ ಪ್ರಕರಣಗಳು ದೃಢಪಟ್ಟಿವೆ.

ಊರು ಬಿಟ್ಟು ಹೋದ ರುದ್ರಗೌಡ ಹಿಂಬಾಲಕರು

ಪ್ರಜಾವಾಣಿ ವಾರ್ತೆ

ಕಲಬುರಗಿ: ಪಿಎಸ್‌ಐ ನೇಮಕಾತಿ ಪರೀಕ್ಷೆಯ ಅಕ್ರಮ ಆರೋಪದಡಿ ಬಂಧಿಸಲಾದ ರುದ್ರಗೌಡ ಡಿ.ಪಾಟೀಲ ಜೊತೆಗೆ ಅವರ ಪ್ರಮುಖ ಬೆಂಬಲಿಗರನ್ನು ವಿಚಾರಣೆಗೆ ಒಳಪಡಿಸಲು ಸಿಐಡಿ ಅಧಿಕಾರಿಗಳು ಮುಂದಾಗಿದ್ದಾರೆ.

ಅಫಜಲಪುರದ ಶಿವಪ್ಪ ಆಲಮೇಲ್‌ಗೆ ಶುಕ್ರವಾರ (ಮೇ 13) ಸಿಐಡಿ ಅಧಿಕಾರಿಗಳು ಇಡೀ ದಿನ ವಿಚಾರಣೆ ನಡೆಸಿದರು.

ಇದು ಗೊತ್ತಾದ ಕೂಡಲೇ ರುದ್ರಗೌಡ ಬೆಂಬಲಿಗರ ದೊಡ್ಡ ದಂಡು ಪರಾರಿಯಾಗಿದೆ. ಸಾಮಾಜಿಕ ಮತ್ತು ರಾಜಕೀಯ ಚಟುವಟಿಕೆಗಳಲ್ಲಿ ಸದಾ ತೊಡಗಿರುತ್ತಿದ್ದ ರುದ್ರಗೌಡ ಯಾವಾಗಲೂ ಯುವಕರ ಗುಂಪನ್ನು ಹೊಂದಿರುತ್ತಿದ್ದ.

ಅದ್ದೂರಿ ಸ್ವಾಗತಕ್ಕೆ ಸಿದ್ಧತೆ: ‘ಸಿಐಡಿ ಅಧಿಕಾರಿಗಳು ಬಂಧಿಸಿದರೆ ಮೂರೇ ದಿನದಲ್ಲಿ ಜಾಮೀನು ಪಡೆದು ಹೊರಬರುವೆ. ಯಾರಿಗೂ ಏನು ಮಾಡಲಾಗದು’ ಎಂದು ರುದ್ರಗೌಡ ಸಹಚರರಿಗೆ ತಿಳಿಸಿದ್ದ. ಇದರಿಂದ ಅದ್ದೂರಿ ಸ್ವಾಗತ, ಸನ್ಮಾನ ಕಾರ್ಯಕ್ರಮಕ್ಕೆ ಸಿದ್ಧತೆ ನಡೆದಿದ್ದವು. ಜಾಮೀನು ಸಿಗದಾದಾಗ ಕಾರ್ಯಕ್ರಮ ಕೈಬಿಡಲಾಯಿತು. ಕಾರ್ಯಕ್ರಮಕ್ಕೆ ಸಿದ್ಧತೆ ನಡೆಸಿದವರ ಬಗ್ಗೆ ಸಿಐಡಿ ಅಧಿಕಾರಿಗಳು ಮಾಹಿತಿ ಸಂಗ್ರಹಿಸುತ್ತಿರುವುದು ಗೊತ್ತಾದ ಕೂಡಲೇ ಬೆಂಬಲಿಗರು ಪರಾರಿಯಾದರು’ ಎಂದು ತಿಳಿದು ಬಂದಿದೆ.

ಮುಂದುವರಿದ ಕಾಶಿನಾಥ ವಿಚಾರಣೆ: ಜ್ಞಾನಜ್ಯೋತಿ ಇಂಗ್ಲಿಷ್ ಮಾಧ್ಯಮ ಶಾಲೆಯ ಮುಖ್ಯಶಿಕ್ಷಕ ಕಾಶಿನಾಥ, ನಗರದ ಎಂ.ಎಸ್. ಇರಾನಿ ಕಾಲೇಜಿನಲ್ಲಿ ನಡೆದ ಪರೀಕ್ಷಾ ಅಕ್ರಮದಲ್ಲೂ ಭಾಗಿಯಾಗಿರುವ ಶಂಕೆ ಇದ್ದು, ವಿಚಾರಣೆ ತೀವ್ರಗೊಂಡಿದೆ.

ತೀವ್ರಗೊಂಡ ಶಾಂತಕುಮಾರ್ ವಿಚಾರಣೆ

ಬೆಂಗಳೂರು: ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದಲ್ಲಿ ಬಂಧನಕ್ಕೊಳಗಾಗಿರುವ ಡಿವೈಎಸ್ಪಿ ಶಾಂತಕುಮಾರ್ ಅವರ ವಿಚಾರಣೆಯನ್ನು ಸಿಐಡಿ ಅಧಿಕಾರಿಗಳು ತೀವ್ರಗೊಳಿಸಿದ್ದಾರೆ.

ಆಡುಗೋಡಿಯಲ್ಲಿರುವ ಶಾಂತಕುಮಾರ್ ಮನೆ ಮೇಲೆ ಶನಿವಾರ ದಾಳಿ ನಡೆಸಿದ್ದ ಅಧಿಕಾರಿಗಳು ‘ಒಎಂಆರ್’ ಪ್ರತಿ ಸಂಗ್ರಹಿಸಿಡುತ್ತಿದ್ದ ಟ್ರಂಕ್ ಬೀಗ, ಕೀಗಳನ್ನು ಪತ್ತೆಮಾಡಿದ್ದರು. ನೇಮಕಾತಿ ವಿಭಾಗಕ್ಕೆ ಸಂಬಂಧಪಟ್ಟ ಸಿ.ಡಿ., ಪೆನ್‌ಡ್ರೈವ್‌ಗಳನ್ನೂ ಜಪ್ತಿ ಮಾಡಿದ್ದರು.

‘ಈ ಹಿಂದೆ ನಡೆದಿದ್ದ ನೇಮಕಾತಿ ಅಕ್ರಮಗಳಲ್ಲೂ ಶಾಂತಕುಮಾರ್ ಅವರ ಕೈವಾಡ ಇರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಈ ದಿಸೆಯಲ್ಲಿ ಅಗತ್ಯ ಪುರಾವೆಗಳನ್ನು ಸಂಗ್ರಹಿಸಲಾಗುತ್ತಿದೆ. ಶಾಂತಕುಮಾರ್ ಅವರು ಅಭ್ಯರ್ಥಿಗಳಿಂದ ಕೋಟ್ಯಂತರ ಮೊತ್ತ ಪಡೆದಿರುವ ಆರೋಪ ಇದೆ. ಹೀಗಾಗಿ ಅವರ ಬ್ಯಾಂಕ್ ಖಾತೆಗಳನ್ನೂ ಪರಿಶೀಲಿಸಲಾಗುತ್ತಿದೆ’ ಎಂದು ಸಿಐಡಿ ಮೂಲಗಳು ತಿಳಿಸಿವೆ.

‘ಅಕ್ರಮ ನಡೆದಿರುವ ಪರೀಕ್ಷಾ ಕೇಂದ್ರಗಳಿಗೂ ಶಾಂತಕುಮಾರ್ ಅವರನ್ನು ಕರೆದೊಯ್ದು ಸ್ಥಳ ಪರಿಶೀಲನೆ ಮಾಡಲಾಗಿದೆ. ಮತ್ತಷ್ಟು ಮಾಹಿತಿ ದೊರೆತಿದೆ. ಅವರಿಂದ ಮೊಬೈಲ್ ಫೋನ್ ವಶಕ್ಕೆ ಪಡೆದಿದ್ದು, ದತ್ತಾಂಶಗಳನ್ನು ಸಂಗ್ರಹಿಸಲಾಗುತ್ತಿದೆ’ ಎಂದೂ ಹೇಳಿವೆ.

ಬಿಕೆಯುನಲ್ಲಿ ಬಿರುಕು: ಹೊಸ ಬಣ ಸ್ಥಾಪನೆ

ಒಂದನೇ ಪುಟದಿಂದ

ಬಿಕೆಯು ಸಂಸ್ಥಾಪಕ ಮಹೇಂದ್ರ ಸಿಂಗ್ ಟಿಕಾಯತ್ ಅವರ ಪುಣ್ಯಸ್ಮರಣೆಯ ದಿನವಾದ ಭಾನುವಾರವೇ ಚೌಹಾಣ್ ಈ ಘೋಷಣೆ ಮಾಡಿದ್ದಾರೆ. ಚೌಹಾಣ್ ಅವರು ತಮ್ಮ ನೇತೃತ್ವದಲ್ಲಿ ಭಾರತೀಯ ಕಿಸಾನ್ ಯೂನಿಯನ್ (ಅರಾಜನೈತಿಕ್) ಅಥವಾ ಬಿಕೆಯು (ಎ) ಬಣವನ್ನು ಸ್ಥಾಪಿಸುವುದಾಗಿ ಘೋಷಿಸಿದ್ದಾರೆ. ಮಹೇಂದ್ರ ಸಿಂಗ್ ಟಿಕಾಯತ್ ಅವರ ಮಕ್ಕಳಾದ ರಾಕೇಶ್ ಮತ್ತು ನರೇಶ್ ಟಿಕಾಯತ್ ಅವರು, ಸಂಘಟನೆ ಹಾಗೂ ತಮ್ಮ ತಂದೆಯ ತತ್ವಗಳಿಗೆ ವಿರುದ್ಧವಾಗಿ ನಡೆದುಕೊಂಡಿದ್ದಾರೆ. ಹೀಗಾಗಿ ಬೇರೆ ಸಂಘಟನೆ ರಚಿಸಬೇಕಾಯಿತು ಎಂದು ಚೌಹಾಣ್ ಹೇಳಿದ್ದಾರೆ.

‘ಬಿಕೆಯುನಲ್ಲಿ ನಾನು, ರಾಕೇಶ್ ಮತ್ತು ನರೇಶ್ ಅವರಿಗಿಂತಲೂ ಹಿರಿಯ ಸಿಪಾಯಿ. ಇಲ್ಲಿಯವರೆಗೂ ನಾನು ಟಿಕಾಯತ್ ಸೋದರರನ್ನು ಬೆಂಬಲಿಸಿದ್ದೆ. ಆದರೆ ಅವರು ಚುನಾವಣೆ ಸಂದರ್ಭದಲ್ಲಿ ರಾಜಕೀಯ ಪಕ್ಷಗಳ ಸಖ್ಯ ಬೆಳೆಸಿದರು. ರಾಜಕೀಯ ಪಕ್ಷಗಳ ಕೈಗೊಂಬೆಗಳಂತೆ ವರ್ತಿಸಿದರು. ಇದರಿಂದ ನನಗೆ ತೀರಾ ನೋವಾಗಿದೆ’ ಎಂದು ಅವರು ಹೇಳಿದ್ದಾರೆ.

‘ಸೋದರರಿಬ್ಬರಿಗೂ ಈ ಬಗ್ಗೆ ನಾನು ಹಲವು ಬಾರಿ ಹೇಳಿದ್ದೆ. ಆದರೆ ಅವರು ಅದನ್ನು ಕಡೆಗಣಿಸಿದರು. ಆ ಇಬ್ಬರೂ ಸಂಘಟನೆಯ ಕಾರ್ಯಕರ್ತರ ಮಾತುಗಳನ್ನು ಕೇಳಿಸಿಕೊಳ್ಳುತ್ತಿರಲಿಲ್ಲ ಮತ್ತು ರೈತರ ಸಮಸ್ಯೆಗಳ ಕಡೆಗೆ ಗಮನ ಹರಿಸುತ್ತಿರಲಿಲ್ಲ. ನಮಗೆ ಒಂದಲ್ಲಾ ಒಂದು ರೀತಿಯಲ್ಲಿ ಅಪಮಾನ ಮಾಡುತ್ತಲೇ ಇದ್ದರು. ಹೀಗಾಗಿ ಪ್ರತ್ಯೇಕ ಸಂಘಟನೆ ಅನಿವಾರ್ಯವಾಗಿತ್ತು’ ಎಂದು ರಾಜೇಶ್ ಚೌಹಾಣ್ ಅವರು ವಿವರಿಸಿದ್ದಾರೆ.

EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.comಗೆ ಭೇಟಿ ಕೊಡಿ

ಪರಿಣಾಮಕಾರಿ ಕಲಿಕೆಗೆ ‘ರಂಗಕಲೆ’ ಸಶಕ್ತ ಮಾಧ್ಯಮ

ಮಮತಾ ಅರಸೀಕೆರೆ

ಘಟನೆ 1

ಒಂಬತ್ತು ವರ್ಷದ ಜೈನಾಬ್ ಶಾಲೆಗೆ ಆಗಾಗ ಗೈರು ಹಾಜರಾಗುತ್ತಿದ್ದಳು. ಕಾರಣ ಕೇಳಿದರೆ ಸಬೂಬು ಹೇಳುತ್ತಿದ್ದಳು. ಪೋಷಕರಿಗೆ ಈ ಕುರಿತು ಹೇಳೋಣವೆಂದರೆ, ಆಕೆಗೆ ತಾಯಿಯಿಲ್ಲ. ತಂದೆ ಇದ್ದರೂ ಆತ ಮದ್ಯವ್ಯಸನಿ, ಬೇಜವಾಬ್ದಾರಿ ವ್ಯಕ್ತಿ. ಹಾಗಾಗಿ, ಆಕೆಯದ್ದು ದುರ್ಬರ ಬದುಕು.

ಹೀಗಿರುವಾಗ ಒಮ್ಮೆ ಶಿಕ್ಷಕರು ಶಾಲೆಯಲ್ಲಿ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜನೆಗೆ ಸಿದ್ಧತೆ ನಡೆಸುತ್ತಿದ್ದರು. ಹಾಡು, ನೃತ್ಯ, ಪುಟ್ಟ ನಾಟಕ ಆಡಿಸಲು ನಿಶ್ಚಯಿಸಿ, ಮಕ್ಕಳ ತಂಡ ರಚಿಸಲು ಯೋಚಿಸುತ್ತಿದ್ದರು. ಆಗ ನೆನಪಿಗೆ ಬಂದಿದ್ದು ಅರಳು ಹುರಿದಂತೆ ಮಾತನಾಡುತ್ತಿದ್ದ ಜೈನಾಬ್. ಈಕೆ, ಶಾಲೆ ತಪ್ಪಿಸಿದರೂ ಮಾತಿನಲ್ಲಿ ಚುರುಕು. ಶಾಲೆಯಲ್ಲಿನ ಅನೇಕ ಸಂಗತಿಗಳನ್ನು ನೆನಪಿಸುವ ಕೌಶಲವಿತ್ತು. ಹಾಗಾಗಿ ತಂಡಕ್ಕೆ ಸೇರಿಸಲು ನಿಶ್ಚಯಿಸಲಾಯಿತು. ಹೀಗಾದರೂ ಆಕೆ ಶಾಲೆಗೆ ನಿರಂತರವಾಗಿ ಬರಬಹುದೆಂಬ ಆಶಾಭಾವ.

ಓದಿನಲ್ಲಿ ಕೊಂಚ ಹಿಂದುಳಿದಿದ್ದ ಜೈನಾಬ್‌ಗೆ ಕನ್ನಡದ ಭಾಷೋಚ್ಚಾರ ಸ್ವಲ್ಪ ಕಷ್ಟವೇ ಆಗಿತ್ತು. ಉರ್ದು ಮಾತೃಭಾಷೆಯಾದ ಆಕೆಯ ಕನ್ನಡೋಚ್ಚಾರ, ನಾಟಕದ ತಾಲೀಮು ಶುರುವಾದಂತೆ ಅದ್ಯಾವ ಪರಿ ಬದಲಾಯಿತೆಂದರೆ ಆಕೆ ತಾನಿರುವ ಕಡೆಯಲ್ಲೆಲ್ಲಾ ನಾಟಕದ ಸಂಭಾಷಣೆಯನ್ನು ತನ್ನಷ್ಟಕ್ಕೆಂಬಂತೆ ಹೇಳಿಕೊಳ್ಳತೊಡಗಿದ್ದಳು. ನಾಟಕದಲ್ಲೂ ಉತ್ತಮ ಅಭಿನಯ ನೀಡಿದಳು. ಆ ಶಾಲೆಯಲ್ಲಿದ್ದ ಎರಡು ವರ್ಷ ಮತ್ತೂ ಕೆಲವು ನಾಟಕಗಳಲ್ಲಿ ಅಭಿನಯಿಸಿದಳು. ಶಾಲೆ ತಪ್ಪಿಸುವುದು ಕಡಿಮೆಯಾಗಿತ್ತು. ಓದಿನಲ್ಲೂ ಸುಧಾರಿಸಿದಳು. ಅಂಥ ಬಾಲಕಿ ಮುಂದೆ ಸರ್ಕಾರಿ ಶಾಲೆಯೊಂದರಲ್ಲಿ ಶಿಕ್ಷಕಿಯಾದರು. ನಾಟಕಗಳ ಮಹತ್ವ ಅರಿತಿರುವ ಅವಳೀಗ ತಪ್ಪದೆ ನಾಟಕಗಳನ್ನು ನಿರ್ಮಿಸಿ ಪ್ರದರ್ಶಿಸುತ್ತಾಳೆ.

ಘಟನೆ 2

ಪೂರ್ಣಿಮಾಳಿಗೆ ವಿಜ್ಞಾನ ಕಠಿಣ ವಿಷಯ. ವೈಜ್ಞಾನಿಕ ಪಠ್ಯಗಳು ಅರ್ಥವಾಗುತ್ತಿರಲಿಲ್ಲ. ಮನೆಪಾಠಕ್ಕೆ ಹೋದರೂ ಆಕೆಗೆ ರುಚಿಸದ ವಿಷಯವಾಯಿತು. ಒಮ್ಮೆ ಅವರ ತಾಯಿ ಅಭಿನಯವೊಂದರ ಮೂಲಕ ಆಕೆಗೆ ವಿಷಯವನ್ನು ಸುಲಭಗೊಳಿಸಲು ಪ್ರಯತ್ನಿಸಿದರು. ಯಶಸ್ವಿಯಾಯಿತು. ಶಾಲೆಯಲ್ಲಿಯೂ ಈ ಪ್ರಯೋಗ ಮಾಡಲು ಕೇಳಿಕೊಂಡರು. ಶಿಕ್ಷಕರು ಒಪ್ಪಿದರು. ವಿಡಿಯೊ, ಪಾಠೋಪಕರಣಗಳೊಂದಿಗೆ ಮಕ್ಕಳನ್ನೇ ವಿಜ್ಞಾನದ ಪಾತ್ರಗಳನ್ನಾಗಿಸಿ, ವಿಷಯವನ್ನು ತಲುಪಿಸಲು ಪ್ರಯತ್ನಿಸಿದರು. ಇದರಿಂದ ತೀರಾ ಮಹತ್ವದ ಬದಲಾವಣೆ ಆಗದಿದ್ದರೂ ವಿಜ್ಞಾನದ ಬಗೆಗಿದ್ದ ಅವಜ್ಞೆ ಕಡಿಮೆಯಾಗಿ, ಕಾಲಸರಿದಂತೆ ಸ್ವಲ್ಪ ಸುಧಾರಿಸತೊಡಗಿತು. ಭವಿಷ್ಯದಲ್ಲಿ ಮತ್ತಷ್ಟು ಸುಧಾರಣೆಯಾದೀತೆಂಬ ಭರವಸೆ ಈಗ ಬಂದಿದೆ.

> ಬೇಸಿಗೆ ಶಿಬಿರಗಳಲ್ಲಿಯೋ ಹವ್ಯಾಸಕ್ಕಾಗಿಯೋ ಆಯೋಜನೆಗೊಳ್ಳುವ ರಂಗಕಲೆ ಶಿಕ್ಷಣದ ಪ್ರಮುಖ ಭಾಗವಾಗಬೇಕಿದೆ. ಶಿಕ್ಷಣದಲ್ಲಿ ರಂಗಕಲೆಯನ್ನು ಪ್ರಬಲವಾಗಿ ದುಡಿಸಿಕೊಳ್ಳಬೇಕಾದದ್ದು ಇಂದಿನ ಅಗತ್ಯ.

*****

ಇಂಥ ಹಲವು ‘ಯಶೋಗಾಥೆ’ಗಳ ಮೂಲಕ ಶಿಕ್ಷಣ ಕಲಿಕೆಗೆ ರಂಗಭೂಮಿ ಒಂದು ಸಶಕ್ತ ಮಾಧ್ಯಮ ಎಂದು ಪದೇ ಪದೇ ಸಾಬೀತಾಗುತ್ತಿದೆ. ಮಾತ್ರವಲ್ಲ, ಮಕ್ಕಳ ವ್ಯಕ್ತಿತ್ವ ರೂಪಿಸುವಲ್ಲೂ ರಂಗ ಶಿಕ್ಷಣ ಪ್ರಮುಖ ಪಾತ್ರವಹಿಸುತ್ತಿದೆ. ಎಳೆಯರಿಂದ ಹಿಡಿದು ಹಿರಿಯರವರೆಗೆ ಸಾಕಷ್ಟು ಬದಲಾವಣೆಗಳನ್ನು ತರುವ ಶಕ್ತಿ ರಂಗಭೂಮಿಗಿದೆ.

ಮುಜುಗರವೆನ್ನಿಸುವ, ಬೋಧಿಸಲು ಕ್ಲಿಷ್ಟವಾಗುವ, ಪೌರಾಣಿಕದಂತಹ ವಿಷಯಗಳು, ಪಠ್ಯಗಳನ್ನು ತರಗತಿಯ ಪರಿಸರದಲ್ಲೇ ಸುಲಭ ರೂಪಕ್ಕಿಳಿಸಿ ನಾಟಕವಾಗಿಸಿದರೆ ಅದೊಂದು ಆಕರ್ಷಕ ಬೋಧನಾ ವಿಧಾನ. ಈ ರೀತಿ ಲವಲವಿಕೆಯಿಂದಿರುವ, ಹುರುಪಿನ ಶಿಕ್ಷಕರತ್ತ ಸಹಜವಾಗಿಯೆ ಮಕ್ಕಳು ಆಕರ್ಷಿತರಾಗುತ್ತಾರೆ. ಅನಂತರ ಗಣಿತದಂತಹ ಕ್ಲಿಷ್ಟ ವಿಷಯವೂ ನಟನೆಯ ರೂಪದಲ್ಲಿ ಅಭಿವ್ಯಕ್ತವಾದರೆ ಅದು ಬಹುಬೇಗ ವಿದ್ಯಾರ್ಥಿಗಳ ಮನಸ್ಸಿನಾಳಕ್ಕೆ ಇಳಿಯುತ್ತದೆ. ‘ಹತ್ತಾರು ಬಾರಿ ಓದುವುದಕ್ಕಿಂತ ನಾಟಕ ರೂಪವಾಗಿ ಒಮ್ಮೆ ಪಠ್ಯವನ್ನು ಪ್ರದರ್ಶನ ರೂಪದಲ್ಲಿ ಕಾಣುವುದು ಗ್ರಹಿಕೆಗೆ ಅತ್ಯಂತ ಪರಿಣಾಮಕಾರಿ’ ಎನ್ನುತ್ತಾರೆ ಸಿನಿಮಾ ನಿರ್ದೇಶಕ ಬಿ. ಸುರೇಶ. ಹಾಗಂತ ಎಲ್ಲಾ ವಿಷಯಗಳನ್ನೂ ವೇದಿಕೆಯ ಮೇಲೆ ತರಲಾಗುವುದಿಲ್ಲ. ಕಲಿಕಾ ಪ್ರಕ್ರಿಯೆಯನ್ನು ಸಾಧ್ಯವಾದಷ್ಟೂ ಸರಳಗೊಳಿಸಲು ರಂಗಭೂಮಿ ಘನವಾದ ಮಾಧ್ಯಮ.

ಪ್ರೌಢಾವಸ್ಥೆ ತಲುಪುವ ಹೆಣ್ಣುಮಕ್ಕಳಿಗೆ ಹಾಗೂ ಗಂಡುಮಕ್ಕಳಿಗೆ ಅವರ ಶರೀರದಲ್ಲಾಗುವ ಬದಲಾವಣೆಗಳನ್ನು ಕೆಲವು ಶಿಕ್ಷಕರು ತಿಳಿಹೇಳಲು, ಮಕ್ಕಳು ಒಟ್ಟಿಗೆ ಕುಳಿತು ಆಲಿಸಲು ಮುಜುಗರ ಪಡುವುದಿದೆ. ವೇದಿಕೆ ಮೇಲಿನ ನಾಟಕ ರೂಪದ ಅಭಿವ್ಯಕ್ತಿ ಸಂಕೋಚಕ್ಕೆ ಎಡೆಯಾಗದಂತೆ ಸೂಕ್ತವಾಗಿ ನಿರ್ವಹಿಸಬಲ್ಲದು. ಸಾಮಾಜಿಕ ಪರಿಣಾಮ ಬೀರುವ ಸಂದೇಶಗಳನ್ನೂ ರಂಗವೇದಿಕೆ ಗಟ್ಟಿಯಾಗಿ ಪ್ರಸ್ತುತಪಡಿಸುತ್ತದೆ. ಸ್ಪಷ್ಟವಾದ ಅಭಿಪ್ರಾಯ ರೂಪಿಸಲೂ ಸಹ ಈ ಮಾಧ್ಯಮ ಉಪಯೋಗಕಾರಿ.

ಮಾತನಾಡಲು ಸಂಕೋಚಪಡುವ, ಸಾರ್ವಜನಿಕವಾಗಿ ಬೆರೆಯಲು ಸಾಧ್ಯವಾಗದ, ಮಾತು ತೊದಲುವ, ಕೀಳರಿಮೆಯಿಂದ ಬಳಲುವ ಮಕ್ಕಳು ರಂಗಭೂಮಿಯಿಂದ ಬದಲಾದ ಉದಾಹರಣೆಗಳು ಬಹಳಷ್ಟಿವೆ. ಸ್ಪಷ್ಟತೆ, ದಿಟ್ಟತೆ, ಮುನ್ನುಗ್ಗುವ ಮನೋಭಾವವನ್ನು ಗಟ್ಟಿಗೊಳಿಸಿ ಗೊಂದಲ, ಅಶಿಸ್ತು, ಅಸಡ್ಡೆಗಳನ್ನು ಸಾಧ್ಯವಾದಷ್ಟೂ ಬಗೆಹರಿಸುವ ರಂಗಪ್ರಕಾರ ಎಲ್ಲಾ ಸಾಂಸ್ಕೃತಿಕ ಕಲಾಭಿವ್ಯಕ್ತಿಯ ಮೂಲಬೇರು. ಹಾಗಾಗಿ ಶಿಕ್ಷಣದಲ್ಲಿ ರಂಗಕಲೆಯನ್ನು ಪ್ರಬಲವಾಗಿ ದುಡಿಸಿಕೊಳ್ಳಬೇಕಾದ್ದು ಅಗತ್ಯ. ಆಯಾ ಕಾಲಕ್ಕೆ ತಕ್ಕಂತೆ ಅಂದಿನ ಸ್ಥಿತಿಗತಿಗೆ ಅನುಗುಣವಾಗಿ ಪ್ರಯೋಗಗಳನ್ನು ಸಹ ನಾಟಕಗಳಲ್ಲಿ ಮಾಡಬಹುದು.

ರಂಗಭೂಮಿಯ ಈ ಶಕ್ತಿಯನ್ನು ಉಲ್ಲೇಖಿಸಿಯೇ ಸಾಣೆಹಳ್ಳಿಮಠದ ಪಂಡಿತರಾಧ್ಯ ಶಿವಾಚಾರ್ಯ ಸ್ವಾಮೀಜಿಯವರು ಶಾಲೆಗಳಲ್ಲಿ ರಂಗ ಶಿಕ್ಷಕರನ್ನು ನೇಮಿಸಿಕೊಳ್ಳುವಂತೆ ಒತ್ತಾಯಿಸಿದ್ದರು. ಅನೇಕ ರಂಗಕರ್ಮಿಗಳ ಒತ್ತಾಸೆಯೂ ಇದೇ ಆಗಿದೆ.

ಉತ್ತೇಜನ ನೀಡಿದ ರಂಗಕಲೆ

ಈ ಹಿಂದೆ ರಾಷ್ಟ್ರೀಯ ನಾಟಕ ಶಾಲೆಯ(ಎನ್‌ಎಸ್‌ಡಿ) ಬೆಂಗಳೂರು ಚಾಪ್ಟರ್‌ನಲ್ಲಿ ‘ಶಿಕ್ಷಣದಲ್ಲಿ ರಂಗಕಲೆ’ ಎಂಬ ಆಶಯದ 3 ತಿಂಗಳ ಅವಧಿಯ ತರಬೇತಿ ನಡೆಯಿತು. ಖ್ಯಾತ ರಂಗಕರ್ಮಿ ಚಿದಂಬರರಾವ್ ಜಂಬೆ ನಿರ್ದೇಶಕರಾಗಿದ್ದ ಈ ಶಿಬಿರದಲ್ಲಿ ನಾನೂ ಶಿಬಿರಾರ್ಥಿ. ಕೊಠಡಿಯೊಳಗಿನ ತರಗತಿಗಳು ಮುಗಿದ ನಂತರ, ಚಲನಶೀಲವಾದ ಈ ಅನುಭವವನ್ನು ರಾಜ್ಯದಾದ್ಯಂತ ಪ್ರಯೋಗಿಸಲು ಅನೇಕ ಶಾಲೆಗಳಿಗೆ, ಹಾಸ್ಟೆಲ್‌ಗಳಿಗೆ ತೆರಳಿ ಅಲ್ಲಿ ಪಠ್ಯವನ್ನು ಬೋಧಿಸಲು ಮಕ್ಕಳೊಂದಿಗೆ ವೈವಿಧ್ಯ ಚಟುವಟಿಕೆಗಳನ್ನು ಕಾರ್ಯಗತಗೊಳಿಸಲಾಗಿತ್ತು. ಈ ವಿಧಾನ ಉತ್ತೇಜನಕಾರಿಯೂ ಆಗಿ ಯಶಸ್ವಿಯಾಗಿತ್ತು.

ವಿದೇಶದಲ್ಲಿ ಓದಲು ವಿದ್ಯಾರ್ಥಿವೇತನ ಇದೆಯೇ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿ. ಪ್ರದೀಪ್ ಕುಮಾರ್

1.ನಾನು, ಈಗ ಬಿಎಸ್‌ಸಿ ಎರಡನೇ ವರ್ಷದಲ್ಲಿ ಓದುತ್ತಿದ್ದೇನೆ. ನನಗೆ ಮನಃಶಾಸ್ತ್ರದಲ್ಲಿ ಎಂಎಸ್‌ಸಿ ಓದಬೇಕೆಂಬ ಹಂಬಲವಿದೆ. ವಿದೇಶದಲ್ಲಿ ಉಚಿತವಾಗಿ ಓದಲು ಸಾಧ್ಯವೇ? ಸರ್ಕಾರದಿಂದ ಯಾವುದಾದರೂ ವಿದ್ಯಾರ್ಥಿವೇತನ ಸಿಗುವುದೇ? ಆರ್ಥಿಕವಾಗಿ ಹಿಂದುಳಿದ ಕಾರಣ ನನಗೆ ದುಬಾರಿ ಹಣ ಖರ್ಚು ಮಾಡಿ ಓದಲು ಸಾಧ್ಯವಿಲ್ಲ. ನಿಮ್ಮ ಸಲಹೆ ತಿಳಿಸಿ.

ಹನುಮಂತ, ಕೊಪ್ಪಳ

ನಮಗೆ ತಿಳಿದಂತೆ ವಿದೇಶದಲ್ಲಿ ಉಚಿತವಾಗಿ ಓದಲು ಸಾಧ್ಯವಿಲ್ಲ. ಆದರೆ, ಅಂತರರಾಷ್ಟ್ರೀಯ ವಿದ್ಯಾರ್ಥಿಗಳಿಗೆ ಅರ್ಹತೆ ಮತ್ತು ಆದಾಯವನ್ನು ಪರಿಗಣಿಸಿ ಸ್ಕಾಲರ್‌ಶಿಪ್ ಸೌಲಭ್ಯಗಳು ಲಭ್ಯವಿರುತ್ತವೆ. ಜೊತೆಗೆ ಸಹಾಯಧನ, ಅರೆಕಾಲಿಕ ನೌಕರಿಗಳಂತಹ ಸೌಲಭ್ಯಗಳೂ ಇವೆ. ಅನೇಕ ಖಾಸಗಿ ಸಂಸ್ಥೆಗಳೂ ವಿದ್ಯಾರ್ಥಿಗಳಿಗೆ ನೆರವಾಗುವ ಕಾರ್ಯದಲ್ಲಿ ವಿಶ್ವವಿದ್ಯಾಲಯಗಳ ಜೊತೆ ಕೈಗೂಡಿಸಿವೆ. ಹೆಚ್ಚಿನ ವಿವರಗಳಿಗಾಗಿ ನೀವು ಸೇರ ಬಯಸುವ ವಿಶ್ವವಿದ್ಯಾಲಯದ ವೆಬ್‌ಸೈಟ್ ಅನ್ನು ಪರಿಶೀಲಿಸಿ.

ಇದಲ್ಲದೆ, ಕೇಂದ್ರ ಸರ್ಕಾರದ ನ್ಯಾಷನಲ್ ಓವರ್‌ಸೀಸ್ ಸ್ಕಾಲರ್‌ಶಿಪ್ ಸ್ಕೀಮ್ ಅಡಿಯಲ್ಲಿಯೂ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಲಭ್ಯವಿದೆ. ಈ ಸೌಲಭ್ಯದ ವಿವರ ಮತ್ತು ಅರ್ಹತೆಯ ನಿಯಮಗಳ ಕುರಿತು ಕೇಂದ್ರ ಸರ್ಕಾರದ ಸೋಷಿಯಲ್ ಜಸ್ಟೀಸ್ ಅಂಡ್ ಎಂಪವರ್‌ಮೆಂಟ್ ಇಲಾಖೆಯ ವೆಬ್‌ಸೈಟ್ ಅನ್ನು ಪರಿಶೀಲಿಸಿ.

2. ದ್ವಿತೀಯ ಪಿಯುಸಿ (ವಿಜ್ಞಾನ) ಮುಗಿಸಿದ ಮೇಲೆ ಯಾವ ಕೋರ್ಸ್ ಮಾಡಿದರೆ ಉತ್ತಮ?

ಹೆಸರು, ಊರು ತಿಳಿಸಿಲ್ಲ.

ನಿಮಗೆ ಆಸಕ್ತಿಯಿರುವ, ಇಷ್ಟವಿರುವ, ಸ್ವಾಭಾವಿಕ ಪ್ರತಿಭೆಯಿರುವ ವೃತ್ತಿಯನ್ನು ಆಯ್ಕೆ ಮಾಡಿಕೊಂಡು, ಅದಕ್ಕೆ ಅನುಗುಣವಾಗಿ ಕೋರ್ಸ್ ಮಾಡಬೇಕು. ಹಾಗಾಗಿ, ವೃತ್ತಿ ಯೋಜನೆಯನ್ನು ಮಾಡದೆ ಕೋರ್ಸ್ ಆಯ್ಕೆ ಸಮಂಜಸವಲ್ಲ. ಪಿಯುಸಿ (ವಿಜ್ಞಾನ) ನಂತರ ನೀವು ಮಾಡಬಹುದಾದ ಕೆಲವು ಪ್ರಮುಖ ಕೋರ್ಸ್‌ಗಳೆಂದರೆ ಎಂಬಿಬಿಎಸ್, ಬಿಇ/ಬಿಟೆಕ್, ಬಿಎಸ್‌ಸಿ (ವಿಜ್ಞಾನ, ಕೃಷಿ ಸಂಬಂಧಿತ, ಬಯೋಟೆಕ್, ನರ್ಸಿಂಗ್, ಪ್ಯಾರಾ ಮೆಡಿಕಲ್, ಫ್ಯಾಷನ್ ಡಿಸೈನ್, ಹೋಟೆಲ್ ಮ್ಯಾನೇಜ್‌ಮೆಂಟ್, ಫೊರೆನ್ಸಿಕ್ ಇತ್ಯಾದಿ), ಬಿ.ಫಾರ್ಮ, ಬಿ.ಡಿಇಎಸ್, ಬಿವಿಎಸ್‌ಸಿ, ಬಿಬಿಎ, ಸಿಎ, ಎಸಿಎಸ್, ಐಸಿಡಬ್ಲ್ಯು ಸೇರಿದಂತೆ ವೈವಿಧ್ಯಮಯ ಕೋರ್ಸ್ ಆಯ್ಕೆಗಳಿವೆ. ವೃತ್ತಿ ಯೋಜನೆ ಪ್ರಕ್ರಿಯೆ ಮತ್ತು ಪಿಯುಸಿ ನಂತರದ ಕೋರ್ಸ್ ಆಯ್ಕೆಗಳ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/c/EducationalExpertManagementCareer Consultant

3. ನಾನು ಪಿಯುಸಿಗೆ ವಿಜ್ಞಾನ ವಿಭಾಗವನ್ನು ಆಯ್ಕೆ ಮಾಡಿಕೊಂಡಿದ್ದೇನೆ. ಆದರೆ, ಕಾಲೇಜಿನ ಆಯ್ಕೆಯಲ್ಲಿ ಗೊಂದಲವಿದೆ. ದಯವಿಟ್ಟು, ಉತ್ತರಕನ್ನಡದಲ್ಲಿನ ಉತ್ತಮ ವಿಜ್ಞಾನ ಕಾಲೇಜಿನ ಕುರಿತು ಮಾಹಿತಿ ನೀಡಿ.

ಹೆಸರು, ಊರು ತಿಳಿಸಿಲ್ಲ.

4. ನಾನು ಈ ಬಾರಿ ದ್ವಿತೀಯ ಪಿಯುಸಿ(ಸೈನ್ಸ್) ಪರೀಕ್ಷೆ ಬರೆದಿದ್ದೇನೆ. ನನಗೆ ಏರೋನಾಟಿಕಲ್ ಎಂಜಿನಿಯರಿಂಗ್ ಮಾಡಬೇಕೆಂಬ ಬಯಕೆ ಇದೆ. ಆದರೆ ಇದಕ್ಕೆ ಸಂಬಂಧಿಸಿ ಮುಂದೇನು ಮಾಡಬೇಕು ಎಂಬುದು ನನಗೆ ತಿಳಿದಿಲ್ಲ. ನಾನು ಸಿಇಟಿ ಹಾಗೂ ಜೆಇಇ ಎರಡೂ ಪರೀಕ್ಷೆಗೆ ತಯಾರಿ ನಡೆಸುತ್ತಿದ್ದೇನೆ. ಏರೋನಾಟಿಕಲ್ ಎಂಜಿನಿಯರಿಂಗ್ ಓದಲು ಉತ್ತಮ ಕಾಲೇಜು ಯಾವುದು?

ಕೀರ್ತಿ ಡಿ.ಸಿ., ದಾವಣಗೆರೆ.

ಏರೋನಾಟಿಕಲ್ ಎಂಜಿನಿಯರಿಂಗ್ ಬೇಡಿಕೆಯಲ್ಲಿರುವ ಕ್ಷೇತ್ರ. ಹಾಗಾಗಿ, ಸಿಇಟಿ ಮತ್ತು ಜೆಇಇ ಪರೀಕ್ಷೆಗಳಲ್ಲಿ ಉನ್ನತ ರ‍್ಯಾಂಕ್ ಗಳಿಸಲು ಪ್ರಯತ್ನಿಸಿ.

ಉತ್ತಮ ಕಾಲೇಜುಗಳ ಆಯ್ಕೆಗೆ ಅಂತರ್ಜಾಲದಲ್ಲಿ ನ್ಯಾಷನಲ್ ಇನ್‌ಫರ್ಮೇಷನ್ ರ‍್ಯಾಂಕಿಂಗ್ ಫ್ರೇಮ್‌ವರ್ಕ್ ಮತ್ತು ಇನ್ನಿತರ ಸಂಸ್ಥೆಗಳ ರ‍್ಯಾಂಕಿಂಗ್ ಮಾಹಿತಿಯನ್ನು ಪರಾಮರ್ಶಿಸಿ. ಹಾಗೂ, ಕಾಲೇಜು ಆಯ್ಕೆ ಪ್ರಕ್ರಿಯೆ ಕುರಿತ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=DmaXk-MuoOI&list=PL4KWFQbbawTBIlGZxW0Bn-S1BpLs4uStm&index=3

6. ಸರ್, ನಾನು ಬಿಎಸ್‌ಸಿ ಮುಗಿಸಿರುತ್ತೇನೆ. ಈಗ ನಾನು ಕೆಪಿಎಸ್‌ಸಿ, ಕೆಎಸ್‌ಪಿ ಸೇರಿದಂತೆ, ಪದವಿ ಆಧಾರಿತ ಹುದ್ದೆಗಳಿಗೆ ಅರ್ಜಿ ಹಾಕಬಹುದಾ? ಬಿಎಲ್‌ಐಎಸ್‌ಸಿ ಬಗ್ಗೆ ತಿಳಿಸಿ.

ಪ್ರವೀಣ್, ಊರು ತಿಳಿಸಿಲ್ಲ.

ಬಿಎಸ್‌ಸಿ ಪದವಿಯ ನಂತರ ಯುಪಿಎಸ್‌ಸಿ, ಕೆಪಿಎಸ್‌ಸಿ, ಕೆಎಸ್‌ಪಿ ಸೇರಿದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಅನೇಕ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಹಾಗೂ ಕೆಲವೊಮ್ಮೆ ನೇರವಾಗಿಯೂ ಅರ್ಜಿ ಹಾಕುವ ಅವಕಾಶಗಳಿರುತ್ತವೆ. ಬಿಎಲ್‌ಐಎಸ್‌ಸಿ ಅಂದರೆ ಬ್ಯಾಚುಲರ್ ಆಫ್ ಲೈಬ್ರರಿ ಅಂಡ್ ಇನ್‌ಫರ್ಮೇಷನ್ ಸೈನ್ಸ್ ಕೋರ್ಸ್. ಈ ಕೋರ್ಸ್ ಅನ್ನು ಯಾವುದಾದರೂ ಪದವಿಯ ನಂತರ ಮಾಡಬಹುದು. ಈ ಪದವಿಯ ನಂತರ ಸರ್ಕಾರಿ ಮತ್ತು ಖಾಸಗಿ ಗ್ರಂಥಾಲಯಗಳಲ್ಲಿ ಮತ್ತು ಮಾಹಿತಿ ಕೇಂದ್ರಗಳಲ್ಲಿ ಉದ್ಯೋಗಾವಕಾಶಗಳಿವೆ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ಕೃಷಿ-ತೋಟಗಾರಿಕೆ-ರೇಷ್ಮೆ ಕೃಷಿ ಡಿಪ್ಲೊಮಾ

ಬೇದ್ರೆ ಮಂಜುನಾಥ

ಕೋರ್ಸ್ ಕಾರ್ನರ್

ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಕೃಷಿ ಕ್ಷೇತ್ರದಲ್ಲಿ ಗ್ರಾಮೀಣ ಅಭ್ಯರ್ಥಿಗಳ ಕೌಶಲ ಹೆಚ್ಚಿಸುವ ಹಾಗೂ ಈ ಮೂಲಕ ಸ್ವ ಉದ್ಯೋಗಕ್ಕೆ ಅಣಿಗೊಳಿಸುವ ನಿಟ್ಟಿನಲ್ಲಿ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಗಳು ಡಿಪ್ಲೊಮಾ ಹಾಗೂ ದೂರ ಶಿಕ್ಷಣ ಕೋರ್ಸ್‌ಗಳನ್ನು ನಡೆಸುತ್ತಾ ಬಂದಿವೆ.

ಯಾವುದೇ ಸರ್ಕಾರಿ ಉದ್ಯೋಗದ ಭರವಸೆಯ ಆಧಾರದ ಮೇಲೆ ಈ ಕೋರ್ಸ್‌ಗಳನ್ನು ನಡೆಸುತ್ತಿಲ್ಲ. ಬದಲಿಗೆ, ಗ್ರಾಮೀಣ ಅಭ್ಯರ್ಥಿಗಳಿಗೆ ಕೃಷಿ ಅನುಭವ, ಕೃಷಿ ತಂತ್ರಜ್ಞಾನದ ಪ್ರಸಾರ ಮತ್ತು ವಿಸ್ತರಣಾ ಚಟುವಟಿಕೆಗಳ ಕುರಿತು ತರಬೇತಿ ನೀಡಲಾಗುತ್ತಿದೆ. ಈ ಕೋರ್ಸ್‌ಗಳನ್ನು ಮುಗಿಸಿದವರು ಸರ್ಕಾರಿ ಉದ್ಯೋಗ ಹುಡುಕುವುದು ಬಿಟ್ಟು, ಸ್ವಯಂ ಕೃಷಿಯಲ್ಲಿ ತೊಡಗುವುದು ಅಪೇಕ್ಷಣೀಯ.

ಕೃಷಿ ಡಿಪ್ಲೊಮಾ ಕೋರ್ಸ್

ದಾವಣಗೆರೆ ಜಿಲ್ಲೆ ಕತ್ತಲಗೆರೆ ಮತ್ತು ಉಡುಪಿ ಜಿಲ್ಲೆ ಬ್ರಹ್ಮಾವರ, ರಾಯಚೂರಿನ ಕೃಷಿ ವಿಜ್ಞಾನ ಕೇಂದ್ರಗಳು ಮತ್ತು ಬಳ್ಳಾರಿ ಜಿಲ್ಲೆ ಹಗರಿಯ ಕೃಷಿ ಸಂಶೋಧನಾ ಕೇಂದ್ರ ಹಾಗೂ ಮಂಡ್ಯದ ವಿ.ಸಿ. ಫಾರಂನ ಕೃಷಿ ಕಾಲೇಜಿನಲ್ಲಿ ಕೃಷಿ ಡಿಪ್ಲೊಮಾ ಕೋರ್ಸ್ ಇದೆ. ಎಸ್ಸೆಸ್ಸೆಲ್ಸಿ ಉತ್ತೀರ್ಣರಾಗಿದ್ದು 19 ವರ್ಷದೊಳಗಿರುವ ಅಭ್ಯರ್ಥಿಗಳು ಈ ಕೋರ್ಸ್‌ಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ವಿವರಗಳಿಗೆ www.uahs.edu.in http://uasraichur.edu.in www.uasbangalore.edu.in ನೋಡಬಹುದು.

ದೂರಶಿಕ್ಷಣ ಕೋರ್ಸ್

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶನಾಲಯದ ದೂರಶಿಕ್ಷಣ ವಿಭಾಗವು ಒಂದು ವರ್ಷ ಅವಧಿಯ ಕೃಷಿ ಡಿಪ್ಲೊಮಾ, ಸಮಗ್ರ ಕೃಷಿ, ಸಾವಯವ ಕೃಷಿ ಮತ್ತು ಜೇನು ಸಾಕಾಣಿಕೆ ಕುರಿತ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ನಡೆಸುತ್ತಿದೆ. ಎಸ್ಸೆಸ್ಸೆಲ್ಸಿ ಓದಿರುವವರು ಅರ್ಜಿ ಸಲ್ಲಿಸಬಹುದು.

ದೂರಶಿಕ್ಷಣದ ಮೂಲಕ ಕೃಷಿ ತಾಂತ್ರಿಕತೆಯನ್ನು ಗ್ರಾಮೀಣ ಯುವಜನಾಂಗಕ್ಕೆ ತಲುಪಿಸುವುದು, ಶಾಲಾ / ಕಾಲೇಜು ವಂಚಿತರಾದವರಲ್ಲಿ ಕೃಷಿಯ ಬಗ್ಗೆ ಮಾನವ ಸಂಪನ್ಮೂಲ ಅಭಿವೃದ್ಧಿಪಡಿಸುವುದು ಮತ್ತು ಕೃಷಿ ಶಿಕ್ಷಣವನ್ನು ಮುಂದುವರಿಸಲು ಅವಕಾಶಗಳನ್ನು ಒದಗಿಸುವುದು, ಕೃಷಿ ಕಾರ್ಯನಿರತರಿಗೆ ಉನ್ನತ ಕೃಷಿಜ್ಞಾನವನ್ನು ಪಡೆಯಲು ಅವಕಾಶ ಒದಗಿಸುವುದು ಈ ಕೋರ್ಸ್ ಉದ್ದೇಶ. ವಿವರಗಳಿಗೆ ನೋಡಿ: www.uasbangalore.edu.in

ರೇಷ್ಮೆ ಕೃಷಿ ಡಿಪ್ಲೊಮಾ

ಬೆಂಗಳೂರು ಮತ್ತು ರಾಯಚೂರು ಕೃಷಿ ವಿಶ್ವವಿದ್ಯಾಲಯಗಳು ರೇಷ್ಮೆ ಕೃಷಿ ಮತ್ತು ಕೃಷಿ ಸಂಬಂಧಿತ ಒಂದು ಮತ್ತು ಎರಡು ವರ್ಷಗಳ ಡಿಪ್ಲೊಮಾ ಕೋರ್ಸ್‌ಗಳನ್ನು ನಡೆಸುತ್ತಿವೆ. ಬೆಂಗಳೂರು ಕೃಷಿ ವಿವಿ ವ್ಯಾಪ್ತಿಯ ಕೋಲಾರ ಜಿಲ್ಲೆ ಚಿಂತಾಮಣಿಯಲ್ಲಿರುವ ರೇಷ್ಮೆ ಕೃಷಿ ಕಾಲೇಜಿನಲ್ಲಿ ಕನ್ನಡ ಮಾಧ್ಯಮದಲ್ಲಿ ಎರಡು ವರ್ಷಗಳ ರೇಷ್ಮೆ ಕೃಷಿ ಡಿಪ್ಲೊಮಾ ಕೋರ್ಸ್ ನಡೆಸಲಾಗುತ್ತಿದ್ದು ಎಸ್ಸೆಸ್ಸೆಲ್ಸಿ ಉತ್ತೀರ್ಣರಾದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.

ವಿವರಗಳಿಗೆ ನೋಡಿ: www.uasbangalore.edu.in

ತೋಟಗಾರಿಕೆ ಡಿಪ್ಲೊಮಾ ಕೋರ್ಸ್

ಬಾಗಲಕೋಟೆಯ ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಸಂಯೋಜಿತವಾಗಿರುವ ಕೋಲಾರದ ಹೊಗಳಗೇರೆ ಮತ್ತು ಗೋಕಾಕ ತಾಲ್ಲೂಕು ಅರಭಾವಿಯಲ್ಲಿರುವ ತೋಟಗಾರಿಕಾ ಮಹಾವಿದ್ಯಾಲಯಗಳಲ್ಲಿ ಎರಡು ವರ್ಷಗಳ ತೋಟಗಾರಿಕೆ ಡಿಪ್ಲೊಮಾ ಕೋರ್ಸ್ ನಡೆಸಲಾಗುತ್ತಿದೆ. ಈ ಕೋರ್ಸ್‌ಗೆ ಪ್ರವೇಶ ಬಯಸುವ ಅಭ್ಯರ್ಥಿಗಳು ಎಸ್ಸೆಸ್ಸೆಲ್ಸಿ ಉತ್ತೀರ್ಣರಾಗಿರಬೇಕು. ಈ ಕೋರ್ಸ್‌ನಲ್ಲಿ ವಿದ್ಯಾರ್ಥಿಗಳು ತೋಟಗಾರಿಕೆ ಸಂಬಂಧಿಸಿದ ಬೀಜೋತ್ಪಾದನೆ, ಸಸ್ಯಾಭಿವೃದ್ಧಿ ಮತ್ತು ಸಸ್ಯಪಾಲನೆ ಸೇರಿದಂತೆ ವಿವಿಧ ವಿಷಯಗಳ ಕುರಿತು ಅಧ್ಯಯನ ಮಾಡುತ್ತಾರೆ. ಶೇ 75ರಷ್ಟು ಪ್ರಾಯೋಗಿಕ ತರಬೇತಿ ಇರುತ್ತದೆ. ಹೆಚ್ಚಿನ ವಿವರಗಳಿಗೆ ನೋಡಿ: www.uhsbagalkot.edu.in

ನೀರಿನ ಮೇಲೆ ನಡೆದಾಡುವ ಕೀಟ ‘ಪಾಂಡ್ ಸ್ಕೇಟರ್’

ಡಾ. ನೂರ್ ಸಮದ್ ಅಬ್ಬಲಗೆರೆ

ಪಾಂಡ್ ಸ್ಕೇಟರ್

ಕೀಟಗಳು ಸರ್ವಾಂತರ್ಯಾಮಿ ಜೀವಿಗಳು. ಇವು ಅಂಟಾರ್ಟಿಕ ಖಂಡದಲ್ಲೂ ಬದುಕುತ್ತವೆ, ಪೆಟ್ರೋಲಿಯಂ ಬಾವಿಗಳಲ್ಲೂ ಜೀವಿಸುತ್ತವೆ. ಸಸ್ಯಶಾಸ್ತ್ರವನ್ನು ಹೊರತು ಪಡಿಸಿ, ಪ್ರಾಣಿಶಾಸ್ತ್ರದಲ್ಲಿ ಶೇ 40ರಷ್ಟು ಪ್ರಾಣಿಗಳು, ಪಕ್ಷಿಗಳು, ಸರೀಸೃಪಗಳು ಮತ್ತು ಎಲ್ಲಾ ರೀತಿಯ ಜೀವಜಂತುಗಳಿದ್ದರೆ, ಉಳಿದ ಶೇ 60ರಷ್ಟು ನಾವು ಊಹಿಸಲಾಗದ ವಿಭಿನ್ನ ಕೀಟಗಳೇ ಆವರಿಸಿವೆ. ಸಾಮಾನ್ಯವಾಗಿ ಇವುಗಳ ಗಾತ್ರ ಚಿಕ್ಕದಿರುವುದರಿಂದ ನಮ್ಮ ಕಣ್ಣಿಗೆ ಕೀಟಗಳು ಆಗಾಗ್ಗ ಮಾತ್ರ ಗೋಚರಿಸುತ್ತವೆ.

ಹೀಗೆ ಒಂದು ದಿನ ಕೀಟಗಳ ಜಗತ್ತನ್ನು ಅರಸುತ್ತಾ ನಮ್ಮದೇ ತೋಟಕ್ಕೆ ಹೋದೆ. ಅಲ್ಲಿದ್ದ ತೆರೆದ ಬಾವಿಯ ನೀರಿನ ಮೇಲೆ ಕೆಲವು ಕೀಟಗಳು ಅತಿ ವೇಗ ಗತಿಯಲ್ಲಿ ಈಜುವುದು ಕಣ್ಣಿಗೆ ಬಿತ್ತು. ಅವು ಥೇಟ್ ಚಿಕ್ಕ ಮಕ್ಕಳು ಸ್ಕೇಟಿಂಗ್ ಆಡುವ ಹಾಗೆ ಅಥವ ಸದ್ದಿಲ್ಲದಂತೆ ಸ್ಕೇಟ್‌ಬೋರ್ಡ್ ಹಾಕಿಕೊಂಡು ಸುಯ್ಞ್ಂ.. ಎಂದು ನೀರಿನ ಮೇಲೆ ‘ಸರ್ಫಿಂಗ್’ ಮಾಡುವಂತೆ ಆಟವಾಡುತ್ತಿದ್ದವು.

ಕೀಟ-ನೋಟ

ಕೀಟಶಾಸ್ತ್ರಜ್ಞರು ಈ ಕೀಟಗಳನ್ನು ಪಾಂಡ್ ಸ್ಕೇಟರ್ಸ್(Pond Skaters) ಅಥವಾ ವಾಟರ್ ಸ್ಟ್ರೈಡರ್ಸ್(Water Striders)ಗಳೆಂದು ಕರೆದಿದ್ದಾರೆ. ಜರ್ರಿಡೆ(Gerridae) ಕುಟುಂಬ, ಹೆಮಿಪ್ಟೆರಾ (Hemiptera) ವರ್ಗಕ್ಕೆ ಸೇರಿದ ಈ ಸುಂದರ ಕೀಟಗಳು ಹೇಗೆ ನೀರಿನ ಮೇಲೆಯೇ ಬಹಳ ಸಲೀಸಾಗಿ ಈಜಿಕೊಂಡು ಜಾರಿಕೊಳ್ಳುತ್ತವೆ ಮತ್ತು ಸಂಪೂರ್ಣ ಜೀವನ ಅಲ್ಲೇ ಪೂರೈಸುತ್ತವೆ ಎಂಬುದು ಅಚ್ಚರಿ ಮೂಡಿಸುತ್ತವೆ.

ಬಹಳ ಹಗುರವಾದ ಈ ಕೀಟಗಳ ಆರು ಕಾಲುಗಳಲ್ಲಿಯೂ ಸೂಕ್ಷ್ಮವಾದ ಸಾವಿರಾರು ರೋಮಗಳಿದ್ದು ಪ್ರತಿಯೊಂದು ರೋಮದಲ್ಲೂ ಹಲವಾರು ಚಿಕ್ಕ ಚಿಕ್ಕ ರಂಧ್ರಗಳಿವೆ. ಈ ರಂಧ್ರಗಳಲ್ಲಿ ಗಾಳಿ ತುಂಬಿಕೊಂಡಿರುವುದರಿಂದ ಸಂಪೂರ್ಣ ದೇಹವನ್ನು ನೀರಿನಲ್ಲಿ ಮುಳುಗದಂತೆ ಮೇಲೆಯೇ ತೇಲಿಸಿಬಿಡುತ್ತವೆ. ಇದಕ್ಕೆ ವಿಜ್ಞಾನದಲ್ಲಿ ಬಯೋಯನ್ಸಿ(Buoyancy) ಮತ್ತು ಕನ್ನಡದಲ್ಲಿ ‘ಪ್ಲವನತೆ’ ಎಂದೆನ್ನಬಹುದು. ಇಲ್ಲಿನ ರೋಮಗಳೂ ನೀರನ್ನು ವಿಕರ್ಷಿಸುತ್ತ, ಜಲದ್ವೇಷಿ(Hydrophobic hairs)ಗಳಾಗಿರುವುದು ಕೀಟವನ್ನು ನೆನೆಯದಂತೆ ಮಾಡಿ ಮತ್ತಷ್ಟು ಪ್ಲವನತೆ ಹೆಚ್ಚಿಸುತ್ತಾ ಕೀಟವನ್ನು ಅತೀ ವೇಗವಾಗಿ ಈಜುವಂತೆ ಮಾಡುತ್ತವೆ. ಎಲ್ಲ ಕೀಟಗಳಿಗೂ ಮೂರು ಜೊತೆ ಕಾಲುಗಳಿರುವುದು ನಾವು ಬಲ್ಲೆವು. ಈ ಕೀಟಗಳಲ್ಲಿ ಮುಂಗಾಲುಗಳು ಕೊಂಚ ಚಿಕ್ಕದಾಗಿದ್ದು, ನೀರಿನಲ್ಲಿ ದಕ್ಕುವ ಸೊಳ್ಳೆ ಮರಿಗಳು ಮತ್ತು ಇತರೆ ಜಲಚರ ಜೀವಿಗಳನ್ನು ಹಿಡಿದು ತಿನ್ನಲು ಮಾರ್ಪಾಟು ಗೊಂಡಿವೆ. ಮಧ್ಯದ ಎರಡು ಕಾಲುಗಳು ದೋಣಿಯ ಹುಟ್ಟಿನಂತೆ ಕಾರ್ಯ ನಿರ್ವಹಿಸುತ್ತಾ ಕೀಟ ದೇಹವನ್ನು ಮುಂದಕ್ಕೆ ತಳ್ಳುತ್ತವೆ. ಹಿಂಬದಿಯ ಕಾಲುಗಳು ಉದ್ದವಾಗಿದ್ದು ಕೀಟ ಪಯಣದ ದಿಕ್ಕು ಬದಲಾಯಿಸುವಲ್ಲಿ ಮತ್ತು ವೇಗ ತಡೆ ನಿಯಂತ್ರಣದ ಕಾರ್ಯವನ್ನು ಬಹು ಸುಗಮವಾಗಿ ನಿರ್ವಹಿಸುತವೆ. ನೀರಿನ ಮೇಲೆ ಇವು ಕಾಲುಗಳಿಟ್ಟ ಜಾಗವು ಜಲ ಗುಂಡಿಗಳಂತೆ ಸುಂದರವಾಗಿ ಗೋಚರಿಸುತ್ತದೆ. ನೆಲದ ಮೇಲೆ ಇವುಗಳ ಆಗಮನ ಎಂದಿಗೂ ಸಾಧ್ಯವೇ ಇಲ್ಲ ಎನ್ನುವುದೊಂದೇ ವಿಪರ್ಯಾಸ.

(ಲೇಖಕರು ಕೃಷಿ ಅಧಿಕಾರಿ, ಬೆಂಗಳೂರು)

ಸುಭಾಷಿತ

ಕ್ರಾಂತಿ ಎಂದರೆ ಹಳೆಯದನ್ನೆಲ್ಲ ನಾಶ ಮಾಡುವುದು ಎಂದರ್ಥವಲ್ಲ. ಹಳೆಯದರಲ್ಲಿ ಏನೇನು ಒಳ್ಳೆಯದು ಇದೆಯೋ ಅದನ್ನೆಲ್ಲ ಉಳಿಸಿಕೊಂಡು ಹೊಸ ಬದುಕನ್ನು ಕಟ್ಟಿಕೊಳ್ಳುವುದು. –ಜಿ.ಎಸ್.ಶಿವರುದ್ರಪ್ಪ

ಸಮೀಪಿಸುತ್ತಿದೆ ಮಳೆಗಾಲ: ಸವಾಲು ಎದುರಿಸಲು ಸಜ್ಜಾಗಲಿ ಪಾಲಿಕೆ

ಬೆಂಗಳೂರಿನಲ್ಲಿ ಮಳೆಗಾಲದ ಸಮಯದಲ್ಲಿ ಪದೇ ಪದೇ ಪ್ರವಾಹ ಸಂಭವಿಸುವುದು, ತಗ್ಗು ಪ್ರದೇಶಗಳಲ್ಲಿನ ಮನೆಗಳಿಗೆ ನೀರು ನುಗ್ಗುವುದು, ರಸ್ತೆಗಳಲ್ಲಿ ನೀರು ಕಟ್ಟಿಕೊಂಡು ಸಂಚಾರ ದಟ್ಟಣೆ ಉಂಟಾಗುವುದು ಇತ್ತೀಚಿನ ವರ್ಷಗಳಲ್ಲಿ ಮಾಮೂಲಿ ಸಂಗತಿ ಎಂಬಂತಾಗಿಬಿಟ್ಟಿದೆ. ರಾಜಕಾಲುವೆಗಳ ಒತ್ತುವರಿ, ಕೆರೆಗಳಲ್ಲಿ ಹೂಳು ತುಂಬಿರುವುದು ಮಾತ್ರವಲ್ಲದೆ, ತ್ಯಾಜ್ಯನೀರಿನ ನಿರ್ವಹಣೆಗೆ ಸಮರ್ಪಕ ಯೋಜನೆ ರೂಪಿಸದಿರುವುದು ಸಹ ಇಂತಹ ಸ್ಥಿತಿಗೆ ಪ್ರಮುಖ ಕಾರಣಗಳಾಗಿವೆ. ಮಳೆ ಬಂದಾಗ ನಗರದಲ್ಲಿ ಪ್ರವಾಹ ಉಂಟಾಗಬಹುದಾದ 210 ಪ್ರದೇಶಗಳನ್ನು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಸೇರಿ ಗುರುತಿಸಿವೆ. ಅವುಗಳಲ್ಲಿ 56 ಅತಿ ಸೂಕ್ಷ್ಮ ಪ್ರದೇಶಗಳಿವೆ. ರಾಜಕಾಲುವೆಗಳ ಹೂಳೆತ್ತುವ ಹಾಗೂ ಅಗತ್ಯ ಇರುವ ಕಡೆ ರಾಜಕಾಲುವೆಗಳಿಗೆ ತಡೆಗೋಡೆಗಳನ್ನು ಎತ್ತರಿಸುವ ಮೂಲಕ ಪ್ರವಾಹ ಉಂಟಾಗುವ ಪ್ರದೇಶಗಳ ಸಂಖ್ಯೆಯನ್ನು ಕಡಿಮೆ ಮಾಡಿರುವುದಾಗಿ ಬಿಬಿಎಂಪಿ ಹೇಳಿದೆ. ದಿನವೊಂದಕ್ಕೆ 60 ಮಿಲಿ ಮೀಟರ್‌ಗಿಂತ ಹೆಚ್ಚು ಮಳೆಯಾದರೆ, ನೀರು ಸರಾಗವಾಗಿ ಹರಿದುಹೋಗಲು ಸಾಧ್ಯವಾಗುವಂತಹ ಸುಸಜ್ಜಿತ ರಾಜಕಾಲುವೆ ವ್ಯವಸ್ಥೆ ನಗರದಲ್ಲಿ ಇಲ್ಲ. 70 ಮಿಲಿ ಮೀಟರ್‌ಗೂ ಅಧಿಕ ಮಳೆಯಾದರಂತೂ ತಗ್ಗು ಪ್ರದೇಶಗಳ ಮನೆಗಳು ಜಲಾವೃತವಾಗುವುದು ಖಚಿತ ಎಂಬಂತಹ ಸ್ಥಿತಿ ಇದೆ.



ಮಳೆಗಾಲದಲ್ಲಿ ಬೆಂಗಳೂರಿನ ಜನ ಆತಂಕದಿಂದ ಬದುಕು ಸವೆಸುವಂತಹ ಸ್ಥಿತಿ ನಿರ್ಮಾಣವಾಗದಂತೆ ನೋಡಿಕೊಳ್ಳಬೇಕಾದುದು ಸರ್ಕಾರದ ಆದ್ಯ ಕರ್ತವ್ಯ

ಇನ್ನೇನು ಮಳೆಗಾಲ ಶುರುವಾಗಲಿದೆ. ಆದರೆ, ಮಳೆಗಾಲದ ಸಂಭಾವ್ಯ ಅನಾಹುತ ತಡೆಯಲು ನಡೆಯಬೇಕಿರುವ ಸಿದ್ಧತೆಗಳನ್ನು ಅವಲೋಕಿಸಿದರೆ, ಈ ವರ್ಷವೂ ಪರಿಸ್ಥಿತಿಯಲ್ಲಿ ಮಹತ್ತರ ಸುಧಾರಣೆಗಳು ಕಾಣಿಸುತ್ತಿಲ್ಲ. ಈ ತಿಂಗಳ ಆರಂಭದಲ್ಲಿ ಸುರಿದ ಮಳೆಗೆ ನಗರದ ಉತ್ತರಹಳ್ಳಿಯ ಕೆಲವು ಬಡಾವಣೆಗಳಲ್ಲಿ ಮನೆಗಳು ಜಲಾವೃತಗೊಂಡಿವೆ. ನಗರದ ಕೇಂದ್ರ ವಾಣಿಜ್ಯ ಪ್ರದೇಶಗಳಲ್ಲಿ ಬೆಂಗಳೂರು ಸ್ಮಾರ್ಟ್‌ ಸಿಟಿ ಯೋಜನೆಯ ಕಾಮಗಾರಿಗಳು ನಡೆಯುತ್ತಿರುವ ಪ್ರದೇಶಗಳು ಹಾಗೂ 'ನಮ್ಮ ಮೆಟ್ರೊ' ಯೋಜನೆಯ ಎರಡನೇ ಹಂತದ ಕಾಮಗಾರಿಗಳು ನಡೆಯುತ್ತಿರುವ ಪ್ರದೇಶಗಳಲ್ಲಿ ಸೃಷ್ಟಿಯಾದ ಅವಾಂತರಗಳು ಮಳೆಗಾಲದಲ್ಲಿ ಎದುರಾಗಬಹುದಾದ ಭೀಕರ ಸನ್ನಿವೇಶದ ಮುನ್ಸೂಚನೆಯನ್ನು ನೀಡಿವೆ. ನಗರದಲ್ಲಿ ಪ್ರವಾಹದಿಂದ ಉಂಟಾಗುವ ಹಾನಿಯನ್ನು ಅಂದಾಜು ಮಾಡುವುದು ಕಷ್ಟ. ಜಕ್ಕೂರಿನಲ್ಲಿರುವ ಜವಾಹರಲಾಲ್ ನೆಹರೂ ಉನ್ನತ ವೈಜ್ಞಾನಿಕ ಸಂಶೋಧನಾ ಕೇಂದ್ರದಲ್ಲಿ ಮೂರು ದಶಕಗಳಿಂದ ಕಾಪಾಡಿಕೊಂಡು ಬಂದಿದ್ದ ಮಹತ್ತರ ವೈಜ್ಞಾನಿಕ ದಾಖಲೆಗಳು ಹಾಗೂ ಅತ್ಯಾಧುನಿಕ ಯಂತ್ರೋಪಕರಣಗಳು 2021ರ ನವೆಂಬರ್‌ನಲ್ಲಿ ಉಂಟಾದ ಪ್ರವಾಹದಿಂದ ನೀರುಪಾಲಾಗಿ, ಬೆಲೆ ಕಟ್ಟಲಾರದಷ್ಟು ನಷ್ಟ ಉಂಟಾಗಿತ್ತು. ಆ ಸಂದರ್ಭದಲ್ಲಿ, ಪ್ರವಾಹ ತಡೆಯಲು ರಾಜಕಾಲುವೆಗಳ ಅಭಿವೃದ್ಧಿಗೆ ಅಗತ್ಯ ಅನುದಾನ ನೀಡುವ ಭರವಸೆಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೀಡಿದ್ದರು. 60 ಕಿ.ಮೀ. ಉದ್ದದ ಪ್ರಥಮ ಹಂತದ ರಾಜಕಾಲುವೆಗಳು ಹಾಗೂ 97 ಕಿ.ಮೀ. ಉದ್ದದ ದ್ವಿತೀಯ ಹಂತದ ರಾಜಕಾಲುವೆಗಳನ್ನು ಅಭಿವೃದ್ಧಿಪಡಿಸಲು ಒಟ್ಟು 292 ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ಬಿಬಿಎಂಪಿ ಸಿದ್ಧಪಡಿಸಿತ್ತು. ಆದರೆ, ₹1,560 ಕೋಟಿ ಅಂದಾಜು ವೆಚ್ಚದ ಈ ಕಾಮಗಾರಿಗಳು ಈಗಲೂ ಕಾಗದದಲ್ಲೇ ಉಳಿದಿವೆ.

ಕಳೆದ ಸಾಲಿನಲ್ಲಿ ಮಳೆಗಾಲಕ್ಕೆ ಮುನ್ನ ರಸ್ತೆಗುಂಡಿಗಳನ್ನು ದುರಸ್ತಿಪಡಿಸದ ಕಾರಣ ನಿವಾಸಿಗಳು ವರ್ಷದುದ್ದಕ್ಕೂ ಸಮಸ್ಯೆ ಎದುರಿಸಬೇಕಾಯಿತು. ರಸ್ತೆಗುಂಡಿಗಳಿಂದಾಗಿ 2021–22ನೇ ಸಾಲಿನಲ್ಲಿ ಸಂಭವಿಸಿದ ಪ್ರತ್ಯೇಕ ಅಪಘಾತಗಳಲ್ಲಿ ನಾಲ್ವರು ಜೀವ ಕಳೆದುಕೊಂಡಿದ್ದರು. ಈ ಸಾವುಗಳಿಂದಲೂ ಬಿಬಿಎಂಪಿ ಪಾಠ ಕಲಿತಂತಿಲ್ಲ. ಮುಖ್ಯಮಂತ್ರಿಯವರೇ ಕಟ್ಟುನಿಟ್ಟಿನ ಸೂಚನೆ ನೀಡಿದ ಬಳಿಕ ನಗರದ ಅನೇಕ ಕಡೆ ಮುಖ್ಯರಸ್ತೆಗಳಲ್ಲಿನ ಗುಂಡಿಗಳನ್ನೇನೋ ಮುಚ್ಚಲಾಗಿದೆ. ಆದರೆ, ವಾರ್ಡ್ ಮಟ್ಟದ ರಸ್ತೆಗಳ ಸ್ಥಿತಿ ಮತ್ತೊಂದು ಮಳೆಗಾಲ ಸಮೀಪಿಸಿದರೂ ಸುಧಾರಿಸಿಲ್ಲ ಎಂಬುದು ವಿಪರ್ಯಾಸ. ಒಳ ರಸ್ತೆಗಳಲ್ಲಿ ಈಗಲೂ ಬಾಯ್ತೆರೆದುಕೊಂಡಿರುವ ಗುಂಡಿಗಳು ಮೃತ್ಯುಕೂಪಗಳಂತೆ ಕಾಣಿಸುತ್ತಿವೆ. ಮಳೆ ಬಂದಾಗ ಚರಂಡಿ ಹೂಳೆತ್ತುವುದು, ಅಪಾಯಕಾರಿ ಮರಗಳ ಕೊಂಬೆ ಕತ್ತರಿಸುವುದು, ಮರ ಬಿದ್ದರೆ ತಕ್ಷಣ ಅದನ್ನು ತೆರವುಗೊಳಿಸುವುದಕ್ಕೆ ತಕ್ಕ ಸಜ್ಜಾಗಿರುವುದಾಗಿ ಎಂದು ಬಿಬಿಎಂಪಿ ಭಾವಿಸಿದಂತಿದೆ. ಬಿಬಿಎಂಪಿ ಅಧಿಕಾರಿಗಳು ನಡೆಸುವ ಮಳೆಗಾಲದ ಪೂರ್ವಸಿದ್ಧತೆ ಸಭೆಗಳಲ್ಲಿ ಈ ವಿಚಾರಗಳಷ್ಟೇ ಚರ್ಚೆಯಾಗುತ್ತಿವೆ. ದಶಕದಿಂದ ಈಚೆಗೆ ಪ್ರತೀ ಮಳೆಗಾಲದಲ್ಲಿ ಪ್ರವಾಹಗಳು ಮರುಕಳಿಸಿದರೂ ಅವನ್ನು ಶಾಶ್ವತ ವಾಗಿ ತಡೆಯುವ ಸಮಗ್ರ ಕಾರ್ಯಯೋಜನೆ ಜಾರಿಗೊಳಿಸಲು ಸಾಧ್ಯವಾಗಿಲ್ಲ. ಸರ್ಕಾರ ಇನ್ನಾದರೂ ಎಚ್ಚೆತ್ತು, ಪ್ರವಾಹ ತಡೆಯಲು ಆಗಬೇಕಾದ ಕಾಮಗಾರಿಗಳನ್ನು ಸಮರೋಪಾದಿಯಲ್ಲಿ ಪೂರ್ಣಗೊಳಿಸ ಬೇಕು. ಮುಂಗಾರು ಆರಂಭಕ್ಕೆ ಮೊದಲೇ ರಸ್ತೆಗುಂಡಿಗಳನ್ನು ಮುಚ್ಚಲು ಕ್ರಮ ಕೈಗೊಳ್ಳಬೇಕು. ಮಳೆ ನೀರು ಸರಾಗವಾಗಿ ಹರಿದು ಹೋಗಲು ವ್ಯವಸ್ಥೆ ಕಲ್ಪಿಸಬೇಕು. ರಾಜಕಾಲುವೆಗಳು 630 ಕಡೆ ಒತ್ತುವರಿ ಆಗಿವೆ ಎಂದು ಬಿಬಿಎಂಪಿ ಗುರುತಿಸಿದೆ. ಅವುಗಳನ್ನು ಮುಲಾಜಿಲ್ಲದೇ ತೆರವುಗೊಳಿಸಬೇಕು.

ದಿನದ ಟ್ವೀಟ್

'ಭಾಷೆ'ಯ ಬಲೆಗೆ ಬೀಳದಿರಿ

ಭಾರತದ ಮಕ್ಕಳೇ– ರಾಜಕಾರಣಿಗಳು ಬೀಸುವ 'ಭಾಷೆ'ಯ ಬಲೆಗೆ ಬೀಳದಿರಿ. ನೀವು ಚೆನ್ನಾಗಿ ತಿಳಿದಿರಬೇಕಾದ ಭಾಷೆಗಳೆಂದರೆ– ಸಿ ++, ಜಾವಾ, ಪೈಥಾನ್, ಎಚ್‌ಟಿಎಂಎಲ್ ಮುಂತಾದವು ಮಾತ್ರ.

ಅತುಲ್ ಖತ್ರಿ, ಸ್ಟ್ಯಾಂಡಪ್ ಕಮಿಡಿಯನ್

ಕಿಡಿನುಡಿ

ಆಹಾರದ ಹಣದುಬ್ಬರವು ಉಳ್ಳವರಿಗಿಂತ ಹೆಚ್ಚು ಪರಿಣಾಮ ಬೀರಿರುವುದು ಸಾಮಾನ್ಯ ಜನರ ಮೇಲೆ. ಏಕೆಂದರೆ, ಅವರ ನಿಯಮಿತ ಮಾಸಿಕ ಬಜೆಟ್‌ನ ದೊಡ್ಡ ಪ್ರಮಾಣವು ಆಹಾರಕ್ಕೇ ವ್ಯಯವಾಗುತ್ತದೆ. ಸಾಮಾನ್ಯ ನಾಗರಿಕರ ಮೇಲೆ ಅದರ ಪ್ರಭಾವ ಆಗದಂತೆ ನೋಡಿಕೊಳ್ಳಲು ಸರ್ಕಾರ ಕ್ರಮಗಳನ್ನು ಕೈಗೊಳ್ಳಬೇಕು, ಇಲ್ಲದಿದ್ದರೆ 'ಅಂತ್ಯೋದಯ'ದಂತಹ ಯೋಜನೆಗಳಿಗೆ ಏನು ಅರ್ಥವಿದೆ?

ಶಶಿ ತರೂರ್, ಕಾಂಗ್ರೆಸ್ ಸಂಸದ

25 ವರ್ಷಗಳ ಹಿಂದೆ

ಶುಕ್ರವಾರ, 16-5-1997

• ಪೆಟ್ರೋಲ್ ಬಂಕ್ ಪರವಾನಗಿ: 22ರಂದು ವರದಿ ಸಲ್ಲಿಸಲು ಆದೇಶ

ನವದೆಹಲಿ, ಮೇ 15 (ಯುಎನ್‌ಐ)– ಪೆಟ್ರೋಲ್ ಬಂಕ್‌ಗಳು ಹಾಗೂ ಅಡುಗೆ ಅನಿಲ ವಿತರಣಾ ಪರವಾನಗಿ ನೀಡುವಲ್ಲಿ ಸಂಸತ್ ಸದಸ್ಯರ ವಿವೇಚನಾ ಕೋಟಾವನ್ನು ದುರುಪಯೋಗಪಡಿಸಿಕೊಳ್ಳಲಾಗಿದೆ ಎಂಬ ಆರೋಪದ ಬಗ್ಗೆ ಈ ತಿಂಗಳ 22ರಂದು ವರದಿ ಸಲ್ಲಿಸುವಂತೆ ದೆಹಲಿ ಹೈಕೋರ್ಟ್ ಸಿಬಿಐಗೆ ಆದೇಶ ನೀಡಿದೆ.

ಆರೋಪದ ಕುರಿತು ತನಿಖೆ ನಡೆಸುತ್ತಿರುವ ಸಿಬಿಐ ಈ ಸಂಬಂಧ ಪೆಟ್ರೋಲಿಯಂ ಸಚಿವಾಲಯದಿಂದ 1996ರಲ್ಲಿ 15 ಮಂಜೂರಾತಿಗಳ ದಾಖಲೆ ಪತ್ರಗಳನ್ನು ಪಡೆದಿದ್ದು, ಈ ಎಲ್ಲ ದಾಖಲೆಗಳ ಬಗ್ಗೆ ವರದಿಯಲ್ಲಿ ಸ್ಪಷ್ಟನೆ ನೀಡಬೇಕು ಎಂದು ಹೈಕೋರ್ಟ್ ಸೂಚಿಸಿದೆ.

1992–93ರ ಅವಧಿಯಲ್ಲಿ ಮಂಜೂರು ಮಾಡಿದ ಸುಮಾರು 400 ಪೆಟ್ರೋಲ್ ಬಂಕ್‌ಗಳು ಮತ್ತು ಅಡುಗೆ ಅನಿಲ ವಿತರಣಾ ಪರವಾನಗಿಗಳ ಕ್ರಮಬದ್ಧತೆಯನ್ನು ಪರಿಶೀಲಿಸುತ್ತಿರುವ ಹೈಕೋರ್ಟ್‌ನ ವಿಭಾಗೀಯ ನ್ಯಾಯಪೀಠ ಈ ಆದೇಶ ನೀಡಿದೆ.

• ಮಹಿಳಾ ಮೀಸಲು ಮಸೂದೆಗೆ ಮುಸ್ಲಿಂ ಸದಸ್ಯರ ವಿರೋಧ

ನವದೆಹಲಿ, ಮೇ 15 (ಯುಎನ್‌ಐ)– ಮುಸ್ಲಿಂ ಸದಸ್ಯರ ತೀವ್ರ ವಿರೋಧದ ನಡುವೆ ಮಹಿಳಾ ಮೀಸಲಾತಿ ಮಸೂದೆ ನಾಳೆ ಸಂಸತ್ತಿನಲ್ಲಿ ಮಂಡನೆಯಾಗಲಿದೆ. ಪ್ರತಿಭಟನೆಯ ನಡುವೆಯೂ ಆತುರವಾಗಿ ಈ ಮಸೂದೆಯನ್ನು ಅಂಗೀಕರಿಸಿದರೆ ದೇಶದಾದ್ಯಂತ ತೀವ್ರ ಚಳವಳಿ ನಡೆಸುವುದಾಗಿ ಕಲ್ಬುರ್ಗಿ ಸಂಸತ್ ಸದಸ್ಯ ಖಮರುಲ್ ಇಸ್ಲಾಂ ಸೇರಿದಂತೆ ಹಲವಾರು ಮಂದಿ ಮುಸ್ಲಿಂ ನಾಯಕರು ಬೆದರಿಕೆ ಹಾಕಿದ್ದಾರೆ.

ಶಾಸನಸಭೆಗಳಲ್ಲಿ ಮಹಿಳೆಯರಿಗೆ ಶೇಕಡ 33ರಷ್ಟು ಮೀಸಲಾತಿ ನೀಡುವ ಉದ್ದೇಶದ ಈ ಪರಿಷ್ಕೃತ ಮಸೂದೆಗೆ ಎಲ್ಲ ಪಕ್ಷಗಳ ಮುಸ್ಲಿಂ ಸದಸ್ಯರು ತೀವ್ರ ವಿರೋಧ ವ್ಯಕ್ತಪಡಿಸಿದ್ದು, 'ಇದರಿಂದ ಅಲ್ಪಸಂಖ್ಯಾತರಿಗೆ ಮತ್ತು ಹಿಂದುಳಿದ ವರ್ಗಗಳ ಜನತೆಗೆ ಶಾಸನಸಭೆಗಳಲ್ಲಿ ಪ್ರಾತಿನಿಧ್ಯ ದೊರಕುವುದು ತಪ್ಪಿಹೋಗುತ್ತದೆ' ಎಂದು ವಾದಿಸಿದ್ದಾರೆ.

50 ವರ್ಷಗಳ ಹಿಂದೆ

ಮಂಗಳವಾರ, 16-5-1972

• ಇಂದಿರಾ = ರಾಹು!

ತಿರುಚೂರು, ಮೇ 15– ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರನ್ನು ಸಂಸ್ಥಾ ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರು 'ರಾಹು'ವಿಗೆ ಹೋಲಿಸಿ, ಸದ್ಯಕ್ಕೆ ತಮ್ಮ ಪಕ್ಷ ಅದರ ಮಬ್ಬಿನಲ್ಲಿ ಮರೆಯಾಗಿದೆಯೆಂದು ಒಪ್ಪಿಕೊಂಡರು.

ನಿನ್ನೆ ರಾತ್ರಿ ಇಲ್ಲಿ ಅವರು ಭಾರಿ ಬಹಿರಂಗ ಸಭೆಯೊಂದನ್ನು ಉದ್ದೇಶಿಸಿ ಮಾತನಾಡಿ, 'ಅತ್ಯಂತ ಕೆಂಪಗೆ ಕಾದಿರುವ ಸೂರ್ಯನಿಗೆ ಸಹ ಕೆಲವೊಮ್ಮೆ ರಾಹು ಬಡಿಯುತ್ತದೆ. ಈಗ ಕಾಂಗ್ರೆಸ್ ಸಂಸ್ಥೆ ಒಂದು ರಾಹುವಿನ– ಇಂದಿರಾ– ಮಬ್ಬಿಗೆ ಗುರಿಯಾಗಿದೆ' ಎಂದರು.

ಸಂಸ್ಥಾ ಕಾಂಗ್ರೆಸ್ಸೇ 'ಅಸಲಿ ಕಾಂಗ್ರೆಸ್' ಎಂದು ಹೇಳಿಕೊಂಡ ಅವರು, ಕಾಂಗ್ರೆಸ್ (ಐ) 'ಇಮಿಟೇಷನ್ (ನಕಲಿ) ಅಥವಾ ಇಂದಿರಾ ಕಾಂಗ್ರೆಸ್' ಎಂದರು.

ಸಿದ್ಧಾಂತದ ಬಡಿವಾರವಿಲ್ಲದ ಧರ್ಮದ ಅವಶ್ಯಕತೆಯನ್ನು ನಾವಿಂದು ಮನಗಾಣಬೇಕಿದೆ

ಗೌತಮ ಬುದ್ಧನ ಮೌನ ವ್ಯಾಖ್ಯಾನ

ವಿಶ್ಲೇಷಣೆ

ಡಾ. ಟಿ.ಎನ್.ವಾಸುದೇವಮೂರ್ತಿ

ಅಸಂಬದ್ಧವಾದುದಕ್ಕೆ ಅಸಂಬದ್ಧವಾಗಿಯೇ ಪ್ರತಿಕ್ರಿಯಿಸಬೇಕೆಂಬ ಮನಸ್ಥಿತಿ ಬೆಳೆಸುತ್ತಿರುವ ಇಂದಿನ ಧಾರ್ಮಿಕ ವಾತಾವರಣದ ಮಧ್ಯೆ ಬುದ್ಧನ ಬದುಕಿನಲ್ಲಿ ನಡೆದ ಘಟನೆಯೊಂದು ನೆನಪಾಗುತ್ತದೆ.

ಪಂಡಿತನೊಬ್ಬ ಬುದ್ಧನನ್ನು ಎಂದೇ ಸಮನೆ ನಿಂದಿಸತೊಡಗಿದನು, ಬುದ್ಧ ಕರುಣಾಪೂರ್ಣ ದೃಷ್ಟಿಯಿಂದ ಅವನನ್ನು ನೋಡುತ್ತಿದ್ದ, ಕೊನೆಗೆ 'ಪಂಡಿತ, ನನ್ನನ್ನು ಕ್ಷಮಿಸು, ನಿನ್ನ ಬೈಗುಳಗಳಾವುವೂ ನನ್ನನ್ನು ತಲುಪಲೇ ಇಲ್ಲ' ಎಂದಾಗ ಪಂಡಿತನಿಗೆ ಗಾಬರಿಯಾಯಿತು. ಇವನ ಕಿವಿಗೆ ಏನಾದರೂ ಕಿವುಡುತನ ಹತ್ತಿರಬಹುದೆಂದು ಗೊಂದಲಗೊಂಡ. ಬುದ್ಧ ಮುಂದುವರಿದು 'ಪಂಡಿತ, ನಿನ್ನ ಮನೆಗೆ ಆಗಾಗ ನೆಂಟರಿಷ್ಟರು ಬರುತ್ತಾರಲ್ಲವೇ?' ಎಂದು ಕೇಳಿದ. ಪಂಡಿತ 'ಹೌದು ಬರುತ್ತಾರೆ, ಅದಕ್ಕೇನೀಗ?' ಎಂದು ಕೇಳಿದ.

ಬುದ್ಧ 'ಅವರಿಗೆ ಅನ್ನಾಹಾರಗಳನ್ನು ನೀಡಿ ಸತ್ಕರಿಸುವೆಯೋ ಇಲ್ಲವೋ?'

'ಅತಿಥಿ ಸತ್ಕಾರ ಮಾಡಲೇಬೇಕಲ್ಲವೇ?'

'ಒಂದು ವೇಳೆ ಅವರು ನಿನ್ನ ಊಟ ಸ್ವೀಕರಿಸದಿದ್ದರೆ?'

'ಆಗ ಅದನ್ನು ನಾನೇ ಉಣ್ಣುತ್ತೇನೆ'.

ಬುದ್ಧ 'ನಾವು ನಿನ್ನ ಬೈಗುಳವನ್ನು ಸ್ವೀಕರಿಸಿಲ್ಲ. ಈಗ ನಿನ್ನ ಬೈಗುಳವನ್ನು ನೀನೇ ಉಣ್ಣಬೇಕಾಗಿದೆ. ಬೈಗುಳಕ್ಕೆ ಪ್ರತಿಬೈಗುಳ, ಕ್ರಿಯೆಗೆ ತಕ್ಕ ಪ್ರತಿಕ್ರಿಯೆ ಇವೆಲ್ಲ ನಡೆದಾಗಲಷ್ಟೇ ಅತಿಥಿ- ಆತಿಥೇಯ ಸಂಬಂಧ ಸಂಪನ್ನವಾಗುತ್ತದೆ. ಆದರೆ ನಾವು ನಿನ್ನ ಔತಣಕೂಟದಲ್ಲಿ ಭಾಗವಹಿಸುವವರಲ್ಲ. ಈಗ ಎಲ್ಲವೂ ನಿನ್ನದೇ ಪಂಡಿತ, ಎಲ್ಲವೂ ನಿನ್ನದೇ' ಎಂದ.

ಮೌನದ ಪರಿಣಾಮಕಾರಿತ್ವವನ್ನು ಸಾರುವ ಕತೆ ಇದು.

'ಒಂದು ಬಂದೂಕನ್ನು ಕೈಲಿ ಹಿಡಿದಿರುವ ವ್ಯಕ್ತಿ ಆ ಕ್ಷಣದಲ್ಲಿ ಒಬ್ಬಿಬ್ಬರನ್ನೋ ಅಥವಾ ಹತ್ತಾರು ಜನರನ್ನೋ ಕೊಲ್ಲಬಹುದು. ಆದರೆ ಒಂದು ಸಿದ್ಧಾಂತವನ್ನು ಭದ್ರವಾಗಿ ಹಿಡಿದುಕೊಂಡ ವ್ಯಕ್ತಿ ನಿರಂತರವಾಗಿ ಹತ್ಯಾಕಾಂಡದಲ್ಲಿ ನಿರತನಾಗಬಲ್ಲ' ಎಂದು ಇತ್ತೀಚೆಗೆ ತೀರಿಕೊಂಡ ವಿಯೆಟ್ನಾಂನ ಸಂತ ಥಿಚ್ ನಾತ್ ಹನ್ ಹೇಳಿದ್ದರು.

ಅವರ ಈ ಮಾತು ಅಸಲಿಗೆ ಶಾಕ್ಯಮುನಿಯ ಸಿದ್ಧಾಂತ ವಿರೋಧಿ ನಿಲುವಿನ ಒಂದು ಸರಳ ವ್ಯಾಖ್ಯಾನವಾಗಿದೆ. ಸಿದ್ಧಾಂತಗಳ ದುಷ್ಪರಿಣಾಮವನ್ನು ಬುದ್ಧ ಪ್ರತ್ಯಕ್ಷವಾಗಿ ಕಂಡಿದ್ದನೆನಿಸುತ್ತದೆ. ಆದ್ದರಿಂದಲೇ ಅವನು ತನ್ನ ಉಪದೇಶಗಳು ಸಿದ್ಧಾಂತದ ರೂಪವನ್ನು ಪಡೆಯದಂತೆ ಪ್ರಯತ್ನಿಸಿದ.

ಸಂಯುತ್ತ ನಿಕಾಯದಲ್ಲಿ, ವಚ್ಛಗೊಟ್ಟ ಎಂಬಾತ ಬುದ್ಧನನ್ನು ಭೇಟಿಯಾದ ಪ್ರಸಂಗ ಬರುತ್ತದೆ. ವಚ್ಛಗೊಟ್ಟ ಬುದ್ಧನೊಂದಿಗೆ ಮಾತುಕತೆ ನಡೆಸುತ್ತ 'ಭಂತೇ, ಆತ್ಮವಸ್ತು ಇದೆಯೇ?' ಎಂದು ಕೇಳಿದಾಗ ಬುದ್ಧ ಏನನ್ನೂ ನುಡಿಯದೆ ಸುಮ್ಮನಿದ್ದ. ವಚ್ಛಗೊಟ್ಟ ತನಗೆ ತಾನೇ ಊಹಿಸಿಕೊಂಡು 'ಹಾಗಿದ್ದರೆ ಆತ್ಮವಸ್ತು ಇಲ್ಲ ಎಂಬುದು ನಿನ್ನ ಅಭಿಪ್ರಾಯವೋ?' ಎಂದು ಮತ್ತೊಮ್ಮೆ ಕೇಳಿದ. ಆಗಲೂ ಬುದ್ಧ ಮೌನವಾಗೇ ಇದ್ದ. ವಚ್ಛಗೊಟ್ಟನಿಗೆ ಮುಂದೆ ಏನು ಕೇಳಬೇಕೋ ತೋಚದೆ ಅಲ್ಲಿಂದ ನಿರ್ಗಮಿಸಿದ.

ಅನತಿ ದೂರದಲ್ಲಿ ನಿಂತು ಇವರಿಬ್ಬರ ಸಂವಾದ ಕೇಳಿಸಿಕೊಳ್ಳುತ್ತಿದ್ದ ಆನಂದ, ವಚ್ಛಗೊಟ್ಟ ಹೊರಟು ಹೋದ ಮೇಲೆ 'ಭಗವಾನ್, ನೀನು ಧರ್ಮಪ್ರವಚನ ನೀಡುವಾಗ ಆತ್ಮವಸ್ತುವಿಲ್ಲ ಎಂದು ಬಹಳ ಸಲ ಹೇಳಿದ್ದೆ. ಆದರೆ ಇಂದು ವಚ್ಛಗೊಟ್ಟನ ಪ್ರಶ್ನೆಗೆ ಅದೇಕೆ ಉತ್ತರ ನೀಡದೇ ಸುಮ್ಮನಿದ್ದೆ?' ಎಂದು ಕೇಳಿದಾಗ ಬುದ್ಧ 'ನಿಮ್ಮ ಅಂತರಂಗದಲ್ಲಿ ಆತ್ಮದಂತಹ ಯಾವ ವಸ್ತುವೂ ಇಲ್ಲ ಎಂದು ನಾನು ಹೇಳಿದ್ದುಂಟು. ಭಿಕ್ಕುಗಳು ತಮ್ಮೊಳಗೆ ಯಾವ ಆತ್ಮವಸ್ತುವಿಗೂ ತಡಕಾಡದೇ ಸುಮ್ಮನೆ ಧ್ಯಾನಸ್ಥರಾಗಬೇಕೆಂಬ ಉದ್ದೇಶದಿಂದ ನಾನು ಅನಾತ್ಮ ತತ್ವವನ್ನು ಬೋಧಿಸಿದ್ದೆ. ಅದನ್ನೆಲ್ಲ ಸಿದ್ಧಾಂತ ಮಾಡಿಕೊಂಡರೆ ನೀವು ಮತ್ತೆ ಜಟಿಲವಾದ ಗಂಟಿನೊಳಗೆ ಸಿಲುಕಿಬಿಡುವಿರಿ. ವಚ್ಛಗೊಟ್ಟ ಯಾವುದೋ ಸಿದ್ಧಾಂತವನ್ನು ಹುಡುಕಿಕೊಂಡು ಇಲ್ಲಿಗೆ ಬಂದಿದ್ದನೇ ವಿನಾ ಅಂತರಂಗದ ಸಾಧನೆಗಾಗಿ ಬಂದಿರಲಿಲ್ಲ. ಆದ್ದರಿಂದ ನಾನು ಸುಮ್ಮನಿದ್ದೆ. ಅವನು ನನ್ನ ಬೋಧನೆಯನ್ನು ಒಂದು ಕಗ್ಗಂಟನ್ನಾಗಿ ಮಾಡಿಕೊಳ್ಳಬಾರದೆಂಬ ಉದ್ದೇಶದಿಂದ ಸುಮ್ಮನಿರಬೇಕಾಯಿತು. ಆ ಸಂದರ್ಭದಲ್ಲಿ ನಾನು ಏನೇ ನುಡಿದಿದ್ದರೂ ಅದೊಂದು ಸಿದ್ಧಾಂತವಾಗಿ ಮಾರ್ಪಡುತ್ತಿತ್ತು' ಎಂದು ಉತ್ತರಿಸಿದ.

ಒಂದು ಪ್ರಶ್ನೆಗೆ ನಾಲ್ಕು ರೀತಿಯ ಉತ್ತರಗಳನ್ನು ನೀಡಬಹುದೆಂದು ಬುದ್ಧ ಹೇಳುತ್ತಾನೆ. 'ಕೆಲವು ಪ್ರಶ್ನೆಗಳಿಗೆ 'ಇದೆ' ಅಥವಾ 'ಇಲ್ಲ' ಎಂದು ಉತ್ತರಿಸಬೇಕಾಗುತ್ತದೆ, ಕೆಲವಕ್ಕೆ 'ಇದೆ'- 'ಇಲ್ಲ' ಎಂಬ ಉತ್ತರ ಸಾಕಾಗದೆ ಹೆಚ್ಚಿನ ವಿವರಣೆ ಬೇಕಾಗುತ್ತದೆ. ಕೆಲವು ಪ್ರಶ್ನೆಗಳಿಗೆ ವಿವರಣೆ ನೀಡದೆ ಮರುಪ್ರಶ್ನೆ ಕೇಳುವ ಮೂಲಕ ಉತ್ತರಿಸಬೇಕಾಗುತ್ತದೆ, ಮತ್ತೆ ಕೆಲವು ಪ್ರಶ್ನೆಗಳಿಗೆ ಏನನ್ನೂ ಉತ್ತರಿಸದೆ ಸುಮ್ಮನಿದ್ದು ಬಿಡಬೇಕಾಗುತ್ತದೆ'.

ಜಗತ್ತಿನ ಎಲ್ಲ ಧರ್ಮಗಳೂ ಶಬ್ದಪ್ರಮಾಣವನ್ನು ನಂಬಿವೆ. ಎಲ್ಲ ಪ್ರಶ್ನೆಗಳಿಗೂ ತನ್ನಲ್ಲಿ ಉತ್ತರವಿದೆ ಎಂಬ ಧಿಮಾಕು ಬೆಳೆಸಿಕೊಂಡಿವೆ. ಬೌದ್ಧಧರ್ಮವಾದರೂ ಶಬ್ದ ಪ್ರಮಾಣಕ್ಕಿಂತ ಮೌನಪ್ರಮಾಣದಲ್ಲಿ ಶ್ರದ್ಧೆಯಿಟ್ಟಿರುವ ಧರ್ಮವಾಗಿದೆ. 'ವಿಮಲಕೀರ್ತಿ ನಿರ್ದೇಶ ಸೂತ್ರ'ದಲ್ಲಿ ಬೋಧಿಸತ್ವ ಮಂಜುಶ್ರೀ, ವಿಮಲಕೀರ್ತಿಯ ಮೌನದ ಗಹನತೆಯನ್ನು ವರ್ಣಿಸುತ್ತಾ 'ಅವನದು ಗುಡುಗಿನಂತಹ ಮೌನ' ಎಂದು ಉದ್ಗರಿಸುತ್ತಾನೆ. ಗುಡುಗಿನ ಸದ್ದು ಹೇಗೆ ಮಾರ್ದನಿಸುತ್ತ ಎಲ್ಲ ದಿಕ್ಕುಗಳಲ್ಲೂ ಅನುರಣಿಸುತ್ತದೋ ಅದೇ ರೀತಿ ವಿಮಲಕೀರ್ತಿಯ ಮೌನವೂ ಅವನ ಸುತ್ತ ಒಂದು 'ಬುದ್ಧಕ್ಷೇತ್ರ'ವನ್ನು ನಿರ್ಮಾಣ ಮಾಡಿತ್ತು. ಆ ಬುದ್ಧಕ್ಷೇತ್ರ ಉಂಟು ಮಾಡಿದ್ದ ದಿವ್ಯತ್ವದ ಸ್ಪಂದನವನ್ನು ಮಂಜುಶ್ರೀ ಸ್ವತಃ ಅನುಭವಿಸಿದ್ದ ಕಾರಣ ಅವನು ಹಾಗೆ ಉದ್ಗರಿಸಿದ್ದನೆನಿಸುತ್ತದೆ.

ಬುದ್ಧನು ಸಿದ್ಧಾಂತಗಳನ್ನು, ಶಾಸ್ತ್ರ ಪ್ರಮಾಣವನ್ನು ಬೋಧಿಸಿದವನಲ್ಲ. ತನ್ನ ಬೋಧನೆಗಳನ್ನು ಅನ್ಯರ ಮೇಲೆ ಹೇರಿದವನಲ್ಲ. ಬದಲಾಗಿ, 'ನಿನಗೆ ನೀನೇ ಬೆಳಕಾಗು' (ಅಪ್ಪೋ ದೀಪೋ ಭವ) ಎಂದವನು. ಸೈದ್ಧಾಂತಿಕ ಪ್ರಶ್ನೆ, ಜಿಜ್ಞಾಸೆಗಳು ಪ್ರಾರಂಭವಾದಾಗಲೆಲ್ಲ ಅವನು ಮೌನಕ್ಕೆ ಮೊರೆ ಹೋಗುತ್ತಿದ್ದ. ಒಮ್ಮೆ ತನ್ನ ಮೌನಕ್ಕೆ ತಾನೇ ಹೀಗೆ ವಿವರಣೆ ನೀಡಿದ್ದ:

'ಒಬ್ಬ ಮನುಷ್ಯ ದಾರಿಯಲ್ಲಿ ನಡೆದುಕೊಂಡು ಹೋಗುವಾಗ ಯಾವುದೋ ದಿಕ್ಕಿನಿಂದ ಬಾಣವೊಂದು ರಭಸವಾಗಿ ನುಗ್ಗಿ ಅವನ ಎದೆಯೊಳಗೆ ಹೊಕ್ಕಿತು. ಆಸುಪಾಸಿನಲ್ಲಿದ್ದವರು ತಕ್ಷಣವೇ ಓಡಿಬಂದು ಅವನ ಎದೆಗೆ ನಾಟಿದ್ದ ಬಾಣವನ್ನು ತೆಗೆಯಲು ಮುಂದಾದಾಗ ಅವನು ಅವರನ್ನು ತಡೆದ. 'ಬಾಣವನ್ನು ತೆಗೆಯಬೇಡಿ, ಇದನ್ನು ಬಿಟ್ಟವನು ಬ್ರಾಹ್ಮಣನೋ ಕ್ಷತ್ರಿಯನೋ ವರ್ತಕನೋ ಬೇಡನೋ ಎಂಬುದು ನನಗೆ ಗೊತ್ತಾಗಬೇಕು. ಅವನ ಹೆಸರೇನು, ಅವನು ಉದ್ದವಿರುವನೋ, ಕುಳ್ಳಗಿರುವನೋ, ಕಪ್ಪುವರ್ಣದವನೋ, ಬಿಳಿಯ ಚರ್ಮದವನೋ ತಿಳಿಯಬೇಕು. ಬಾಣವನ್ನು ಬಿಟ್ಟ ಬಿಲ್ಲನ್ನು ಯಾವ ವಸ್ತುವಿನಿಂದ ತಯಾರಿಸಲಾಗಿದೆ ಎಂಬುದು ತಿಳಿಯಬೇಕು. ಬಾಣದ ಆ ತುದಿಯಲ್ಲಿರುವ ಗರಿ ಯಾವ ಪಕ್ಷಿಯದ್ದೆಂದು ನನಗೆ ಗೊತ್ತಾಗಬೇಕು. ಬಾಣದ ಈ ತುದಿಯಲ್ಲಿರುವ ಮೊನಚಾದ ವಸ್ತು ಲೋಹದ್ದೋ ಮೂಳೆಯದ್ದೋ ಅಥವಾ ಎತ್ತಿನ ಕೊಂಬಿನಿಂದ ಮಾಡಿದ್ದೋ ತಿಳಿಯಬೇಕು...' ಹೀಗೆ ಪ್ರಶ್ನೆಗಳನ್ನು ಕೇಳುತ್ತಲೇ ಅವನು ಸತ್ತುಹೋದ. ಅವನ ಪ್ರಶ್ನೆಗಳು ಮಾತ್ರ ಬದುಕುಳಿದವು' (ಚೂಳಮಾಲುಕ್ಯ ಸೂತ್ರ).



ಸಾಧಕರು 'ಈ ಸೃಷ್ಟಿಯ ಮೂಲವೇನು, ಸೃಷ್ಟಿಕರ್ತ ಇರುವನೇ, ತಥಾಗತನಿಗೆ ಮರುಹುಟ್ಟು ಇದೆಯೇ, ಜೀವಾತ್ಮವುಂಟೇ...?' ಎಂಬಿತ್ಯಾದಿ ಯಾವುದೇ ಸೈದ್ಧಾಂತಿಕ ಪ್ರಶ್ನೆಯೊಂದಿಗೆ ಬಂದಾಗ ಬುದ್ಧ ಮೌನ ವಹಿಸುತ್ತಿದ್ದ. ಬಳಿಕ ಅವರಿಗೆ ಈ ಕತೆ ಹೇಳುತ್ತಿದ್ದ. 'ದುಃಖವೆಂಬ ಬಾಣ ನಿನ್ನೆದೆಗೆ ನಾಟಿರುವಾಗ ಅದನ್ನು ಮೊದಲು ಕಳೆದುಕೊ. ಬಳಿಕ ಈ ಪ್ರಶ್ನೆಗಳ ಬೆನ್ನುಹತ್ತಿ ಹೊರಡು' ಎನ್ನುತ್ತಿದ್ದ. ಬುದ್ಧನ ಈ ಮೌನವನ್ನು ಬೌದ್ಧರು 'ಬುದ್ಧನ ಮಹಾಮೌನ' ಎಂದು ಕರೆಯುತ್ತಾರೆ.

ಇಂದು ಜಗತ್ತಿನ ಬಹುತೇಕ ಹಿಂಸಾಚಾರ, ಅನಾಚಾರಗಳಿಗೆ ಇಂತಹ ಸೈದ್ಧಾಂತಿಕ ಪ್ರಶ್ನೆಗಳೇ ಮೂಲ ಕಾರಣಗಳಾಗಿವೆ. ಸಿದ್ಧಾಂತದ ಬಡಿವಾರವಿಲ್ಲದ ಧರ್ಮದ ಅವಶ್ಯಕತೆಯನ್ನು ನಾವಿಂದು ಮನಗಾಣಬೇಕಿದೆ. ಗುಡಿ ಚರ್ಚು ಮಸೀದಿಗಳು ಮೈಕುಗಳ ಮೂಲಕ ಪ್ರತಿನಿತ್ಯ ವಾತಾವರಣದಲ್ಲಿ ಶಬ್ದಮಾಲಿನ್ಯ ಉಂಟು ಮಾಡುತ್ತಿರುವ ಇಂದಿನ ದಿನಮಾನದಲ್ಲಿ ಶಾಕ್ಯಮುನಿಯ ಮೌನ ವ್ಯಾಖ್ಯಾನಕ್ಕೆ ಸ್ಪಂದಿಸಬೇಕಾದ ಅಗತ್ಯವಿದೆ.

ಲೇಖಕ: ಸಹಾಯಕ ಪ್ರಾಧ್ಯಾಪಕ,
ಜ್ಯೋತಿನಿವಾಸ್ ಕಾಲೇಜ್, ಬೆಂಗಳೂರು

ಚುರುಮುರಿ

ಅಮೃತಕಾಲ ಬರತ್ತೈತಿ!

• ಸುಮಂಗಲಾ

ಬೆಕ್ಕಣ್ಣ, ವಿರಾಟ್ ಕೊಹ್ಲಿಯ ಕ್ರಿಕೆಟ್ ವಿಡಿಯೊವನ್ನೇ ಮತ್ತೆ ಮತ್ತೆ ನೋಡುತ್ತಿತ್ತು.

'ಏನಲೇ, ಕೊಹ್ಲಿ ಬ್ಯಾಟಿಂಗ್ ಸ್ಟಡಿ ಮಾಡಾಕ ಹತ್ತೀಯೇನ್' ಅಲುಕುತ್ತಲೇ ಕೇಳಿದೆ. ಯಾರಿಗೆ ಗೊತ್ತು... 'ಏನಾದರೊಂದು ಮಾಡುತಿರು ತಿಮ್ಮ' ಮನೋಭಾವದ ಬೆಕ್ಕಣ್ಣ 'ಕ್ರಿಕೆಟ್ ಕಲಿತೀನಿ, ದ್ರಾವಿಡಣ್ಣನ ಕ್ಲಬ್ಬಿಗೆ ಸೇರಿಸು' ಎಂದರೂ ಎನ್ನಬಹುದು.

'ಮೊನ್ನೆ ವಿರಾಟಣ್ಣ ಔಟಾದೇಟಿಗೆ ಆಕಾಶದ ಕಡಿಗಿ ನೋಡಿಕೋತ ಏನೋ ಮಾತಾಡಿದನಂತೆ. ಏನು ಅಂದಿರಬೌದು ಅಂತ ಕಂಡುಹಿಡಿಲಾಕ ಪ್ರಯತ್ನ ಮಾಡಾಕಹತ್ತೀನಿ. ಪೆಟ್ರೋಲು, ಡೀಸೆಲು, ಗ್ಯಾಸು ಎಲ್ಲಾದರ ಬೆಲೆ ಆಕಾಶ ಮುಟ್ಟೈತಿ... ನನ್ನ ರನ್ ರೇಟ್ ಮಾತ್ರ ಪಾತಾಳ ಕಂಡೈತಿ. ನನಗ್ಯಾಕ ಹೀಂಗ ಮಾಡಕೆಹತ್ತೀ ಶಿವನೆ ಅಂತ ಕೇಳಿರಬಕು' ಎಂದಿತು.

'ಬರೋಬ್ಬರಿ ಊಹೆ ಮಾಡೀಯೇಳು. ಹಣದುಬ್ಬರ ಬಡವರಿಗಿಂತ ಶ್ರೀಮಂತರಿಗೇ ಹೆಚ್ಚು ತ್ರಾಸು ಕೊಡಾಕೆ ಹತ್ತೈತಿ ಅಂತ ನಿಮ್ಮ ನಿರ್ಮಲಕ್ಕ ಹೇಳ್ಯಾಳ. ಮತ್ತ ವಿರಾಟಣ್ಣನೂ ಶ್ರೀಮಂತರೊಳಗ ಒಬ್ಬಾಂವ. ಅತ್ತಾಗೆ ಹಣದುಬ್ಬರ, ಇತ್ತಾಗೆ ರನ್ ಇಳಿತ ಎರಡೂ ಸೇರಿ ಪಾಪ ಅವಂಗ ಹುಚ್ ಹಿಡಿದ್ದಂಗ ಆಗಿರಬೌದು' ಎಂದು ಲೊಚ್‌ಗುಟ್ಟಿದೆ.

'ಈ ಹಣದುಬ್ಬರ, ಬೆಲೆಯೇರಿಕೆ, ನಿರುದ್ಯೋಗ ಯಾವುದೂ ಸಮಸ್ಯೆನೇ ಅಲ್ಲ. ಮುಂದಿನ 25 ವರ್ಷ ಕಾಲ ನಮ್ಮ ದೇಶಕ್ಕೆ ಅಮೃತಕಾಲ ಅಂತ ನಿರ್ಮಲಕ್ಕ ಹೇಳ್ಯಾರೆ. ಅಚ್ಛೇ ದಿನ್ ನಂತರ ಅಮೃತಕಾಲ ಬರತೈತಿ. ತಿಳೀತಿಲ್ಲೋ' ಬೆಕ್ಕಣ್ಣ ಗುರುಗುಟ್ಟಿತು.

'ಮುಂದಿನ ಮಾತು ಬಿಡಲೇ, ಈಗಿಂದು ಹೇಳು. ಅದ್ಸರಿ, ನಿರ್ಮಲಕ್ಕ ಉಡುಪಿ ಮಠ, ಕೊಲ್ಲೂರು ದೇವಸ್ಥಾನಕ್ಕ ಭೇಟಿ ಮಾಡಿದ್ರಂತ. ಈ ಸಲನೂ ಕರುನಾಡಿನ ರಾಜ್ಯಸಭೆಯಿಂದಲೇ ಆಯ್ಕೆಯಾಗಲಂತ ಬೇಡಿಕೊಂಡರೇನು?' ಅಂದೆ.

'ನದಿಮೂಲ, ಋಷಿಮೂಲ ಹುಡುಕ ಬಾರದು ಅಂತಾರಲ್ಲ, ಹಂಗ ರಾಜಕಾರಣಿ ದೇವಸ್ಥಾನ ಭೇಟಿ ಮೂಲ ಕೆದಕಬಾರದು, ತಿಳೀತಿಲ್ಲೋ' ಎಂದು ಹೊಸ ಗಾದೆ ಹೊಸೆದು ಹೊರಗೋಡಿತು.

ಸಂಗತ

ಅಂಗನವಾಡಿ: ಯಾಕೀ ಭಾನಗಡಿ?

ಮಕ್ಕಳನ್ನು ಜವಾಬ್ದಾರಿಯುತ ನಾಗರಿಕರನ್ನಾಗಿ ಮಾಡುವ ದಿಸೆಯಲ್ಲಿ ಭದ್ರ ಬುನಾದಿಯಾದ ಶಾಲಾಪೂರ್ವ ಶಿಕ್ಷಣದ ಮಹತ್ವವನ್ನು ಅರಿಯಬೇಕಾಗಿದೆ

• ಪ್ರಕಾಶ ನಡಹಳ್ಳಿ

ಜೀವನದ ಮೂಲ ಕೌಶಲವನ್ನು ಸೃಜನಾತ್ಮಕ ಆಟ ಮತ್ತು ಓರಗೆಯವರ ಸಂಪರ್ಕದಿಂದ ಮಕ್ಕಳಿಗೆ ಕಲಿಸುವುದೇ ಶಾಲಾಪೂರ್ವ ಶಿಕ್ಷಣ. ಎರಡರಿಂದ ಏಳು ವರ್ಷ ವಯೋಮಾನದಲ್ಲಿ ಅನೌಪಚಾರಿಕ ವಾತಾವರಣದಲ್ಲಿ ಈ ಶಿಕ್ಷಣವನ್ನು ನೀಡಬೇಕಾದುದು ಅತ್ಯಗತ್ಯ.

ಇಲ್ಲಿ ಮಗು ಸಮವಯಸ್ಕರೊಂದಿಗೆ ಬೆರೆಯುವ ಬಗೆ, ಚಟುವಟಿಕೆಗಳು, ಆಟಿಕೆಗಳಿಗೆ ಕೊಡುವ ಪ್ರತಿಕ್ರಿಯೆಗಳಿಂದ ಅದರ ಸ್ವಭಾವ, ಕಲಿಕೆ, ಭಾಷಾಜ್ಞಾನ, ಗ್ರಹಣಶಕ್ತಿ, ಸನ್ನಿವೇಶವನ್ನು ಸಂಭಾಳಿ ಸುವ ಶೈಲಿ ಎಲ್ಲವನ್ನೂ ಅರ್ಥಮಾಡಿಕೊಳ್ಳಬಹುದು. ಬಾಲ್ಯದ ಅನೇಕ ತೊಂದರೆಗಳನ್ನು ಪತ್ತೆ ಹಚ್ಚಿ, ತತ್ಕಾಲದಲ್ಲಿಯೇ ಸೂಕ್ತ ಪರಿಹಾರ ದೊರಕಿಸಲು ಸಾಧ್ಯವಾಗುತ್ತದೆ.

ಉತ್ತಮವಾದ ಶಾಲಾಪೂರ್ವ ಶಿಕ್ಷಣವು ಮಕ್ಕಳನ್ನು ಜವಾಬ್ದಾರಿಯುತ ನಾಗರಿಕರನ್ನಾಗಿ ಮಾಡುವ ಭದ್ರ ಬುನಾದಿ. ಇದರಿಂದಾಗಿ ಮುಂದೆ ಮಕ್ಕಳಲ್ಲಿ ಕ್ರೌರ್ಯದ ಮನೋಭಾವ ಕಡಿಮೆಯಾಗುತ್ತದೆ.

ಕೇಂದ್ರ ಸರ್ಕಾರವು 1975ರಲ್ಲಿ ಚಿಣ್ಣರ ಅಭಿವೃದ್ಧಿಗಾಗಿ 'ಇಂಟಿಗ್ರೇಟೆಡ್ ಚೈಲ್ಡ್ ಡೆವಲಪ್‌ಮೆಂಟ್ ಸರ್ವೀಸಸ್ (ಐಸಿಡಿಎಸ್)' ಎಂಬ ಯೋಜನೆಯನ್ನು ಹುಟ್ಟುಹಾಕಿತು. ಚಿಕ್ಕ ಮಕ್ಕಳಿಗೆ ಪೌಷ್ಟಿಕ ಆಹಾರದ ಪೂರೈಕೆ, ಮಗುವಿನ ದೈಹಿಕ, ಮಾನಸಿಕ, ಸಾಮಾಜಿಕ ಸ್ಥಿತಿಯನ್ನು ಉತ್ತಮಗೊಳಿಸುವುದು ಮತ್ತು ಶಿಶು ಮರಣ ಪ್ರಮಾಣ ಕಡಿಮೆ ಮಾಡುವುದು ಈ ಯೋಜನೆಯ ಮೂಲ ಉದ್ದೇಶಗಳು. ಅಂಗನವಾಡಿ ಎನ್ನುವ ಪರಿಕಲ್ಪನೆಯು ಈ ಐಸಿಡಿಎಸ್ ಯೋಜನೆಯ ಭಾಗ.

ಇಂದು 1,000 ಜನಸಂಖ್ಯೆಗೊಂದು ಅಂಗನವಾಡಿ ಇದೆ. ಈ ಕೇಂದ್ರದಲ್ಲಿ ಒಬ್ಬ ಶಿಕ್ಷಕಿ ಹಾಗೂ ಸಹಾಯಕಿ ಇರುತ್ತಾರೆ. ಮೂರು ವರ್ಷದೊಳಗಿನ ಮಕ್ಕಳಿಗೆ ಪೌಷ್ಟಿಕಾಂಶಯುಕ್ತ ಆಹಾರ ಸಾಮಗ್ರಿಗಳನ್ನು ಅಂಗನವಾಡಿಗಳ ಮೂಲಕ ಮನೆಗೆ ಪೂರೈಸಲಾಗುತ್ತದೆ. ಮೂರರಿಂದ ಆರು ವರ್ಷದ ಒಳಗಿನವರಿಗೆ ಬೆಳಿಗ್ಗೆ 10ರಿಂದ ಸಂಜೆ 4 ಗಂಟೆವರೆಗೆ ಅಂಗನವಾಡಿಯಲ್ಲಿ ಶಾಲಾಪೂರ್ವ ಶಿಕ್ಷಣದ ವ್ಯವಸ್ಥೆಯಿದೆ. ಅಲ್ಲಿನ ಚಟುವಟಿಕೆಗಳನ್ನು ಕ್ರಮಬದ್ಧವಾಗಿ ನಡೆಸಲು ಅಗತ್ಯವಾದ ಕಾರ್ಯವಿಧಾನಗಳನ್ನು ಸಹ ರೂಪಿಸಲಾಗಿದೆ. ಆದರೆ ಯೋಜನೆ ಆರಂಭವಾಗಿ 47 ವರ್ಷಗಳಾದರೂ ಅನುಷ್ಠಾನದಲ್ಲಿ ಹಲವಾರು ನ್ಯೂನತೆಗಳು ಕಾಣಿಸುತ್ತಿವೆ. ಅವುಗಳ ಕುರಿತು ವಿಮರ್ಶೆ ಅಗತ್ಯ. ಹಲವು ಅಂಗನವಾಡಿಗಳು ಕಚ್ಚಾ ಕಟ್ಟಡಗಳಲ್ಲಿದ್ದರೆ, ಕೆಲವು ಶಾಲಾ ಕಟ್ಟಡಗಳಲ್ಲಿವೆ. ಇನ್ನು ಕೆಲವು ಬಾಡಿಗೆ ಕಟ್ಟಡಗಳಲ್ಲಿವೆ. ಮತ್ತೆ ಕೆಲವು ಅಂಗನವಾಡಿಗಳು ಸಿಬ್ಬಂದಿಯ ಮನೆಗಳಲ್ಲಿಯೂ ನಡೆಯುತ್ತಿವೆ. ಸ್ಥಳಾವಕಾಶ ಕೂಡ ಮಕ್ಕಳ ಸಂಖ್ಯಾ ಬಲಕ್ಕೆ ತಕ್ಕನಾಗಿಲ್ಲ. ಕೆಲವು ಕಡೆ ಸಮರ್ಪಕ ಶೌಚಾಲಯಗಳಿಲ್ಲ, ಶೌಚಾಲಯಗಳಿದ್ದರೆ ನೀರಿನ ವ್ಯವಸ್ಥೆಯಿಲ್ಲ. ಶುದ್ಧ ಕುಡಿಯುವ ನೀರಿಲ್ಲದ ಅಂಗನವಾಡಿಗಳಿವೆ.

ಪ್ರತಿವರ್ಷವೂ ಆಟಿಕೆಗಳ ಪೂರೈಕೆಯಾಗುತ್ತಿದೆಯಾದರೂ ಕಲಿಕಾ ಪೂರಕ, ವೈವಿಧ್ಯಮಯ ಆಟಿಕೆಗಳ ಕೊರತೆಯಿದೆ. ಶಾಲಾಪೂರ್ವ ಶಿಕ್ಷಣದ ಅಸಲಿ ಬಂಡವಾಳವೇ ಆಟಿಕೆ, ಆಟದಿಂದ ಕಲಿಕೆ!

ಇನ್ನು ಅಂಗನವಾಡಿಯ ಒಳನೋಟ ಹೇಗಿರಬಹುದು? ಸರಾಸರಿ 25- 30 ಮಕ್ಕಳ ಪಾಲನೆಯನ್ನು ಒಬ್ಬ ಶಿಕ್ಷಕಿ ಮತ್ತು ಸಹಾಯಕಿಯು ದಿನದ 6 ಗಂಟೆಗಳ ಕಾಲ ಮಾಡಬೇಕು. ಶಿಕ್ಷಕಿಗೆ ಮಕ್ಕಳ ಹಾಜರಾತಿಯಿಂದ ಆರಂಭವಾಗಿ ಅನೇಕ ಮಾಹಿತಿಗಳ ದಾಖಲಾತಿಯ ಕೆಲಸವಿದೆ. ಅಂಗನವಾಡಿ ವ್ಯಾಪ್ತಿಯಲ್ಲಿನ ಗರ್ಭಿಣಿಯರು, ಬಾಣಂತಿಯರ ಯೋಗಕ್ಷೇಮದಲ್ಲೂ ಕೈ ಜೋಡಿಸುವ ಕೆಲಸ ಕೂಡ ಇವರದ್ದೇ. ಇಬ್ಬರು ಸಿಬ್ಬಂದಿಯಲ್ಲಿ ಯಾರೊಬ್ಬರು ರಜೆ ಹಾಕಿದರೂ ಇನ್ನೊಬ್ಬರಿಗೆ ಹೊರೆ. ಆಯಾ ಪ್ರದೇಶದ ಜನನ–ಮರಣ ದಾಖಲೆ, ಮತದಾರರ ಪಟ್ಟಿ ತಪಾಸಣೆ, ಇವೆಲ್ಲವುಗಳ ದಾಖಲಾತಿ ಕೆಲಸವನ್ನೂ ಅಂಗನವಾಡಿ ಕಾರ್ಯಕರ್ತೆಯರಿಗೆ ವಹಿಸಲಾಗಿದೆ.

ಈ ಪರಿಸ್ಥಿತಿಯಲ್ಲಿ ಒಬ್ಬ ಶಿಕ್ಷಕಿಯು ಎಷ್ಟು ಮಕ್ಕಳನ್ನು ನೋಡಿಕೊಳ್ಳಬಹುದು? ಪ್ರತಿಯೊಂದು ಮಗುವಿನ ಸ್ವಭಾವವನ್ನು ಅರ್ಥಮಾಡಿಕೊಂಡು, ತಿದ್ದಿ, ಅದರ ವರ್ತನೆಗಳಿಗೆ ಹೊಸರೂಪ ಕೊಡುವ ಸಾಧ್ಯತೆಯಿದೆಯೇ? ಅಂಗನವಾಡಿಗಳು ಮಕ್ಕಳ ಅಭಿವೃದ್ಧಿಗಾಗಿ ಮೀಸಲಾಗಿರುವಾಗ, ಕಾರ್ಯಕರ್ತೆಯರಿಗೆ ಇದರ ಹೊರತಾದ ಕೆಲಸ ಕೊಡುವುದು ಎಷ್ಟು ಸಮಂಜಸ?

ಇಲ್ಲಿ ಕಾರ್ಯಕರ್ತೆಯರು ಕಾಯಂ ಸರ್ಕಾರಿ ನೌಕರರಿಗೆ ಸರಿಸಮಾನವಾಗಿ ಕೆಲಸ ಮಾಡುತ್ತಿದ್ದಾರೆ. ಹೀಗಿರುವಾಗ ಸರ್ಕಾರಿ ನೌಕರರಿಗೆ ಸಿಗುವ ಸವಲತ್ತುಗಳಿಗೆ ಅವರು ಅರ್ಹರಲ್ಲವೇ? ತಾತ್ಕಾಲಿಕ ಕೆಲಸ, ಸರ್ಕಾರಿ ನೌಕರರಲ್ಲ, ಸಾಮಾಜಿಕ ಕಾರ್ಯಕರ್ತೆಯರೆಂಬ ಧೋರಣೆ. ಇಲ್ಲಿ ಹೆಚ್ಚಿನ ಕಾರ್ಯಕರ್ತೆಯರು ಮಹಿಳೆಯರೇ ಆಗಿದ್ದಾರೆ. ಇವರಿಗೆ ಕೊಡುವುದು ಸಂಭಾವನೆ, ವೇತನವಲ್ಲ. ನಮ್ಮ ಸಮಾಜದಲ್ಲಿ ಹಾಸುಹೊಕ್ಕಾಗಿರುವ ಲಿಂಗ ತಾರತಮ್ಯಕ್ಕೆ ಇದಕ್ಕಿಂತ ಬೇರೆ ನಿದರ್ಶನ ಬೇಕೆ? ಸಕಾಲಕ್ಕೆ ಸಂಭಾವನೆ ನೀಡುವಂತೆ ಮತ್ತು ಅದರ ಹೆಚ್ಚಳಕ್ಕಾಗಿ ಕಾರ್ಯಕರ್ತೆಯರು ಪದೇ ಪದೇ ಮುಷ್ಕರ ಹೂಡುವುದು ಇಂಥ ಕಾರಣಗಳಿಗಾಗಿಯೇ.

ಈ ಕಾರ್ಯಕರ್ತೆಯರು ಕೂಡ ಗ್ರಾಚ್ಯುಯಿಟಿಗೆ ಅರ್ಹರು ಎಂದು ಸುಪ್ರೀಂ ಕೋರ್ಟ್ ಇತ್ತೀಚೆಗೆ ಹೇಳಿರುವುದು ಸ್ವಾಗತಾರ್ಹ. ಸಿಬ್ಬಂದಿಯ ಸಂಖ್ಯೆಯನ್ನು ಹೆಚ್ಚಿಸಬೇಕಾಗಿದೆ. ಹೊಸ ಸವಾಲುಗಳನ್ನು ಎದುರಿಸಲು ಅಂಗನವಾಡಿ ಕಾರ್ಯಕರ್ತೆಯರಿಗೆ ಕಾಲಕಾಲಕ್ಕೆ ತಕ್ಕ ತರಬೇತಿ ಕೊಟ್ಟು, ಅವರ ಕಾರ್ಯಕ್ಷಮತೆಯನ್ನು ವೃದ್ಧಿಸಬೇಕಾಗಿದೆ.

21ನೇ ಶತಮಾನದಲ್ಲಿ ಸಮಾಜ ಸುಸ್ಥಿರವಾಗಲು ಶಾಲಾಪೂರ್ವ ಶಿಕ್ಷಣ ಅತ್ಯಂತ ಮುಖ್ಯವಾದುದು. ಈ ದಿಸೆಯಲ್ಲಿ ಸರ್ಕಾರದ ಧೋರಣೆಯಲ್ಲಿ ಬದಲಾವಣೆಯಾದರೆ ಮಾತ್ರ ಮಕ್ಕಳ ಭವಿಷ್ಯ ಉಜ್ವಲವಾದೀತು. ಇಲ್ಲದಿದ್ದರೆ ಘನೋದ್ದೇಶಗಳು ಘೋಷಣೆಗಳಾಗಿಯೇ ಉಳಿಯುತ್ತವೆ.

ವಾಚಕರ ವಾಣಿ

ಆ್ಯಸಿಡ್ ಸಂತ್ರಸ್ತೆಯರಿಗೆ ನೆರವು: ಮಾದರಿ ನಡೆ

ಆ್ಯಸಿಡ್ ದಾಳಿಯ ಸಂತ್ರಸ್ತೆಯರಿಗೆ ನಿವೇಶನ, ಮನೆ ಮತ್ತು ಸ್ವಯಂ ಉದ್ಯೋಗಕ್ಕೆ ಆರ್ಥಿಕ ನೆರವು ಘೋಷಿಸಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನಡೆ ಅಭಿನಂದನಾರ್ಹ. ಆ್ಯಸಿಡ್ ದಾಳಿಗೊಳಗಾದ ಮಹಿಳೆಯರು ಅನುಭವಿಸುವ ನೋವು, ಅವರ ಪೋಷಕರ ಸಂಕಟ, ಹೆತ್ತ ಮಗಳನ್ನು ಅಂತಹ ಸ್ಥಿತಿಯಲ್ಲಿ ನೋಡಬೇಕಾದ ದುಃಖವನ್ನು ಅವರಷ್ಟೇ ಬಲ್ಲರು. ಈ ಮಹಿಳೆಯರಿಗೆ ಆಸರೆಯಾಗುವ ಘೋಷಣೆಯ ಮೂಲಕ ಅವರ ಬದುಕಿಗೆ ಆಶಾಕಿರಣ ನೀಡಲು ಮುಂದಾಗಿರುವುದು ಮಾದರಿ ನಡೆ.

ಆರ್.ಟಿ.ವೆಂಕಟೇಶ್ ಬಾಬು, ತುಮಕೂರು

'ದಂಡಿಸುವ' ಕ್ಷಣ ಬೇಗ ಬರಲಿ!

ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಭಾರತೀಯ ಕ್ರಿಕೆಟ್‌ನ ಎರಡು ಸ್ತಂಭಗಳು. ಐದಾರು ವರ್ಷಗಳಿಂದ ಇಡೀ ವಿಶ್ವವೇ ಭಾರತ ತಂಡವನ್ನು ಬೆರಗುಗಣ್ಣಿನಿಂದ ನೋಡುತ್ತಿದ್ದ ಕಾಲ. ಇವರಿಬ್ಬರೂ ಬ್ಯಾಟಿಂಗ್‌ಗೆ ಇಳಿದರೆಂದರೆ ರನ್ ಮಳೆ ಸುರಿಯುತ್ತಿತ್ತು. ಅಷ್ಟರಮಟ್ಟಿಗೆ ಎದುರಾಳಿ ಬೌಲರ್‌ಗಳಿಗೆ ಭಯ ಹುಟ್ಟಿಸಿದ್ದರು. ರನ್ ಮಷೀನ್, ಕಿಂಗ್ ಕೊಹ್ಲಿ ಎಂಬಂಥ ಅನೇಕ ಬಿರುದಾಂಕಿತಗಳನ್ನು ಪಡೆದಿದ್ದ ಕೊಹ್ಲಿ ಹಿಂದೆಂದೂ ಕಾಣದಷ್ಟು ವೈಫಲ್ಯ ಅನುಭವಿಸಿದ್ದಾರೆ. ಒಂದೇ ಐಪಿಎಲ್‌ನಲ್ಲಿ ನಾಲ್ಕು ಶತಕ, ಏಳು ಅರ್ಧಶತಕಗಳನ್ನು ಗಳಿಸಿದ್ದ ಅವರು ಈ ಬಾರಿ ಒಂದೇ ಅರ್ಧ ಶತಕಕ್ಕೆ ತೃಪ್ತಿಪಟ್ಟುಕೊಳ್ಳಬೇಕಾಗಿರುವುದು ನೋವಿನ ಸಂಗತಿ. ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿಯೂ ಅವರ ಬ್ಯಾಟಿಂಗ್ ಸಪ್ಪೆಯಾಗಿದೆ.

ರೋಹಿತ್ ಶರ್ಮಾ ವಿಶ್ವ ದಾಖಲೆಯ ಸರದಾರ. ಏಕದಿನ ಮಾದರಿಯಲ್ಲಿ ಮೂರು ದ್ವಿಶತಕ ಸಿಡಿಸಿದ ಏಕೈಕ ಬ್ಯಾಟ್ಸ್‌ಮನ್. ಇವರು ಕೂಡ ತಂಡದೊಂದಿಗೆ ತಾವೂ ವೈಫಲ್ಯ ಅನುಭವಿಸುತ್ತಿದ್ದಾರೆ. ಇವರಿಬ್ಬರ ಈ ಕಳಪೆ ಫಾರ್ಮ್ ಮುಂಬರುವ ಟಿ20 ವಿಶ್ವಕಪ್ ಆಯ್ಕೆ ಸಮಿತಿಗೆ ದೊಡ್ಡ ತಲೆನೋವಾಗಿ ಪರಿಣಮಿಸಿದೆ. ಇದಕ್ಕೆಲ್ಲಾ ಕಾರಣ ಅವರ ಬಿಡುವಿಲ್ಲದ ವೇಳಾಪಟ್ಟಿ. ಕ್ರಿಕೆಟ್ ವರ್ಷವಿಡೀ ನಡೆಯುವ ಹಬ್ಬ. ಇವರಿಬ್ಬರೂ ಪ್ರಮುಖ ಆಟಗಾರರಾಗಿರುವುದರಿಂದ ಪ್ರತೀ ಪಂದ್ಯಕ್ಕೂ ಇವರ ಲಭ್ಯತೆ ಅನಿವಾರ್ಯವಾಗಿರುತ್ತದೆ. ವಿಶ್ರಾಂತಿ ಇಲ್ಲದಿದ್ದಾಗ ಈ ರೀತಿಯ ಪ್ರದರ್ಶನ ಸಹಜವೇ. ಆದ್ದರಿಂದ ಒಂದು ತಿಂಗಳ ಮಟ್ಟಿಗೆ ಈ ಇಬ್ಬರಿಗೂ ವಿಶ್ರಾಂತಿ ನೀಡುವುದು ಒಳ್ಳೆಯದು. ಈ ಎಲ್ಲಾ ಕೆಟ್ಟದಿನಗಳಿಂದ ಇಬ್ಬರೂ ಬ್ಯಾಟ್ಸ್‌ಮನ್‌ಗಳು ಹೊರಬಂದು ಹೊಸ ಹುಮ್ಮಸ್ಸಿನೊಂದಿಗೆ ಬೌಲರ್‌ಗಳನ್ನು 'ದಂಡಿಸುವ' ಕ್ಷಣ ಬೇಗ ಬರುವಂತಾಗಲಿ.

ಮಣಿಕಂಠ ಪಾ. ಹಿರೇಮಠ, ಚವಡಾಪೂರ

ಎಣ್ಣೆಕಾಳು ಬೆಳೆಗೆ ಬೇಕು ಪ್ರೋತ್ಸಾಹ

ರಷ್ಯಾ- ಉಕ್ರೇನ್ ಯುದ್ಧ ಮತ್ತು ಇಂಡೊನೇಷ್ಯಾ ರಫ್ತು ನಿಷೇಧವು ಭಾರತದ ಮಾರುಕಟ್ಟೆ ಮೇಲೆ ನೇರವಾದ ಪರಿಣಾಮ ಬೀರಿವೆ. ಇದರಿಂದ ಬೆಲೆ ಏರಿಕೆಯಾಗಿ, ಹಣದುಬ್ಬರ ಹೆಚ್ಚಾಗಿ ಜನಸಾಮಾನ್ಯರ ಹೊಟ್ಟೆಯ ಮೇಲೆ ಬರೆ ಹಾಕಿದಂತಾಗಿದೆ. ತಾಳೆ ಮತ್ತು ಶೇಂಗಾ ಎಣ್ಣೆಯ ಬೆಲೆ ಏರಿಕೆಯಿಂದ ಜನಸಾಮಾನ್ಯರ ಮೇಲೆ ಹೊರೆ ಬಿದ್ದಿದೆ.

ನೀರಾವರಿ ಭೂಮಿ ಹೊಂದಿರುವ ರೈತರಿಗೆ ಹೆಚ್ಚಿನ ಪ್ರಮಾಣದಲ್ಲಿ ಎಣ್ಣೆಕಾಳು ಬೆಳೆಯಲು ಸರ್ಕಾರವು ಸೂರ್ಯಕಾಂತಿ, ಸೋಯಾಬೀನ್, ಶೇಂಗಾ ಬೆಳೆಗಳಿಗೆ ಬೆಂಬಲ ಬೆಲೆ ಘೋಷಿಸಬೇಕು ಹಾಗೂ ಸಹಾಯಧನ ನೀಡಬೇಕು. ಜೊತೆಗೆ ಈ ಬೆಳೆಗಳ ಉತ್ಪನ್ನಕ್ಕೆ ಸೂಕ್ತವಾದ ಮಾರುಕಟ್ಟೆ ಒದಗಿಸಿ ರೈತರನ್ನು ಪ್ರೋತ್ಸಾಹಿಸುವ ಕೆಲಸವನ್ನು ಜರೂರಾಗಿ ಮಾಡಬೇಕು.

ಸಂತೋಷಕುಮಾರ ಎಸ್.ಪಿ., ಕಲಬುರಗಿ

ಹಿಮ್ಮುಖ ಚಲನೆಯತ್ತ ಜನರ ಜೀವನ

ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಜನರ ಜೀವನ ಹಿಮ್ಮುಖವಾಗಿ ಚಲಿಸಲು ಪ್ರಾರಂಭವಾಗಿದೆ. ಅನೇಕ ಮನೆಗಳಲ್ಲಿ ಅಡುಗೆಗಾಗಿ ಮೊದಲು ಉತ್ತಮ ಗುಣಮಟ್ಟದ ಎಣ್ಣೆ ಬಳಸುತ್ತಿದ್ದವರು ಈಗ ವಿಧಿಯಿಲ್ಲದೆ ಗುಣಮಟ್ಟದಲ್ಲಿ ರಾಜಿ ಮಾಡಿಕೊಳ್ಳುವಂತಾಗಿದೆ. ಗ್ಯಾಸ್ ಒಲೆಗಳ ಬದಲಾಗಿ ಸೌದೆ ಒಲೆಗಳಿಗೆ ಮೊರೆ ಹೋಗುತ್ತಿದ್ದಾರೆ. ಕಡಿಮೆ ದರದ ಎಣ್ಣೆ ಮತ್ತು ಸೌದೆ ಬಳಕೆಯು ಪರಿಸರ ಮಾಲಿನ್ಯ, ಪರಿಸರ ನಾಶದ ಜೊತೆಗೆ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಅಪಾಯ ಇರುತ್ತದೆ. ದುಬಾರಿಯಾಗುತ್ತಿರುವ ಅಗತ್ಯ ವಸ್ತುಗಳ ಬೆಲೆ ನಿಯಂತ್ರಣಕ್ಕೆ ಕ್ರಮ ವಹಿಸದಿದ್ದರೆ ಮುಂದಿನ ದಿನಗಳಲ್ಲಿ ಅಪಾಯ ಕಟ್ಟಿಟ್ಟ ಬುತ್ತಿ.

ವಡ್ನಾಳ್ ರಮೇಶ, ಚನ್ನಗಿರಿ

ಗ್ರಾಹಕರ ಪಾಲ್ಗೊಳ್ಳುವಿಕೆ: ನಿರ್ಬಂಧ ಇದೆಯೇ?

ವಕೀಲರಿಲ್ಲದೆ ಗ್ರಾಹಕರೇ ನೇರವಾಗಿ ತಮ್ಮ ಅಹವಾಲುಗಳನ್ನು ಹೇಳಿ ನ್ಯಾಯ ಪಡೆಯಬಹುದಾದ ಉತ್ತಮ ವ್ಯವಸ್ಥೆ ಗ್ರಾಹಕರ ವೇದಿಕೆಗಳಲ್ಲಿದೆ. ಆದರೆ ಈಗ ಆ ಅಪರೂಪದ ಅವಕಾಶವನ್ನು ಗ್ರಾಹಕರಿಂದ ಕಿತ್ತುಕೊಳ್ಳಲಾಗಿದೆಯೇ ಎನ್ನುವ ಪ್ರಶ್ನೆ ಉದ್ಭವಿಸಿದೆ. ಅದಕ್ಕೆ ನಾನು ಎದುರಿಸಿದ ಇತ್ತೀಚಿನ ಒಂದು ಗೊಂದಲ ಕಾರಣ.

ಕಳೆದ ಕೆಲವು ತಿಂಗಳುಗಳಿಂದ ವಿಜಯಪುರ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಯಲ್ಲಿ ನಾನು ಅರ್ಜಿ ಸಲ್ಲಿಸಿ, ಸ್ವತಃ ಹಾಜರಾಗಿ ನನ್ನ ಅಹವಾಲುಗಳನ್ನು ಹೇಳಿಕೊಳ್ಳುತ್ತಿದ್ದೇನೆ. ಕೆಲವು ದಿನಗಳ ಹಿಂದೆ ವೇದಿಕೆಯ ಕಲಾಪದಲ್ಲಿ ಭಾಗವಹಿಸಿದಾಗ, ವೇದಿಕೆಯ ಅಧ್ಯಕ್ಷರು, 'ಇನ್ನು ಮುಂದೆ ಗ್ರಾಹಕರು ನೇರವಾಗಿ ವೇದಿಕೆಯ ಕಲಾಪದಲ್ಲಿ ಭಾಗವಹಿಸುವಂತಿಲ್ಲ. ಅವರು ವಕೀಲರ ಮೂಲಕವೇ ಬರಬೇಕು' ಎಂದು ಹೇಳಿದರು. ಜೊತೆಗೆ 'ಇದನ್ನು ನಾನು ಹೇಳುತ್ತಿಲ್ಲ, ಕಾನೂನೇ ಹಾಗೆ ಹೇಳುತ್ತದೆ' ಎಂದರು. ಆ ಕುರಿತು ನಾನು ಹಲವು ವಕೀಲರು ಹಾಗೂ ಗ್ರಾಹಕರ ಸಹಾಯವಾಣಿಯನ್ನು ಸಂಪರ್ಕಿಸಿದೆ. ಎಲ್ಲಿಂದಲೂ ನಿಶ್ಚಿತವಾದ ಉತ್ತರ ದೊರೆಯಲಿಲ್ಲ. ಹಾಗೇನಿಲ್ಲ ಎಂದು ಕೆಲವರೆಂದರೆ, ನ್ಯಾಯಾಧೀಶರು ಹೇಳಿದ್ದಾರೆಂದರೆ ಇದ್ದರೂ ಇರಬಹುದು ಎಂದರು ಇನ್ನು ಕೆಲವರು. ಗ್ರಾಹಕರ ನೇರ ಪಾಲ್ಗೊಳ್ಳುವಿಕೆಯನ್ನು ನಿರ್ಬಂಧಿಸುವಂಥ ಕಾನೂನೇನಾದರೂ ಜಾರಿಯಾಗಿದ್ದರೆ, ಅದು ನಿಜಕ್ಕೂ ದುರದೃಷ್ಟಕರ.

ಸುಭಾಸ ಯಾದವಾಡ, ವಿಜಯಪುರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಗೋಧಿ ಕೊರತೆಯ ಭೀತಿ ರಫ್ತಿಗೆ ಕಡಿವಾಣ

ಪ್ರಜಾವಾಣಿ ವಾರ್ತೆ

ಜಗತ್ತಿನಲ್ಲಿಯೇ ಅತಿ ಹೆಚ್ಚು ಗೋಧಿ ಬೆಳೆಯುವ ಎರಡನೇ ದೇಶ ಎನಿಸಿಕೊಂಡಿರುವ ಭಾರತವು ಗೋಧಿ ರಫ್ತನ್ನು ನಿಷೇಧಿಸಿದೆ. ಜಾಗತಿಕ ಮಟ್ಟದಲ್ಲಿ ಆಹಾರ ಬಿಕ್ಕಟ್ಟು ತಲೆದೋರಿರುವ ಸಂದರ್ಭದಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ. ಉಕ್ರೇನ್ ಮೇಲೆ ರಷ್ಯಾ ನಡೆಸಿದ ಆಕ್ರಮಣ ಮತ್ತು ಈಗಲೂ ನಡೆಯುತ್ತಿರುವ ಯುದ್ಧದಿಂದಾಗಿ ಜಾಗತಿಕ ಮಟ್ಟದಲ್ಲಿ ಆಹಾರ ಬಿಕ್ಕಟ್ಟು ಸೃಷ್ಟಿಯಾಗಿದೆ. ಈ ಯುದ್ಧದಿಂದಾಗಿ 4.7 ಕೋಟಿ ಜನರು ಹಸಿವಿನ ಹೊಡೆತಕ್ಕೆ ಒಳಗಾಗಬಹುದು ಎಂದು ವಿಶ್ವಸಂಸ್ಥೆಯ ವಿಶ್ವ ಆಹಾರ ಕಾರ್ಯಕ್ರಮವು ಹೇಳಿದೆ. ಭಾರತದಿಂದ ಗೋಧಿ ರಫ್ತು ನಿಷೇಧವು ಅಂತರರಾಷ್ಟ್ರೀಯ ಮಟ್ಟದಲ್ಲಿ ಸಮಸ್ಯೆ ಇನ್ನಷ್ಟು ಬಿಗಡಾಯಿಸಲು ಕಾರಣವಾಗಬಹುದು.

'ಜಾಗತಿಕ ಮಟ್ಟದಲ್ಲಿ ಗೋಧಿಯ ಕೊರತೆ ಆಗಿರುವ ಸಂದರ್ಭದಲ್ಲಿ ಭಾರತದ ರೈತರು ಜಗತ್ತಿನ ಜನರಿಗೆ ಆಹಾರ ಒದಗಿಸಲು ಮುಂದಾಗಿದ್ದಾರೆ. ಮಾನವ ಕುಲಕ್ಕೆ ಬಿಕ್ಕಟ್ಟು ಎದುರಾದಾಗಲೆಲ್ಲ ಭಾರತವು ಪರಿಹಾರವನ್ನು ಕೊಟ್ಟಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಇದೇ 9ರಂದು ಜರ್ಮನಿಯಲ್ಲಿ ಭಾರತ ಮೂಲದ ಜನರ ಜೊತೆಗಿನ ಸಂವಾದದಲ್ಲಿ ಹೇಳಿದ್ದರು. ಆದರೆ, ಅದಾಗಿ ಕೆಲವೇ ದಿನಗಳಲ್ಲಿ ಪರಿಸ್ಥಿತಿ ಸಂಪೂರ್ಣವಾಗಿ ಭಿನ್ನವಾಗಿದೆ. ಗೋಧಿ ರಫ್ತಿನ ಮೇಲೆ ನಿಷೇಧ ಹೇರಲಾಗಿದೆ. ಆಹಾರದ ತೀವ್ರ ಕೊರತೆ ಇರುವ ದೇಶಗಳ ಸರ್ಕಾರಗಳು ಸಂಪರ್ಕಿಸಿದರೆ ಗೋಧಿ ಪೂರೈಸುವ ಕುರಿತು ಯೋಚಿಸಲಾಗುವುದು ಎಂದು ಸರ್ಕಾರ ಹೇಳಿದೆ. ಗೋಧಿ ಪೂರೈಕೆಗಾಗಿ ಈಜಿಪ್ಟ್ ದೇಶವು ಭಾರತವನ್ನು ಸಂಪರ್ಕಿಸಿದೆ.

ತೀವ್ರ ಕೊರತೆ: ಕಳೆದ ಕೆಲವು ವರ್ಷಗಳಲ್ಲಿ, ಭಾರತದ ಗೋಧಿ ಇಳುವರಿ ದಾಖಲೆ ಮಟ್ಟದಲ್ಲಿ ಸತತವಾಗಿ ಏರಿಕೆಯಾಗಿದೆ. ಅದೇ ರೀತಿ ರಫ್ತು ಕೂಡ ಹೆಚ್ಚಳವಾಗಿದೆ. 2020-21ನೇ ಸಾಲಿನಲ್ಲಿ, ಅತಿ ಹೆಚ್ಚು ಗೋಧಿ ರಫ್ತು ಮಾಡುವ ನಾಲ್ಕನೇ ದೇಶ ಎನಿಸಿಕೊಂಡಿತ್ತು. ಕಳೆದ ಮೂರು ವರ್ಷಗಳಲ್ಲಿ ಪ್ರತಿ ವರ್ಷವೂ ಗೋಧಿ ಇಳುವರಿ 10 ಕೋಟಿ ಟನ್ ದಾಟಿದೆ. ಫೆಬ್ರುವರಿ-ಮಾರ್ಚ್ ಅವಧಿಯಲ್ಲಿಯೇ ಅತಿ ಹೆಚ್ಚು ಗೋಧಿ ಸಂಗ್ರಹ ಆಗುತ್ತದೆ. ಆದರೆ, ಈ ಬಾರಿ ಇದೇ ಅವಧಿಯಲ್ಲಿ ಬೀಸಿದ ತೀವ್ರವಾದ ಬಿಸಿ ಗಾಳಿಯು ಇಳುವರಿ ಕುಗ್ಗುವಂತೆ ಮಾಡಿದೆ. ಇದು ದೇಶದೊಳಗಿನ ಆಹಾರ ಭದ್ರತೆಗೆ ಸವಾಲಾಗಿ ಪರಿಣಮಿಸಬಹುದು ಎಂಬ ಕಳವಳ ಸರ್ಕಾರಕ್ಕೆ ಮೂಡಿದೆ.

ಜಗತ್ತಿಗೆ ಅತಿ ಹೆಚ್ಚು ಗೋಧಿ ರಫ್ತು ಮಾಡುವ ದೇಶಗಳಲ್ಲಿ ರಷ್ಯಾ ಕೂಡ ಒಂದು. 2020-21ರಲ್ಲಿ ಜಗತ್ತಿನ ಗೋಧಿ ಪೂರೈಕೆಯಲ್ಲಿ ಭಾರತ ಮತ್ತು ರಷ್ಯಾದ ಪಾಲು ಶೇ 22ಕ್ಕೂ ಹೆಚ್ಚು. ಅತಿ ಹೆಚ್ಚು ಗೋಧಿ ಪೂರೈಸುವ ಐದನೇ ದೇಶ ಉಕ್ರೇನ್. ಯುದ್ಧದ ಕಾರಣದಿಂದಾಗಿ ರಷ್ಯಾದ ಮೇಲೆ ಅಮೆರಿಕ ಮತ್ತು ಯುರೋಪ್‌ನ ದೇಶಗಳು ವಿವಿಧ ನಿರ್ಬಂಧಗಳನ್ನು ಹೇರಿವೆ. ಉಕ್ರೇನ್, ಯುದ್ಧದಿಂದಾಗಿ ನಲುಗಿ ಹೋಗಿದೆ. ಹಾಗಾಗಿ ಈ ಎರಡೂ ದೇಶಗಳಿಂದ ಫೆಬ್ರುವರಿ 24ರಿಂದ ಗೋಧಿ ರಫ್ತು ಆಗಿಯೇ ಇಲ್ಲ.

ರಷ್ಯಾ ಮತ್ತು ಉಕ್ರೇನ್‌ನಿಂದ ಮಧ್ಯ ಪ್ರಾಚ್ಯ ಮತ್ತು ಏಷ್ಯಾದ ರಾಷ್ಟ್ರಗಳಿಗೆ ಗೋಧಿ ರಫ್ತು ಆಗುತ್ತಿತ್ತು. ಈಗ ಈ ಎಲ್ಲ ದೇಶಗಳು ಪರ್ಯಾಯ ಮಾರ್ಗಗಳನ್ನು ಹುಡುಕಿಕೊಳ್ಳಬೇಕಿದೆ. ಗೋಧಿಯ ಸಂಗ್ರಹ ಇದ್ದರೂ ಸಾಗಾಟದ ಸಮಸ್ಯೆಯಿಂದಾಗಿ ಈಗಿನ ಬಿಕ್ಕಟ್ಟು ಎದುರಾಗಿದೆ.

ರೈತರ ಲಾಭಕ್ಕೆ ಹೊಡೆತ: ಪೂರೈಕೆ ಕೊರತೆಯಿಂದಾಗಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಗೋಧಿಯ ದರದಲ್ಲಿ ಶೇ 40ರವರೆಗೆ ಏರಿಕೆಯಾಗಿದೆ. ಇದರ ಪ್ರಯೋಜನ ಪಡೆಯುವ ಉದ್ದೇಶದಿಂದಲೇ ಭಾರತದಿಂದ ರಫ್ತು ಹೆಚ್ಚಳವಾಗಿದೆ. ಆದರೆ, ರಫ್ತು ನಿಷೇಧ ನಿರ್ಧಾರದಿಂದಾಗಿ ರೈತರಿಗೆ ದರ ಏರಿಕೆಯ ಪ್ರಯೋಜನ ದೊರೆಯದಂತಾಗಿದೆ ಎಂದು ಕಾಂಗ್ರೆಸ್ ಮತ್ತು ಇತರ ವಿರೋಧ ಪಕ್ಷಗಳು ಆರೋಪಿಸಿವೆ. ಗೋಧಿ ರಫ್ತು ನಿಷೇಧ ತೆರವಿಗೆ ಒತ್ತಾಯಿಸಿವೆ.

ರಫ್ತು ಏರಿಕೆಯ ಬರೆ

ದೇಶದಿಂದ ರಫ್ತಾಗುವ ಗೋಧಿಯ ಪ್ರಮಾಣ ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಿದೆ. ಆದರೆ 2021-22ನೇ ಆರ್ಥಿಕ ವರ್ಷದಲ್ಲಿ ಗೋಧಿಯ ರಫ್ತು ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ. ಇದು ಸಹ ದೇಶೀಯ ಮಾರುಕಟ್ಟೆಯಲ್ಲಿ ಗೋಧಿಯ ಲಭ್ಯತೆಯ ಮೇಲೆ ಪರಿಣಾಮ ಬೀರಿದೆ ಎಂದು ಅಂದಾಜಿಸಲಾಗಿದೆ.

2020-21ನೇ ಸಾಲಿನಲ್ಲಿ ಭಾರತವು 21 ಲಕ್ಷ ಟನ್‌ಗಳಷ್ಟು ಗೋಧಿಯನ್ನು ರಫ್ತು ಮಾಡಿತ್ತು. ಆದರೆ 2021-22ನೇ ಸಾಲಿನಲ್ಲಿ ಒಟ್ಟು 71 ಲಕ್ಷ ಟನ್‌ಗಳಷ್ಟು ಗೋಧಿಯನ್ನು ರಫ್ತು ಮಾಡಲಾಗಿದೆ. 2022-23ನೇ ಸಾಲಿನಲ್ಲಿ 1.4 ಕೋಟಿ ಟನ್‌ಗಳಷ್ಟು ಗೋಧಿಯನ್ನು ರಫ್ತು ಮಾಡುವ ಗುರಿ ಹಾಕಿಕೊಳ್ಳಲಾಗಿತ್ತು. ಜತೆಗೆ 2.1 ಕೋಟಿ ಟನ್‌ಗಳಷ್ಟು ಗೋಧಿ ರಫ್ತಾಗುವ ನಿರೀಕ್ಷೆ ಇತ್ತು.

ರಫ್ತಿಗೆ ಹೆಚ್ಚಿನ ಒತ್ತು ನೀಡಿದ ಕಾರಣ, ದೇಶೀಯ ಮಾರುಕಟ್ಟೆಯಲ್ಲಿ ಲಭ್ಯವಿರುವ ಗೋಧಿಯ ಪ್ರಮಾಣ ಕಡಿಮೆಯಾಗಿದೆ. ಇದರಿಂದ ಬೆಲೆ ಏರಿಕೆಯಾಗಿದೆ. ಹಿಂದಿನ ಮೂರು ತಿಂಗಳಲ್ಲಿ ದೇಶದ ಚಿಲ್ಲರೆ ಮಾರುಕಟ್ಟೆಯಲ್ಲಿ ಗೋಧಿ ಮತ್ತು ಗೋಧಿ ಹಿಟ್ಟಿನ ಬೆಲೆ ಶೇ 19-20ರಷ್ಟು ಏರಿಕೆಯಾಗಿದೆ.

ರಫ್ತಾದ ಗೋಧಿಯ ಪ್ರಮಾಣ (ಲಕ್ಷ ಟನ್‌ಗಳಲ್ಲಿ)

ವರ್ಷ	ಪ್ರಮಾಣ
2018-19	22
2019-20	21.91
2020-21	21.49
2021-22	71

ಕೃಷಿಕರ ಸಂಘಟನೆ ಭಾರತ ಕಿಸಾನ್ ಸಮಾಜ ಕೂಡ ರಫ್ತು ನಿಷೇಧವನ್ನು ವಿರೋಧಿಸಿದೆ. ಇದು ರೈತರ ಮೇಲೆ ಪರೋಕ್ಷ ತೆರಿಗೆ ಹೇರಿದಂತೆ ಎಂದು ಹೇಳಿದೆ. ಅಂತರ ರಾಷ್ಟ್ರೀಯ ಮಟ್ಟದಲ್ಲಿನ ದರ ಏರಿಕೆಯ ಲಾಭವನ್ನು ರೈತರು ಪಡೆಯಲು ಸಾಧ್ಯವಾಗುವುದಿಲ್ಲ. ಹಾಗೆಯೇ, ವಿಶ್ವಾಸಾರ್ಹ ವ್ಯಾಪಾರ ಪಾಲುದಾರ ಅಲ್ಲ ಎಂಬ ಹಣೆಪಟ್ಟಿಗೂ ಭಾರತ ಪಾತ್ರವಾಗಬಹುದು ಎಂದು ಭಾರತ ಕಿಸಾನ್ ಸಮಾಜ ಹೇಳಿದೆ.

ಅಂತರರಾಷ್ಟ್ರೀಯ ಒತ್ತಡ: ರಫ್ತು ನಿಷೇಧದ ನಿರ್ಧಾರಕ್ಕೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರಿ ಟೀಕೆ ವ್ಯಕ್ತವಾಗಿದೆ. ಭಾರತದ ಈ ನಿರ್ಧಾರದಿಂದಾಗಿ ಬಿಕ್ಕಟ್ಟು ಇನ್ನಷ್ಟು ಉಲ್ಬಣಗೊಳ್ಳಲಿದೆ, ವಸ್ತುಗಳ ದರದಲ್ಲಿ ಇನ್ನಷ್ಟು ಏರಿಕೆ ಆಗಲಿದೆ ಎಂದು ಜಿ-7 ಗುಂಪಿನ ಕೃಷಿ ಸಚಿವರ ಸಭೆಯಲ್ಲಿ ಹೇಳಲಾಗಿದೆ. 'ಪ್ರತಿಯೊಬ್ಬರೂ ರಫ್ತು ನಿರ್ಬಂಧ ಹೇರಿದರೆ ಅಥವಾ ಮಾರುಕಟ್ಟೆ ಮುಚ್ಚಿದರೆ ಬಿಕ್ಕಟ್ಟು ಮತ್ತಷ್ಟು ಉಲ್ಬಣಗೊಳ್ಳುತ್ತದೆ' ಎಂದು ಜರ್ಮನಿಯ ಕೃಷಿ ಸಚಿವ ಜೆಮ್ ಆಸ್ಡೆಮಿರ್ ಹೇಳಿದ್ದಾರೆ.

ಧಾನ್ಯ ರಫ್ತು ಮಾಡುವ ಇತರ ದೇಶಗಳು ಕೂಡ ಭಾರತವನ್ನು ಅನುಸರಿಸಿದರೆ ಜಾಗತಿಕ ಮಟ್ಟದಲ್ಲಿ ಭಾರಿ ಸಮಸ್ಯೆ ಆಗಬಹುದು ಎಂಬ ಕಳವಳವನ್ನು ತಜ್ಞರು ವ್ಯಕ್ತಪಡಿಸಿದ್ದಾರೆ. 'ಅಕ್ಕಿ ರಫ್ತು ಮಾಡುವವರು ಹೀಗೆ ಮಾಡಿದರೆ ಜಗತ್ತಿನ ಆಹಾರ ಭದ್ರತೆಯು ಶೋಚನೀಯ ಸ್ಥಿತಿಗೆ ತಲುಪಬಹುದು' ಎಂದು ಇಂಧನ ಮತ್ತು ಸರಕುಗಳ ತಜ್ಞ ಜೇವಿಯರ್ ಬ್ಲಾಸ್ ಟ್ವೀಟ್ ಮಾಡಿದ್ದಾರೆ.

ಈ ಬಾರಿ ಹೆಚ್ಚುವರಿ ಇಳುವರಿ ಅಸಾಧ್ಯ

ಈ ಹಿಂದಿನ ವರ್ಷಗಳಲ್ಲಿ ದೇಶೀಯ ಬಳಕೆಗೆ ಇದ್ದ ಬೇಡಿಕೆಗಿಂತಲೂ ಹೆಚ್ಚಿನ ಪ್ರಮಾಣದ ಗೋಧಿ ಉತ್ಪಾದನೆಯಾಗುತ್ತಿದ್ದ ಕಾರಣ, ಹೆಚ್ಚುವರಿ ಉತ್ಪಾದನೆಯನ್ನು ರಫ್ತು ಮಾಡಲಾಗುತ್ತಿತ್ತು. ರಫ್ತಿನ ಮೇಲೆ ಯಾವುದೇ ನಿರ್ಬಂಧವಿರಲಿಲ್ಲ. ಆದರೆ ಈ ಸಾಲಿನ ಬೆಳೆ ವರ್ಷದಲ್ಲಿ (2021ರ ಜುಲೈನಿಂದ 2022ರ ಜೂನ್ ಅಂತ್ಯದವರೆಗೆ) ಈ ಹಿಂದಿನ ಅಂದಾಜಿಗಿಂತ ಕಡಿಮೆ ಪ್ರಮಾಣದ ಇಳುವರಿ ದೊರೆಯಲಿದೆ ಎಂದು ಅಂದಾಜನ್ನು ಪರಿಷ್ಕರಿಸಲಾಗಿದೆ. ಇದರಿಂದ ದೇಶೀಯ ಬಳಕೆಗೆ ಅಗತ್ಯವಿರುವಷ್ಟು ಗೋಧಿಯನ್ನು ಪೂರೈಸುವುದೂ ಕಷ್ಟವಾಗಲಿದೆ.

ಈ ಹಿಂದಿನ ಬೆಳೆ ವರ್ಷದಲ್ಲಿ ದೇಶದಾದ್ಯಂತ 10.90 ಕೋಟಿ ಟನ್‌ಗಳಷ್ಟು ಗೋಧಿಯನ್ನು ಉತ್ಪಾದನೆ ಮಾಡಲಾಗಿತ್ತು. ದೇಶದ ಬಳಕೆಗೆ ಅಗತ್ಯವಿದ್ದ ಗೋಧಿ 10.3 ಕೋಟಿ ಟನ್‌ಗಳಷ್ಟು. ಈಗಿನ ಬೆಳೆ ವರ್ಷದಲ್ಲಿ ದೇಶೀಯ ಬಳಕೆಗೆ 10.42 ಕೋಟಿ ಟನ್‌ಗಳಷ್ಟು ಗೋಧಿಯ ಅವಶ್ಯಕತೆ ಇದೆ. ಈ ಮೊದಲು ಈ ಬೆಳೆ ವರ್ಷದಲ್ಲಿ 11.1 ಕೋಟಿ ಟನ್ ಇಳುವರಿಯನ್ನು ನಿರೀಕ್ಷಿಸಲಾಗಿತ್ತು. ಈಗ ಬಿಸಿಗಾಳಿ ಮತ್ತು ತಾಪಮಾನ ಹೆಚ್ಚಳದ ಕಾರಣ ಇಳುವರಿ ನಿರೀಕ್ಷೆಯನ್ನು 10.5 ಕೋಟಿ ಟನ್‌ಗಳಿಗೆ ಇಳಿಕೆ ಮಾಡಲಾಗಿದೆ. ಇದು ದೇಶೀಯ ಬಳಕೆಗೆ ಅಗತ್ಯವಿರುವಷ್ಟು ಬೇಡಿಕೆಯನ್ನು ಪೂರೈಸಲು ಸಾಧ್ಯವಾಗುತ್ತದೆ. ಆದರೆ, ಈ ಬೆಳೆ ವರ್ಷದಲ್ಲಿ ಈಗಾಗಲೇ 66.61 ಲಕ್ಷ ಟನ್‌ಗಳಷ್ಟು ಗೋಧಿಯನ್ನು ರಫ್ತು ಮಾಡಲಾಗಿದೆ. ಇನ್ನೂ 31.7 ಲಕ್ಷ ಟನ್‌ಗಳಷ್ಟು ಗೋಧಿಯನ್ನು ರಫ್ತು ಮಾಡಲೇಬೇಕಿದೆ. ಈ ಲೆಕ್ಕಾಚಾರದಲ್ಲಿ, ಈ ಬೆಳೆ ವರ್ಷದಲ್ಲಿ 98.31 ಲಕ್ಷ ಟನ್‌ಗಳಷ್ಟು ಗೋಧಿ ರಫ್ತಾಗಲಿದೆ.

ಈ ಬೆಳೆ ವರ್ಷದಲ್ಲಿ ದೇಶಕ್ಕೆ 10.42 ಕೋಟಿ ಟನ್‌ಗಳಷ್ಟು ಗೋಧಿ ಅವಶ್ಯಕತೆ ಇದ್ದು, ದೇಶದಲ್ಲಿ 10.50 ಕೋಟಿ ಟನ್‌ಗಳಷ್ಟು ಗೋಧಿ ಉತ್ಪಾದನೆಯಾಗಲಿದೆ. ಆದರೆ ಇದರಲ್ಲಿ ಅಂದಾಜು 1 ಕೋಟಿ ಟನ್‌ಗಳಷ್ಟು ಗೋಧಿ ರಫ್ತಾಗಲಿರುವ ಕಾರಣ, ದೇಶೀಯ ಬಳಕೆಗೆ 90 ಲಕ್ಷ ಟನ್‌ಗಳಷ್ಟು ಗೋಧಿ ಕೊರತೆಯಾಗುವ ಭೀತಿ ಎದುರಾಗಿದೆ. ಭಾರತವು ಗೋಧಿಯನ್ನು ಆಮದು ಮಾಡಿಕೊಳ್ಳುತ್ತದೆಯಾದರೂ, ಅದು ದೇಶೀಯ ಬೇಡಿಕೆ ಮತ್ತು ಉತ್ಪಾದನೆಗೆ ಹೋಲಿಸಿದರೆ ತೀರಾ ಕಡಿಮೆ.

ದೇಶದ ಪಡಿತರ ವ್ಯವಸ್ಥೆ ಅಡಿ ವಿತರಿಸಲು ವಾರ್ಷಿಕ 2.5 ಕೋಟಿ ಟನ್‌ಗಳಷ್ಟು ಗೋಧಿಯ ಅವಶ್ಯಕತೆ ಇದೆ. 2021-22ನೇ ಆರ್ಥಿಕ ವರ್ಷದಲ್ಲಿ ಸರ್ಕಾರವು 4.33 ಕೋಟಿ ಟನ್‌ಗಳಷ್ಟು ಗೋಧಿಯನ್ನು ಈ ಉದ್ದೇಶಕ್ಕಾಗಿ ಖರೀದಿಸಿತ್ತು. 2022-23ನೇ ಸಾಲಿನಲ್ಲಿ 4.40 ಕೋಟಿ ಟನ್‌ಗಳಷ್ಟು ಗೋಧಿ ಖರೀದಿಸುವ ಗುರಿ ಹಾಕಿಕೊಂಡಿತ್ತು. ಆದರೆ ಈಗ ಇಳುವರಿ ಅಂದಾಜನ್ನು ಇಳಿಕೆ ಮಾಡಿರುವ ಕಾರಣ, ಗೋಧಿ ಖರೀದಿ ಗುರಿಯನ್ನೂ 1.85 ಕೋಟಿ ಟನ್‌ಗಳಿಗೆ ಕಡಿತ ಮಾಡಿದೆ. ಪಡಿತರ ವ್ಯವಸ್ಥೆ ಅಡಿ ಗೋಧಿಯ ಬದಲಿಗೆ ಅಕ್ಕಿಯನ್ನು ಹೆಚ್ಚಿನ ಪ್ರಮಾಣದಲ್ಲಿ ವಿತರಿಸಲು ಚಿಂತನೆ ನಡೆಸಲಾಗುತ್ತಿದೆ.

ಆಧಾರ: ವಾಣಿಜ್ಯ ಸಚಿವಾಲಯದ ಆಮದು-ರಫ್ತು ದತ್ತಾಂಶ ಬ್ಯಾಂಕ್ ಮಾಸಿಕ ವರದಿಗಳು, ಪಿಟಿಐ, ರಾಯಿಟರ್ಸ್

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 121

ಶಿವನ ವರಿಸಿದ ದಾಕ್ಷಾಯಿಣಿ

ರುದ್ರಸಂಹಿತೆಯಲ್ಲಿ ಎರಡನೇ ಖಂಡವಾದ ಸತೀಖಂಡವು ದಕ್ಷಯಜ್ಞನ ಮಗಳಾದ ದಾಕ್ಷಾಯಿಣಿ ಅಥವಾ ಸತೀಕಥೆಯಾಗಿದೆ. ಇದರ ಮೊದಲ ಅಧ್ಯಾಯವನ್ನು ವ್ಯಾಸರ ಪರಮ ಶಿಷ್ಯ ಸೂತಮುನಿಯು ಬ್ರಹ್ಮ ತನ್ನ ಮಗ ನಾರದನಿಗೆ ಹೇಳಿದ ಕಥೆಯಂತೆ ಪ್ರಯಾಗದ ಋಷಿಗಳಿಗೆ ತಿಳಿಸುತ್ತಾನೆ.

ನಾರದಮುನಿಯು 'ಓ ಬ್ರಹ್ಮದೇವನೇ ! ಶಿವಪಾರ್ವತಿಯರ ಅದ್ಭುತವಾದ ಅನೇಕ ಕಥೆಗಳನ್ನು ನನಗೆ ಹೇಳಿರುವೆ. ನಿನ್ನ ಮುಖಕಮಲದಿಂದ ಹೊರಡುವ ಉತ್ತಮವಾದ ಶಿವಕಥೆಯನ್ನು ಕೇಳಿದಷ್ಟೂ ನನಗೆ ತೃಪ್ತಿಯೇ ಆಗುತ್ತಿಲ್ಲ. ಆದುದರಿಂದ ಈಗ ಮತ್ತಷ್ಟು ಶಿವಕಥೆಯನ್ನು ಹೇಳು. ಶಿವನ ಪೂರ್ಣಾರ್ಣಾಂಶಸ್ವರೂಪನೆಂದು ಯಾವ ರುದ್ರನನ್ನು ವರ್ಣಿಸಿರುವೆಯೋ, ಆ ಕೈಲಾಸವಾಸಿ ರುದ್ರನು ಸದಾ ಕಾಮಿನೀ ಮುಂತಾದ ವಿಷಯಗಳಲ್ಲಿ ಅಭಿಲಾಷೆಯಿಲ್ಲದ ಯೋಗಿ. ವಿಕಾರವಿಲ್ಲದ ಶುದ್ಧ ಮನಸ್ಸಿನ ಮಹಾ ವಿರಕ್ತ. ಯಾವಾಗಲೂ ಆತ್ಮಾರಾಮನಾಗಿ ವಿಹರಿಸುತ್ತಲಿರುವನು ಎಂದು ಹೇಳಿರುವೆ.'

'ವಿಷ್ಣುವಿನ ಪ್ರಾರ್ಥನೆಯಂತೆ ರುದ್ರದೇವ ಮಂಗಳರೂಪಳು, ತನ್ನನ್ನೇ ಕುರಿತು ತಪಸ್ಸನ್ನಾಚರಿಸುತ್ತಿರುವಳೂ ಆದಂತಹ ಸತೀದೇವಿಯನ್ನು ಪ್ರೀತಿಯಿಂದ ಮದುವೆಯಾಗಿ ಗ್ರಹಸ್ಥಾಶ್ರಮವನ್ನು ಸ್ವೀಕರಿಸಿದ ಎಂಬುದನ್ನು ಕೇಳಿದ್ದೇನೆ. ಮೊದಲಿಗೆ ರುದ್ರನು ದಕ್ಷಪುತ್ರಿಯಾದ ಸತಿಯನ್ನು ವರಿಸಿದ. ಸತಿ ಯಜ್ಞಕುಂಡಕ್ಕೆ ಹಾರಿ ಪ್ರಾಣತ್ಯಾಗ ಮಾಡಿದಳು. ನಂತರ ಹಿಮವಂತನ ಮಗಳು ಪಾರ್ವತಿಯಾಗಿ ಜನಿಸಿ, ಘೋರ ತಪಸ್ಸು ಮಾಡಿ ಶಿವನನ್ನು ಮದುವೆಯಾದಳು ಎಂಬುದನ್ನು ಸಹ ಕೇಳಿರುವೆ. ಆದರೆ ಸತಿಯು ಒಂದೇ ಶರೀರದಿಂದ ದಕ್ಷ ಮತ್ತು ಹಿಮವಂತರಿಬ್ಬರಿಗೂ ಹೇಗೆ ಮಗಳಾಗಿ ಜನಿಸಿದಳು? ಸತೀದೇವಿಯು ಪಾರ್ವತಿಯಾಗಿ ಜನಿಸಿ ಮತ್ತೆ ಶಿವನನ್ನು ಹೇಗೆ ಮದುವೆಯಾದಳು? ಇದೆಲ್ಲವನ್ನೂ ನನಗೆ ಹೇಳು' ಎಂದು ಕೋರುತ್ತಾನೆ.

'ಎಲೈ ವತ್ಸ! ಶುಭವಾದ ಶಿವಪಾರ್ವತಿಯರ ಕಥೆಯನ್ನು ಹೇಳುವೆನು ಕೇಳು. ಅದನ್ನು ಕೇಳಿದರೆ ಜನ್ಮ ಸಾರ್ಥಕವಾಗುವುದು'ಚಎಂದು ಶಿವನ ಕಥೆಯನ್ನು ಬ್ರಹ್ಮ ತನ್ನ ಮಗ ನಾರದನಿಗೆ ಹೇಳತೊಡಗುತ್ತಾನೆ.

ಬಹಳ ಹಿಂದೆ ನನ್ನ ಪುತ್ರಿಯಾದ ಸಂಧ್ಯಾದೇವಿಯನ್ನು ನೋಡಿ ಮನ್ಮಥಬಾಣಗಳಿಂದ ಪೀಡಿತನಾಗಿ ಚಿತ್ತಚಾಂಚಲ್ಯ ಹೊಂದಿದೆ. ಇದರಿಂದ ನನ್ನ ಸುತರಾದ ದಕ್ಷಬ್ರಹ್ಮ ಮೊದಲಾದವರೂ ಮನೋವಿಕಾರವುಳ್ಳವರಾದರು. ವೇದವಾದಿಯಾದ ನಾನು ತಿಳಿವಳಿಕೆಯಿಲ್ಲದೆ ಸ್ವಪುತ್ರಿಯಲ್ಲಿ ಮೋಹ ಗೊಳ್ಳುವಂತಹ ಅಕಾರ್ಯವನ್ನು ಮಾಡಿದೆ. ಆಗ ಜಗತ್ಪ್ರಭುವಾದ ರುದ್ರ ಬಂದು, ನನ್ನನ್ನೂ ಮತ್ತು ನನ್ನ ದಕ್ಷಾದಿ ಪುತ್ರರಿಗೆ ಬುದ್ಧಿ ಹೇಳಿ, ಧರ್ಮವನ್ನುಪದೇಶಿಸಿ ತನ್ನ ಸ್ಥಾನಕ್ಕೆ ತೆರಳಿದ.

ಆಗ ನಾನು ಶಿವಮಾಯೆಯಿಂದ ಮೋಹಿತನಾಗಿದ್ದರಿಂದ ಕೋಪಗೊಂಡೆ. ಶಿವನನ್ನು ಹೇಗಾದರೂ ಮೋಹಗೊಳಿಸಬೇಕೆಂದು ನನ್ನ ಪುತ್ರರಾದ ದಕ್ಷ ಮತ್ತಿತರರೊಡನೆ ಆಲೋಚಿಸಿ, ಅನೇಕ ಉಪಾಯಗಳನ್ನು ಮಾಡಿದೆ. ನನ್ನ ಪುತ್ರರಾದ ದಕ್ಷಾದಿಗಳೂ ಪರಮೇಶ್ವರನಾದ ರುದ್ರನನ್ನು ಮೋಹಗೊಳಿಸಲು ಅನೇಕ ಉಪಾಯಗಳನ್ನು ಮಾಡಿದರು. ಆದರೆ ಆ ಉಪಾಯಗಳೆಲ್ಲವೂ ನಿಷ್ಫಲವಾದವು. ಆಗ ನಾನು ಹರಿಯನ್ನು ಸ್ಮರಿಸಿದಾಗ ಶಿವಭಕ್ತನೂ ಬುದ್ಧಿಶಾಲಿಯೂ ಆದ ಹರಿ ಬಂದು, ನನಗೂ ಮತ್ತು ನನ್ನ ಪುತ್ರರಾದ ದಕ್ಷಾದಿಗಳಿಗೂ ಬುದ್ಧಿ ಹೇಳಿದ. ಶಿವನ ವಿರುದ್ಧ ಷಡ್ಯಂತರ ಮಾಡಬಾರದೆಂದು ಚೆನ್ನಾಗಿ ಉಪದೇಶ ಮಾಡಿದ. ಹರಿಯು ಶಿವಸ್ವರೂಪವನ್ನು ನನಗೆ ಮನದಟ್ಟಾಗುವಂತೆ ಉಪದೇಶಿಸಿದ್ದರಿಂದ ಶಿವನ ಮೇಲೆ ನನಗಿದ್ದ ದ್ವೇಷ ಹೋಯಿತು. ಆದರೆ ಶಿವನನ್ನು ಮೋಹ ಗೊಳಿಸುವ ಹಠ ಮಾತ್ರ ಹೋಗಲಿಲ್ಲ. ಇದಕ್ಕಾಗಿ ನಾನು ಆದಿಶಕ್ತಿಯನ್ನು ಪೂಜಿಸಿ ಒಲಿಸಿಕೊಂಡೆ. ಆ ದೇವಿಯ ಅನುಗ್ರಹದಿಂದ ನನ್ನ ಪುತ್ರನಾದ ದಕ್ಷಬ್ರಹ್ಮನ ಪತ್ನಿಯಾದ ವೀರಿಣೀದೇವಿಯಲ್ಲಿ ಶಿವನನ್ನು ಮೋಹಗೊಳಿಸುವ ಆದಿಶಕ್ತಿ ಜನಿಸುವಂತೆ ಮಾಡಿದೆ.

ಆದಿಶಕ್ತಿ ದೇವಿ ತನ್ನ ಭಕ್ತರ ಹಿತ ಕಾಪಾಡಲು ದಕ್ಷಪುತ್ರಿಯಾಗಿ ಜನಿಸಿದಳು. ಮಹಾ ವಿರಾಗಿಯಾದ ಶಿವನನ್ನು ಒಲಿಸಿಕೊಳ್ಳಲು ಅಸಾಧ್ಯವಾದ ತಪಸ್ಸನ್ನಾಚರಿಸಿ, ರುದ್ರನ ಪತ್ನಿಯಾದಳು. ಜಗತ್ಪ್ರಭುವಾದ ರುದ್ರ ತನ್ನ ಪತ್ನಿ ಸತೀದೇವಿಯೊಂದಿಗೆ ಕೈಲಾಸಗಿರಿಯಲ್ಲಿ ವಾಸಿಸುತ್ತಾ, ಲೀಲಾವಿನೋದಗಳಿಂದ ವಿಹರಿಸುತ್ತಲಿದ್ದ. ಸತೀದೇವಿಯೊಡನೆ ಶಿವ ನಿರ್ವಿಕಾರವಾಗಿ ಸುಖಭೋಗ ವನ್ನನುಭವಿಸುತ್ತಾ, ಅನೇಕ ವರ್ಷಗಳ ಕಾಲ ಸುಖವಾಗಿ ಕಳೆದ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ದೆಹಲಿಯ ಶಾಹೀನ್‌ಬಾಗ್ ಸುತ್ತ ಬಾಂಗ್ಲಾದೇಶಿ ನುಸುಳುಕೋರರು ಆಶ್ರಯ ಪಡೆದಿದ್ದಾರೆ ಎಂದು ಆರೋಪಿಸುತ್ತಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಅಶ್ವಿನಿ ಉಪಾಧ್ಯಾಯ ಸೇರಿ ಬಿಜೆಪಿಯ ಹಲವು ಮುಖಂಡರು ಈ ವಿಡಿಯೊವನ್ನು ಹಂಚಿಕೊಂಡಿದ್ದಾರೆ. ದೆಹಲಿ ಸರ್ಕಾರದ ಕುರಿತು ಜನಾಭಿಪ್ರಾಯ ಸಂಗ್ರಹಿಸುತ್ತಿದ್ದ ವರದಿಗಾರರೊಬ್ಬರು ಮಸೀದಿಯಿಂದ ಹೊರಬರುತ್ತಿದ್ದ ಕೆಲವರ ಸಂದರ್ಶನ ಮಾಡಿದ್ದಾರೆ. ಸಂದರ್ಶನದಲ್ಲಿ ಮಾತನಾಡಿದ ಕೆಲವರು ತಮಗೆ ಹಿಂದಿ ಬರುವುದಿಲ್ಲ, ತಾವು ಬಾಂಗ್ಲಾದೇಶೀಯರು ಎಂದು ಹೇಳಿದ್ದಾರೆ. ಬಾಂಗ್ಲಾದೇಶದ ರೋಹಿಂಗ್ಯಾ ಸಮುದಾಯದ ನುಸುಳುಕೋರರು ದೆಹಲಿಯಲ್ಲಿ ನಿರ್ಭೀತಿಯಿಂದ ಓಡಾಡಿಕೊಂಡಿದ್ದಾರೆ ಎಂಬ ವಿವರಣೆಯನ್ನು ಈ ವಿಡಿಯೊ ಜೊತೆ ನೀಡಲಾಗಿದೆ.

ಈ ವಿಡಿಯೊವನ್ನು ತಪ್ಪಾಗಿ ಬಿಂಬಿಸಲಾಗಿದೆ. ಈ ವಿಡಿಯೊದಲ್ಲಿ ಇರುವವರು ಬಾಂಗ್ಲಾದೇಶಿಯರು ಹೌದು. ಆದರೆ ಅವರು ನುಸುಳುಕೋರರಲ್ಲ ಎಂದು ಆಲ್ಟ್ ನ್ಯೂಸ್ ವೇದಿಕೆ ವರದಿ ಮಾಡಿದೆ. ವಿಡಿಯೊದಲ್ಲಿ ಇರುವ ಬಾಂಗ್ಲಾದೇಶೀಯರನ್ನು ಖುದ್ದಾಗಿ ಭೇಟಿ ಮಾಡಿ, ಅವರು ದೆಹಲಿಗೆ ಬಂದಿರುವ ಉದ್ದೇಶದ ಕುರಿತು ಮಾಹಿತಿ ಪಡೆದಿರುವುದಾಗಿ ಆಲ್ಟ್‌ನ್ಯೂಸ್ ಹೇಳಿದೆ. ಬಾಂಗ್ಲಾದೇಶದಲ್ಲಿ ಮಾಲ್ಟಾ ದೇಶಕ್ಕೆ ವೀಸಾ ನೀಡುವ ವ್ಯವಸ್ಥೆ ಇಲ್ಲ. ಹಾಗಾಗಿ ಕೆಲ ಬಾಂಗ್ಲಾದೇಶೀಯರು ಮಾಲ್ಟಾ ವೀಸಾ ಪಡೆಯಲು ದೆಹಲಿಗೆ ಬಂದಿದ್ದಾರೆ. ಶಾಹೀನ್‌ಬಾಗ್‌ನ ಹೋಟೆಲ್ ಒಂದರಲ್ಲಿ ಉಳಿದುಕೊಂಡಿದ್ದಾರೆ. ತಾವು ರೋಹಿಂಗ್ಯಾ ಸಮುದಾಯದವರಲ್ಲ ಎಂದು ಖುದ್ದು ಅವರೇ ತಿಳಿಸಿದ್ದಾರೆ ಎಂದು ಆಲ್ಟ್ ನ್ಯೂಸ್ ವರದಿಯಲ್ಲಿ ವಿವರಿಸಲಾಗಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಬ್ರಹ್ಮಾನುಭವದ ಪಾಠಶಾಲೆ

ಋಣವ ತೀರಿಸಬೇಕು, ಋಣವ ತೀರಿಸಬೇಕು |
ಋಣವ ತೀರಿಸುತ ಜಗದಾದಿಸತ್ತ್ವವನು ||
ಜನದಿ ಕಾಣುತ್ತದರೊಳ್ ಒಂದುಗೂಡಲುಬೇಕು |
ಮನೆಯೊಳಗೆ ಮಠ ನಿನಗೆ – ಮಂಕುತಿಮ್ಮ
|| 628 ||

ಪದ-ಅರ್ಥ: ಜಗದಾದಿಸತ್ತ್ವವನು = ಜಗದ + ಆದಿ- + ಸತ್ವವನು, ಕಾಣುತ್ತದರೊಳ್ = ಕಾಣುತ್ತ + ಅದರೊಳ್(ಅದರೊಳು).

ವಾಚ್ಯಾರ್ಥ: ಬದುಕಿನಲ್ಲಿ ಬಂದ ಮೇಲೆ ಋಣವ ತೀರಿಸಬೇಕು. ಋಣವ ತೀರಿಸುತ್ತಲೇ, ನನ್ನಲ್ಲಿರುವ ಆದಿಸತ್ವವನ್ನು ಸಮಗ್ರ ಜನಪದದಲ್ಲಿ ಕಾಣಬೇಕು. ಎಲ್ಲರೊಡನೆ ಒಂದುಗೂಡಬೇಕು. ಮನೆಯೇ ಪಾಠಶಾಲೆ ನಿನಗೆ.

ವಿವರಣೆ: ಈ ಅಕ್ಷರಗಳನ್ನು ಓದುತ್ತಿದ್ದಂತೆ ನಮ್ಮ ಮೇಲೆ ಇರುವ ಋಣಭಾರದ ಕಲ್ಪನೆ ಬಂದೀತು. ನೀವು ಆರಾಮವಾಗಿ ಕುಳಿತ ಕುರ್ಚಿಯನ್ನು ಮೊದಲು ಯೋಜನೆ ಮಾಡಿದವನು, ನಂತರ ಬೇರೆ ಬೇರೆ ವಸ್ತುಗಳಿಂದ ಅದನ್ನು ಸಿದ್ಧಪಡಿಸಲು ಎಷ್ಟು ಜನ, ಎಷ್ಟು ಕಾಲ ಶ್ರಮಿಸಿದರೋ? ಅದರ ಫಲ ನಿಮಗೆ ದೊರೆತಿದೆ. ಅಲ್ಲಿ ಎಲ್ಲೋ ಶರಾವತಿಯಲ್ಲಿ ನೀರನ್ನು ಧುಮ್ಮಿಕ್ಕಿಸಿ ವಿದ್ಯುತ್ ಅನ್ನು ತಯಾರು ಮಾಡುತ್ತಿದ್ದಾರೆ. ಅದೆಷ್ಟು ವಿಜ್ಞಾನಿಗಳು ಅದನ್ನು ಸಾಧಿಸಲು ರಾತ್ರಿಗಳನ್ನು ಸವೆಸಿದರೋ? ಅಲ್ಲಿಂದ ನಿಮ್ಮ ಮನೆಯವರೆಗೆ ಹಬ್ಬದ ತಂತಿಗಳ ಜಾಲ ಅದೆಷ್ಟು ಜೀವನಗಳ ಶ್ರಮದ ಫಲ? ಮಳೆಯಾಗಲಿ, ಬಿಸಿಲಾಗಲಿ ಹಗಲು ರಾತ್ರಿ ಓಡಾಡುತ್ತ ನಿಮಗೆ ವಿದ್ಯುತ್ ಅನ್ನು ನಿರ್ವಿಘ್ನವಾಗಿ ತಲುಪಿಸುವ ಜವಾಬ್ದಾರಿ ಹೊತ್ತ ಜನ ಕಣ್ಣಮುಂದೆ ಬಂದಾರೆಯೇ? ಥಾಮಸ್ ಎಡಿಸನ್‌ನಿಂದ ಹಿಡಿದು ಅನೇಕ ತಂತ್ರಜ್ಞರು ದುಡಿದು ನಿಮ್ಮ ಮನೆ ಬೆಳಗುವಂತೆ ಮಾಡಿದ್ದಾರೆ. ನಿಮ್ಮ ವರ್ತಮಾನ ಪತ್ರಿಕೆ ರಾತ್ರೋರಾತ್ರಿ ಆದದ್ದೇ? ಮರದಿಂದ ಕಾಗದವನ್ನು ಮಾಡುವುದಕ್ಕೆ ಅದೆಷ್ಟು ವರ್ಷಗಳ ಪರಿಶ್ರಮ ಬೇಕಾಯಿತೋ? 1440ರಲ್ಲಿ ಜರ್ಮನಿಯ ಗುಟೆನ್‌ಬರ್ಗನಿಂದ ಹಿಡಿದು ಇಲ್ಲಿಯವರೆಗೆ ಅದೆಷ್ಟು ತಲೆಗಳು ಪ್ರಯತ್ನಿಸಿ ಇಂದಿನ ಮುದ್ರಣ ಯಂತ್ರಗಳನ್ನು ಕಂಡುಹಿಡಿದವೋ? ಎಷ್ಟು ಜನ ಪತ್ರಿಕೆಗೆ ಬರೆದು, ಅವುಗಳನ್ನು ಪರಿಷ್ಕರಿಸಿ, ಸಂಯೋಜಿಸಿ, ಮುದ್ರಿಸಿ, ವಾಹನಗಳ ಮೂಲಕ ಸಾಗಿಸಿ, ನಿಮ್ಮ ಮನೆಯನ್ನು ತಲುಪಿಸುವ ಕಾರ್ಯ ಮಾಡಿದರೋ? ನಾನು ಆರಾಮವಾಗಿ ಪತ್ರಿಕೆ ಓದುವಾಗ ಇಷ್ಟೆಲ್ಲ ಜನರ ಪ್ರಯತ್ನದ ಋಣ ನನ್ನ ಮೇಲಿದೆ. ನಾನು ಒಂದು ಕ್ಷಣ ಸಂತೋಷವಾಗಿದ್ದರೆ ಅದಕ್ಕೆ, ಹಿಂದೆ ನೂರಾರು ಜನರ ಋಣವಿದೆ ಎನ್ನುವುದನ್ನು ಮರೆಯಲಾಗದು. ಹೀಗೆ ನಮ್ಮ ಬದುಕಿನುದ್ದಕ್ಕೂ ಋಣಗಳ ಭಾರ ಹೆಚ್ಚಾಗುತ್ತಲೇ ಹೋಗುತ್ತದೆ. ಮನುಷ್ಯರಾಗಿ ಬಂದಂತಹ ನಾವು ಬದುಕಿರುವವರೆಗೆ ಸಾಧ್ಯವಾದಷ್ಟು ಈ ಋಣವನ್ನು ತೀರಿಸಬೇಕು. ಇಲ್ಲದೆ ಹೋದರೆ ಅದನ್ನು ತೀರಿಸಲು ಮತ್ತೆ ಜನ್ಮಗಳನ್ನು ಎತ್ತಿ ಬರಬೇಕಾಗುತ್ತದೆ ಎಂಬುದು ಪೂರ್ವಿಕರ ಕಲ್ಪನೆ.

ಇದರೊಂದಿಗೆ ಇನ್ನೊಂದು ಕಾರ್ಯವನ್ನು ಮಾಡಬೇಕು. ಜಗದ ಆದಿಸತ್ವ ನನ್ನಲ್ಲಿ ಇದೆ ಎನ್ನುವುದನ್ನು ಅರಿಯುವುದರ ಜೊತೆಗೆ ಅದೇ ಸತ್ವ ಎಲ್ಲ ಜೀವಗಳಲ್ಲೂ, ಜನರಲ್ಲೂ ಇದೆ ಎಂಬುದನ್ನು ಮನಗಾಣಬೇಕು. ಆಗ ಭಿನ್ನತೆ ಅಳಿದು, ನಾವೆಲ್ಲ ಒಂದೇ ಎಂಬ ಭಾವನೆ ಮೂಡುತ್ತದೆ. ಎಲ್ಲರಲ್ಲೂ ಒಂದಾಗಿ ಕೂಡಬೇಕು. ತನ್ನಲ್ಲಿ ಇರುವುದೇ ಎಲ್ಲರಲ್ಲೂ ಇದೆ ಎಂದಾಗ ಸರ್ವಾತ್ಮಭಾವವನ್ನು ಅನುಭವಿಸುತ್ತಾನೆ. ಈ ಕಗ್ಗ ಒಂದು ಸುಂದರ ಪಾಠವನ್ನು ಹೇಳುತ್ತದೆ. ಸರ್ವಾತ್ವಭಾವಕ್ಕಾಗಿ ನಾವು ಹೊರಗೆಲ್ಲೋ ಅಲೆಯಬೇಕಾಗಿಲ್ಲ. ಅವನ ಸಂಸಾರದಲ್ಲೇ ಎಲ್ಲವೂ ದೊರಕುತ್ತದೆ. ಅದಕ್ಕೆ ಮನೆಯೇ ಪಾಠಶಾಲೆ. ಇದೇ ಬ್ರಹ್ಮಾನುಭವದ ಪ್ರಯೋಗಶಾಲೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಸೋಮವಾರ ಮೇ 16, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು ತಿಥಿ: ವೈಶಾಖ ಶುಕ್ಲ ಪೂರ್ಣಿಮ ಗಂ. 09-44 **ನಕ್ಷತ್ರ:** ವಿಶಾಖಾ ಗಂ. 13-18 **ಯೋಗ:** ವರಿಯಾನ್ ಗಂ. 06-17, ಪರಿಘ ಗಂ. 26-31 **ಕರಣ:** ಬವ ಗಂ. 09-44, ವೃಷಭ ಮಾಸದ 01 ನೇ ದಿನ.
ರಾಹುಕಾಲ : ಬೆಳಿಗ್ಗೆ 07:30 – 09:00 ಸೂರ್ಯೋದಯ : 06-08 ಸೂರ್ಯಾಸ್ತ : 06-46
ಮುಸ್ಲಿಂ ದಿನಾಂಕ : 14 ಶವ್ವಾಲ್ ದಿನ ವಿಶೇಷ : ಸಂಪೂರ್ಣ ಚಂದ್ರಗ್ರಹಣ (ಭಾರತದಲ್ಲಿ ಗೋಚರಿಸುವುದಿಲ್ಲ), ವೈಶಾಖಿ ಪೂರ್ಣಿಮಾ, ಬುದ್ಧ ಪೂರ್ಣಿಮಾ
ಅದೃಷ್ಟ ಸಂಖ್ಯೆ : 3, 6

ಮೇಷ: ಆರ್ಥಿಕ ಲಾಭಕ್ಕಾಗಿ ಹೋರಾಟ ನಡೆಸಬೇಕಾಗುವ ಪರಿಸ್ಥಿತಿ. ಕಾರ್ಯ ಜಯಿಸುವ ಹಂಬಲದಲ್ಲಿ ಆರೋಗ್ಯ ಕಳೆದುಕೊಳ್ಳಬೇಡಿ. ಎತ್ತರದಲ್ಲಿ ಹತ್ತಿ ಕೆಲಸ ಮಾಡುವವರು, ಸಹಾಸಿ ಪ್ರವೃತ್ತಿಯವರು ಜಾಗ್ರತರಾಗಿರಿ.

ವೃಷಭ: ಜೀವನದಲ್ಲಿ ಕೆಲವು ವಿಚಾರಕ್ಕೆ ಆತಂಕ ಮೂಡಿ ಮನೋಧೈರ್ಯವನ್ನು ಕಟ್ಟಿ ಹಾಕುತ್ತದೆ. ಅಭಿವೃದ್ಧಿಯಲ್ಲಿ ಹಿನ್ನಡೆ. ಚಿನ್ನ ಬೆಳ್ಳಿ ವ್ಯಾಪಾರಸ್ಥರಿಗೆ ವ್ಯವಹಾರದಲ್ಲಿ ಅಧಿಕ ಲಾಭ ಇರಲಿದೆ. ಗುರು ಹಿರಿಯರ ಸಲಹೆ ಸ್ವೀಕರಿಸಿ.

ಮಿಥುನ: ನಿಮ್ಮ ನಿರ್ಧಾರ ಸರಿಯಾದುದೆಂದು ಇಂದು ಮನವರಿಕೆಯಾಗುವುದು. ಹವಾಮಾನ ಬದಲಾವಣೆಗಾಗಿ ಪ್ರವಾಸ ಸಾಧ್ಯತೆ. ಮನೆಯಲ್ಲಿ ದೈವಕಾರ್ಯ ಜರುಗಲಿದೆ. ತೆರೆಮರೆಯಲ್ಲಿ ನಡೆಸಿದ ಕೆಲಸಗಳಿಂದ ಹೆಚ್ಚಿನ ಅಧಿಕಾರ.

ಕರ್ಕಾಟಕ: ಹೊಸ ಜನರ ಸಂಪರ್ಕ ಉತ್ತಮ ಧನಲಾಭ ತರಲಿದೆ. ಚರ್ಮದ ವಸ್ತುಗಳ ತಯಾರಿ ಅಥವಾ ಮಾರಾಟದಿಂದ ಲಾಭ. ನಿಮ್ಮ ಸಹೋದ್ಯೋಗಿಗಳ ಮಾತಿನಂತೆ ನಡೆದುಕೊಳ್ಳುವುದು ಉತ್ತಮ. ಅಚ್ಚರಿಯ ಸುದ್ದಿ ಕೇಳಲಿರುವಿರಿ.

ಸಿಂಹ: ಗಣ್ಯ ವ್ಯಕ್ತಿಗಳಿಗೆ ಸಮಾಜದಲ್ಲಿ, ರಾಜಕೀಯ ಕ್ಷೇತ್ರದಲ್ಲಿ ಸ್ಥಾನಮಾನ, ಗೌರವ, ಪುರಸ್ಕಾರಗಳು ಲಭಿಸಲಿವೆ. ಇಂದು ಆರೋಗ್ಯ ಸುಧಾರಣೆ. ವ್ಯವಹಾರ ರಂಗದಲ್ಲಿ ಆತ್ಮೀಯರ ಸಲಹೆ ಸ್ವೀಕರಿಸದಿರುವುದರಿಂದ ನಷ್ಟ.

ಕನ್ಯಾ: ದೇವರ ಕೃಪೆ, ಹಿರಿಯರ ಆಶೀರ್ವಾದದಿಂದ ಎಲ್ಲಾ ಸಮಸ್ಯೆಗಳಿಗೂ ಸುಲಭ ಪರಿಹಾರ. ದಿನಾಂತ್ಯದಲ್ಲಿ ಆಭರಣ, ಕಲಾವಸ್ತುಗಳ ಖರೀದಿ. ನೂತನ ಸಂಸ್ಥೆಯೊಂದರಲ್ಲಿ ಉತ್ತಮ ಉದ್ಯೋಗ ಪಡೆದುಕೊಳ್ಳುವಿರಿ.

ತುಲಾ: ತೆರಿಗೆ ಅಧಿಕಾರಿಗಳಿಗೆ ಪ್ರಶಂಸೆ. ಖರ್ಚು-ವೆಚ್ಚ, ಕುಟುಂಬ ಸ್ಥಾನದಲ್ಲಿ ಮನಸ್ತಾಪಕ್ಕೆ ಕಾರಣವಾಗದಂತೆ ಜಾಗ್ರತೆ ವಹಿಸಿರಿ. ಸಹೋದರರ ಬಗ್ಗೆ ನಿಮ್ಮಲ್ಲಿರುವ ತಪ್ಪು ಕಲ್ಪನೆ ಹೋಗಲಾಡಿಸಿಕೊಳ್ಳುವ ಪ್ರಯತ್ನಮಾಡಿ.

ವೃಶ್ಚಿಕ: ಜೀವನದ ಸಮಸ್ಯೆ ಹಾಗೂ ದುಃಖಗಳು ಇರುವಿಕೆಯನ್ನು ತಿಳಿಸಲಿವೆ. ನಿಜ ಮಾರ್ಗದಿಂದ ಕಾರ್ಯಪ್ರವೃತ್ತರಾದಲ್ಲಿ ಹೆಚ್ಚಿನ ಅಭಿವೃದ್ಧಿ. ಉನ್ನತ ವ್ಯಾಸಂಗದವರಿಗೆ ನೇರ ಆಯ್ಕೆಗೊಳ್ಳುವ ಸಂಭವವಿದೆ.

ಧನು: ವೃತ್ತಿಯಲ್ಲಿ ಅನಾವಶ್ಯಕ ಕೋಪಕ್ಕೆ ಗುರಿಯಾಗುವುದನ್ನು ಸ್ನೇಹಿತರು ತಪ್ಪಿಸುವರು. ಯಾರ ನೆರವೂ ಇಲ್ಲದೆ ಎಲ್ಲಾ ಕಾರ್ಯಗಳನ್ನು ನಿರ್ವಹಿಸುವಿರಿ. ಗೃಹ ತಾಪತ್ರಯದಿಂದ ಮುಕ್ತರಾಗಿ ನಿಶ್ಚಿಂತತೆ ತೋರಿ ಬರುತ್ತದೆ.

ಮಕರ: ಅವಿವಾಹಿತರಿಗೆ ಕಂಕಣ ಯೋಗ. ಕೆಲಸ ಕಾರ್ಯಗಳಲ್ಲಿ ಅತಿ ಹೆಚ್ಚಿನ ಉತ್ಸಾಹ. ಒತ್ತಡಗಳಿಗೆ ಸಿಲುಕಬೇಡಿ. ಸಹೋದ್ಯೋಗಿಗಳಲ್ಲಿ ಪ್ರೀತಿಯಿಂದ ವರ್ತಿಸುವುದರಿಂದ ನಿಮ್ಮ ಕೆಲಸ ಸರಾಗ.

ಕುಂಭ: ಗೃಹ ನಿರ್ಮಾಣ ಕಾರ್ಯಗಳ ಚಿಂತನೆ ಕಾರ್ಯಗತ. ಆದಾಯವು ಸಾಕಷ್ಟು ಕೂಡಿ ಬರಲಿದೆ. ಬಟ್ಟೆ ಉದ್ಯಮದವರಿಗೆ ಇಂದು ಅಧಿಕ ಲಾಭ. ಗೃಹದಲ್ಲಿ ಶುಭ, ಮಂಗಳಕಾರ್ಯಗಳ ಚಟುವಟಿಕೆಗಳು ತೋರಿ ಬರುವವು.

ಮೀನ: ಬಹುದಿನಗಳ ನಿರೀಕ್ಷೆಯ ವಿಚಾರಗಳು ಕಾರ್ಯರೂಪಕ್ಕೆ ತರಲು ಪ್ರಯತ್ನಿಸಿದಲ್ಲಿ ಲಾಭ. ನವದಂಪತಿಗಳಿಗೆ ಸಂತಾನ ಫಲ. ಮಕ್ಕಳ ವಿದ್ಯಾಭ್ಯಾಸ ಒಳ್ಳೆಯ ಹಂತ ತಲುಪಲಿದೆ. ಕ್ರೀಡಾಪಟುಗಳಿಗೆ ಪ್ರೋತ್ಸಾಹ.

ಪದಬಂಧ 4959

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ನೀರಿನ ಅಲೆಗಳ ವಾದ್ಯ (5)
4.ಪೋಲಕ ಧರಿಸಿದವಳ ಕೆನ್ನೆ! (3)
5.ವಿದ್ಯೆಯೊಡನೆ ಇರಬೇಕಾದ ನಮ್ರತೆ (3)
9.ಗೋಡೆಯಲ್ಲಿ ಕೊರೆಯುವ ಕಿಂಡಿ (2)
10.ಮುಳ್ಳುಗಳ ನಡುವೆ ಬಿರಿದಿರುವ ಪುಷ್ಪ (3)
11.ಕಿಡಿ ಸಿಡಿದಾಗ ಉಲ್ಟಾ ಆಗಿರುವ ರಂಧ್ರ! (2)
12.ಕೆರೆ ಹತ್ತಿರದಲ್ಲಿ ಉಂಟಾದ ನವೆ! (3)
15.ತೀರದ ಬಳಿ ನಿರ್ಮಿಸಿರುವ ಗುಡಿಸಲು (3)
16.ಹಕ್ಕಿಗಳ ಗುಂಪು ಇಲ್ಲಿದೆ (5)

ಮೇಲಿಂದ ಕೆಳಕ್ಕೆ
1.ವ್ಯತ್ಯಾಸ ಈ ತರ ಬಂದಿದೆಯಲ್ಲಾ! (3)
2.ಗಂಜಲದ ಬಳಿಯಿರಿಸಿದ ನೀರು (2)
3.ಅಂಗವಿಕಲನು ತೋರಿಸಿರುವ ಗುಹೆ (2)
4.ಕಿವಿಯಿಂದ ಕಿವಿಗೆ ಹರಡುವ ಮಾತು (5)
6.ಈತ ನರಕಾಧಿತಿಯ ಆಳು (5)
7.ಭಾರವೇ ಇಲ್ಲದಿರುವುದು (3)
8.ಈ ರೀತಿ ಪ್ರತಿರೂಪವನ್ನು ತೋರಿಸು (3)
13.ತಪಸೀಲು ಮಾಡುವಾಗಿನ ತಪಸ್ಸು! (2)
14.ಸಂಗ ದೊರೆತಾಗಿನ ಘಟನೆ (3)
15.ಕುಟಿಲ ಬುದ್ಧಿಯವನ ವಂಶ (2)



4958ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸ್ಥಿರ 3.ಚರಕ
5.ಸಮರ 7.ರಸಭಂಗ
9.ಸಲಿಗೆ 10.ಸಮೀಪ
11.ರಣರಂಗ 13.ಚರಟ
15.ರಮಣ 16.ಋಜು

ಮೇಲಿಂದ ಕೆಳಕ್ಕೆ:
2.ರಭಸ 3.ಚಮ್ಮಾರ
4.ಕರ್ಪೂರ 6.ಮಜ್ಜಿಗೆ
8.ಗಣಪ 9.ಸದರ
10.ಸಮೀರ 12.ಗಹ್ವರ
13.ಚರಣ 14.ಟಗರು

ಸುಡೊಕು 5345

							5	
	6		4		9	8		7
5		8					6	
		6	5			7		9
7				6	1		4	
	5		8			3		6
			3			4		2
	9							
6		4		9	5	1		3

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5344 ಸುಡೊಕು

7	1	5	9	4	6	3	2	8
3	4	6	5	8	2	7	9	1
2	8	9	3	7	1	5	6	4
9	6	4	1	3	7	8	5	2
5	2	8	4	6	9	1	3	7
1	3	7	8	2	5	9	4	6
4	9	3	2	1	8	6	7	5
6	5	1	7	9	4	2	8	3
8	7	2	6	5	3	4	1	9

10 ಕಂಪನಿಗಳ ನಷ್ಟ ₹ 2.48 ಲಕ್ಷ ಕೋಟಿ

ನವದೆಹಲಿ (ಪಿಟಿಐ): ದೇಶದ ಷೇರುಪೇಟೆಯಲ್ಲಿ ನೋಂದಾಯಿತ ಪ್ರಮುಖ 10 ಕಂಪನಿಗಳು ಕಳೆದ ವಾರದ ವಹಿವಾಟಿನಲ್ಲಿ ₹ 2.48 ಲಕ್ಷ ಕೋಟಿ ನಷ್ಟ ಅನುಭವಿಸಿವೆ. ಇದರಲ್ಲಿ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ (ಆರ್‌ಐಎಲ್) ಕಂಪನಿಯ ನಷ್ಟವೇ ₹ 1.30 ಲಕ್ಷ ಕೋಟಿ ಇದೆ. ಇದರಿಂದ ಕಂಪನಿಯ ಒಟ್ಟಾರೆ ಬಂಡವಾಳ ಮೌಲ್ಯ ₹ 16.42 ಲಕ್ಷ ಕೋಟಿಗೆ ಇಳಿಕೆ ಆಗಿದೆ.

ಕಳೆದ ವಾರದ ವಹಿವಾಟಿನಲ್ಲಿ ಬಿಎಸ್‌ಇ ಸೆನ್ಸೆಕ್ಸ್ 2,041 ಅಂಶಗಳಷ್ಟು ಕುಸಿತ ಕಂಡಿದೆ.

ಎಸ್‌ಬಿಐ ಮಾರುಕಟ್ಟೆ ಮೌಲ್ಯದಲ್ಲಿ ₹ 35,073 ಕೋಟಿ ಕಡಿಮೆ ಆಗಿದ್ದು, ಒಟ್ಟಾರೆ ಮೌಲ್ಯವು ₹ 3.97 ಲಕ್ಷ ಕೋಟಿಗಳಿಗೆ ತಲುಪಿದೆ. ಐಸಿಐಸಿಐ ಬ್ಯಾಂಕ್ ಮಾರುಕಟ್ಟೆ ಮೌಲ್ಯದಲ್ಲಿ ₹ 29,279 ಕೋಟಿ, ಇನ್ಫೊಸಿಸ್ ಮಾರುಕಟ್ಟೆ ಮೌಲ್ಯದಲ್ಲಿ ₹ 16,869 ಕೋಟಿ ಕಡಿಮೆ ಆಗಿದೆ.

ದೇಶದ ಅತ್ಯಂತ ಮೌಲ್ಯಯುತ 10 ಕಂಪನಿಗಳ ಸಾಲಿನಲ್ಲಿ ರಿಲಯನ್ಸ್ ಇಂಡಸ್ಟ್ರೀಸ್ ಕಂಪನಿಯು ಮೊದಲ ಸ್ಥಾನದಲ್ಲಿದೆ.

ಟಾಟಾ ಕನ್ಸಲ್ಟೆನ್ಸಿ ಸರ್ವೀಸ್ (ಟಿಸಿಎಸ್) (₹ 12.48 ಲಕ್ಷ ಕೋಟಿ) ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್ (₹ 7.16 ಲಕ್ಷ ಕೋಟಿ) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನದಲ್ಲಿವೆ.

ಅದಾನಿ ತೆಕ್ಕೆಗೆ ಹೋಲ್ಸಿಮ್ ಇಂಡಿಯಾ

ನವದೆಹಲಿ (ಪಿಟಿಐ): ಅದಾನಿ ಸಮೂಹವು ಹೋಲ್ಸಿಮ್ ಲಿಮಿಟೆಡ್‌ನ ಭಾರತದ ವಹಿವಾಟನ್ನು ₹ 81,375 ಕೋಟಿಗೆ ಖರೀದಿಸುವ ಒಪ್ಪಂದಕ್ಕೆ ಬಂದಿರುವುದಾಗಿ ಭಾನುವಾರ ತಿಳಿಸಿದೆ. ಈ ಮೂಲಕ ಸಿಮೆಂಟ್ ತಯಾರಿಕಾ ವಲಯಕ್ಕೆ ಸಮೂಹವು ಪ್ರವೇಶಿಸಲಿದೆ.

ಈ ಒಪ್ಪಂದದಿಂದಾಗಿ ಹೋಲ್ಸಿಮ್‌ನ ಅಂಗಸಂಸ್ಥೆಗಳಾದ ಎಸಿಸಿ ಲಿಮಿಟೆಡ್ ಮತ್ತು ಅಂಬುಜಾ ಸಿಮೆಂಟ್ ನಿಯಂತ್ರಣವು ಅದಾನಿ ಸಮೂಹಕ್ಕೆ ಬರಲಿದ್ದು, ಇದರಿಂದಾಗಿ ಸಮೂಹವು ಭಾರತದ ಸಿಮೆಂಟ್ ವಲಯದಲ್ಲಿ ಎರಡನೇ ಅತಿದೊಡ್ಡ ಕಂಪನಿಯಾಗಲಿದೆ.

ಏಪ್ರಿಲ್‌ನಲ್ಲಿ 88 ಲಕ್ಷ ಉದ್ಯೋಗ ಸೃಷ್ಟಿ

ಕೋಲ್ಕತ್ತ (ಪಿಟಿಐ): ದೇಶದಲ್ಲಿ ಏಪ್ರಿಲ್ ತಿಂಗಳಿನಲ್ಲಿ ಹೊಸದಾಗಿ 88 ಲಕ್ಷ ಉದ್ಯೋಗ ಸೃಷ್ಟಿ ಆಗಿದ್ದು, ಕೋವಿಡ್ ಸಾಂಕ್ರಾಮಿಕ ಆರಂಭ ಬಳಿಕ ಅತಿ ಹೆಚ್ಚಿನ ಮಟ್ಟದ್ದಾಗಿದೆ ಎಂದು ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಎಕಾನಮಿ (ಸಿಎಂಐಇ) ಸಂಸ್ಥೆ ಹೇಳಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹460
12 ಮೊಟ್ಟೆಗೆ	₹62
ಮೈಸೂರು	
100 ಮೊಟ್ಟೆಗೆ	₹465

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹150-432
ದ್ವಿತಳಿ (ಬಿ.ವಿ)	₹225-688

ಬಡ್ಡಿ ದರ ಹೆಚ್ಚಳ: ಯಾರಿಗೆ ಲಾಭ? ಯಾರಿಗೆ ನಷ್ಟ?

ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ. ಆರ್.

ಕಳೆದ ನಾಲ್ಕು ವರ್ಷಗಳಿಂದ ಸಾಲಗಳ ಮೇಲೆ ಕಡಿಮೆ ಬಡ್ಡಿ ಪಾವತಿಸಿ ನೆಮ್ಮದಿಯಾಗಿದ್ದ ಗ್ರಾಹಕರಿಗೆ ಮೇ 4 ರಂದು ಭಾರತೀಯ ರಿಸರ್ವ್ ಬ್ಯಾಂಕ್ ಶಾಕ್ ಕೊಟ್ಟಿದೆ. ರೆಪೊ ದರ ಅಂದರೆ, ಬ್ಯಾಂಕ್‌ಗಳಿಗೆ ಆರ್‌ಬಿಐ ನೀಡುವ ಸಾಲಗಳ ಮೇಲಿನ ಬಡ್ಡಿ ದರವನ್ನು 40 ಮೂಲಾಂಶಗಳಷ್ಟು (ಶೇ 0.40) ಏರಿಕೆ ಮಾಡಿದೆ. ಬೆಲೆ ಏರಿಕೆ (ಹಣದುಬ್ಬರ) ಕಾರಣದಿಂದ ಬಡ್ಡಿ ದರ ಹೆಚ್ಚಳ ಅನಿವಾರ್ಯವಾಗಿದ್ದರೂ ಆರ್‌ಬಿಐ ತುರ್ತಾಗಿ ಬಡ್ಡಿ ದರ ಹೆಚ್ಚಳ ಮಾಡಿರುವುದು ಸಾಲ ಪಡೆದವರಿಗೆ ಮತ್ತು ಪಡೆಯುವವರಿಗೆ ಬಿಸಿ ತುಪ್ಪವಾಗಿ ಪರಿಣಮಿಸಿದೆ. ಆದ್ರೆ, ರೆಪೊ ದರ ಹೆಚ್ಚಳ ಠೇವಣಿದಾರರ ಮೊಗದಲ್ಲಿ ಮಂದಹಾಸ ಮೂಡಿಸಿದೆ.

ಏನಿದು ರೆಪೊ ಆಧಾರಿತ ಸಾಲ?: ಅಕ್ಟೋಬರ್ 2019 ರ ನಂತರ ರೆಪೊ ಆಧಾರಿತ ಸಾಲ ಪದ್ಧತಿ ಜಾರಿಗೆ ಬಂತು. ಸಾಲ ಪಡೆಯುವ ಗ್ರಾಹಕನಿಗೆ ಬಡ್ಡಿ ಇಳಿಕೆಯ ಲಾಭ ವರ್ಗಾವಣೆ ಮಾಡುವಲ್ಲಿ ಬ್ಯಾಂಕ್‌ಗಳು ಮಂದಗತಿಯ ಧೋರಣೆ ಅನುಸರಿಸುತ್ತಿದ್ದವು ಎನ್ನುವ ಕಾರಣದಿಂದ ರೆಪೊ ದರ ಆಧರಿಸಿ ಸಾಲದ ಬಡ್ಡಿ ದರ ನಿಗದಿ ಮಾಡುವ ವ್ಯವಸ್ಥೆಯನ್ನು ಆರ್‌ಬಿಐ ಜಾರಿಗೆ ತಂದಿತು. ಆರ್‌ಬಿಐ ಪ್ರಕಟಿಸುವ ರೆಪೊ ದರಕ್ಕೆ ಅನುಗುಣವಾಗಿ ಸಾಲದ ಬಡ್ಡಿ ದರಗಳನ್ನು ನಿಗದಿ ಮಾಡುವುದಕ್ಕೆ ರೆಪೊ ದರದ ಸಾಲ ಎಂದು ಕರೆಯಬಹುದು.

ಸಾಲ ಪಡೆದವರಿಗೆ ಕಾದಿದೆ ಕಷ್ಟಕಾಲ: ಕೊರೊನಾ ನಂತರದಲ್ಲಿ ರೆಪೊ ದರ 4 ಕ್ಕೆ ನಿಂತಿತ್ತು. ಆಗ ಬ್ಯಾಂಕ್ ಸಾಲಗಳ ಬಡ್ಡಿ ದರ ಶೇ 6.25 ರ ವರೆಗೂ ಇಳಿಕೆಯಾಗಿತ್ತು. ಬಡ್ಡಿ ದರ ಕಡಿಮೆಯಾಗುತ್ತದೆ ಎಂದು ಅನೇಕ ಗ್ರಾಹಕರು ರೆಪೊ ಪದ್ಧತಿಗೆ ಸಾಲವನ್ನು ವರ್ಗಾವಣೆ ಮಾಡಿಕೊಂಡರು. ಸಾಲವನ್ನು ರೆಪೊಗೆ ವರ್ಗಾಯಿಸಿಕೊಂಡ ಗ್ರಾಹಕರು ನಿರೀಕ್ಷೆಯಂತೆ ಬಡ್ಡಿ ಇಳಿಕೆಯ ಲಾಭವನ್ನೂ ಸುಮಾರು 2 ವರ್ಷಗಳಿಗೂ ಹೆಚ್ಚು ಕಾಲ ಪಡೆದುಕೊಂಡರು. ಇದೀಗ ಮತ್ತೆ ರೆಪೊ ದರ ಹೆಚ್ಚಳವಾಗಿರುವುದರಿಂದ ಸಾಲಗಳ ಮೇಲಿನ ಬಡ್ಡಿ ದರ ಹೆಚ್ಚಳವಾಗಲಿದೆ. ಐಸಿಐಸಿಐ, ಬ್ಯಾಂಕ್ ಆಫ್ ಬರೋಡಾ, ಫೆಡರಲ್ ಬ್ಯಾಂಕ್ ಸೇರಿ ಅನೇಕ ಬ್ಯಾಂಕ್‌ಗಳು ಈಗಾಗಲೇ ಬಡ್ಡಿ ದರ ಹೆಚ್ಚಳ ಮಾಡಿವೆ. ಅಂದಾಜಿನ ಪ್ರಕಾರ ಈ ವರ್ಷ ಇನ್ನೂ 50 ರಿಂದ 100 ಮೂಲಾಂಶಗಳಷ್ಟು ರೆಪೊ ದರ ಹೆಚ್ಚಳವಾಗಲಿದೆ. ಸದ್ಯ ಗೃಹ ಸಾಲ ಪಡೆದು ಶೇ 6.25 ರಿಂದ ಶೇ 7 ರ ವರೆಗೆ ಬಡ್ಡಿ ಪಾವತಿಸುತ್ತಿದ್ದವರು ಮುಂದಿನ ದಿನಗಳಲ್ಲಿ ಶೇ 7.5 ರಿಂದ ಶೇ 8.5 ರ ವರೆಗೂ ಬಡ್ಡಿ ಪಾವತಿಸಬೇಕಾಗಿ ಬರುತ್ತದೆ. ಕ್ರೆಡಿಟ್ ಸ್ಕೋರ್ 750ಕ್ಕಿಂತ ಕಡಿಮೆ ಇರುವವರು ಮತ್ತಷ್ಟು ಹೆಚ್ಚಿನ ಬಡ್ಡಿ ತೆರಬೇಕಾಗುತ್ತದೆ.

ಸಾಲ ಪಡೆಯದಿದ್ದರೆ ಈಗಲೇ ಪಡೆಯಿರಿ: ಹೊಸದಾಗಿ ಗೃಹ ಸಾಲ, ವಾಹನ ಸಾಲ ಪಡೆಯುವ ಉದ್ದೇಶವಿದ್ದರೆ ಆದಷ್ಟು ಬೇಗ ಸಾಲ ಪಡೆಯುವುದು ಒಳಿತು. ಬೇಗ ಸಾಲ ಪಡೆದುಕೊಂಡರೆ ಕಡಿಮೆ ಬಡ್ಡಿ ದರದ ಲಾಭ ನಿಮಗೆ ತಕ್ಕಮಟ್ಟಿಗಾದರೂ ಸಿಗಬಹುದು. ಏಕೆಂದರೆ ಕೂಡಲೇ ಬಡ್ಡಿ ದರಗಳು ಮತ್ತಷ್ಟು ಹೆಚ್ಚಳ ಕಾಣಲಿವೆ. ಒಂದೊಮ್ಮೆ ನೀವು ಪೂರ್ವ ನಿಗದಿತ ಬಡ್ಡಿ ದರ (Fixed Rate) ದಲ್ಲಿ ಸಾಲ ಪಡೆದಿದ್ದರೆ ಆರ್‌ಬಿಐ ಬಡ್ಡಿ ದರ ಹೆಚ್ಚಳದ ಯಾವುದೇ ಪರಿಣಾಮ ಉಂಟಾಗುವುದಿಲ್ಲ. ಆದರೆ ನೆನಪಿರಲಿ ಸಾಮಾನ್ಯವಾಗಿ ಬ್ಯಾಂಕ್‌ಗಳು ಪೂರ್ವ ನಿಗದಿತ ಬಡ್ಡಿ ದರದ (Fixed Rate) ಅಡಿಯಲ್ಲಿ ಸಾಲಗಳನ್ನು ಮಂಜೂರು ಮಾಡುವಾಗ ತುಸು ಹೆಚ್ಚೇ ಬಡ್ಡಿ ನಿಗದಿ ಮಾಡಿರುತ್ತವೆ.

ಸಾಲದ ಹೊರೆಯಿಂದ ಬಚಾವಾಗಲು ಹೀಗೆ ಮಾಡಿ: ಸಾಲದ ಅವಧಿ ಹೆಚ್ಚಾದಂತೆ ಬಡ್ಡಿ ದರವೂ ಹೆಚ್ಚುತ್ತದೆ. ಇದನ್ನು ತಪ್ಪಿಸಲು ಹೆಚ್ಚುವರಿ ಹಣ ಸಿಕ್ಕಾಗಲೆಲ್ಲಾ ಸಾಲದ ಅಸಲಿನ ಮೊತ್ತಕ್ಕೆ ನೀವು ಹಣ ಜಮ ಮಾಡುತ್ತಾ ಹೋದರೆ ಸಾಲದ ಒಟ್ಟು ಪ್ರಮಾಣ ಕಡಿಮೆಯಾಗುತ್ತದೆ. ಸಾಲದ ಒಟ್ಟು ಪ್ರಮಾಣ ಕಡಿಮೆಯಾದಾಗ ಸಾಲದ ಅವಧಿಯೂ ತಗ್ಗುತ್ತದೆ. ಸಾಲದ ಅವಧಿ ತಗ್ಗಿದಾಗ ಬಡ್ಡಿಯ ಹೊರೆ ಕಡಿಮೆಯಾಗುತ್ತದೆ. ಹಾಗಾಗಿ ಎಷ್ಟು ಸಾಧ್ಯವೋ ಅಷ್ಟು ಹೆಚ್ಚುವರಿ ಹಣ ಪಾವತಿಸಲು ಯೋಜನೆ ರೂಪಿಸಿಕೊಳ್ಳಿ.

ಮಾಸಿಕ ಕಂತು (ಇಎಂಐ) ಕಡಿಮೆ ಮಾಡಿಕೊಳ್ಳಬೇಡಿ: ಬಹಳಷ್ಟು ಮಂದಿ ಹೆಚ್ಚುವರಿ ಕಂತುಗಳನ್ನು (Part Payment) ಪಾವತಿಸಿದಾಗ ಸಾಲದಅವಧಿಯನ್ನುತಗ್ಗಿಸಿಕೊಳ್ಳುವಬದಲುಮಾಸಿಕ ಕಂತಿನ ಮೊತ್ತವನ್ನು ಕಡಿಮೆ ಮಾಡಿಸಿಕೊಳ್ಳುತ್ತಾರೆ. ಇದು ಸರಿಯಾದ ನಿರ್ಧಾರವಲ್ಲ. ಇಎಂಐ ಕಡಿಮೆ ಮಾಡಿಸಿಕೊಳ್ಳುವುದರಿಂದ ಸಾಲದ ಅವಧಿ ಹೆಚ್ಚುತ್ತದೆ. ಸಾಲದ ಅವಧಿ ಹೆಚ್ಚಿದಂತೆ ಸಾಲಕ್ಕೆ ಹೆಚ್ಚೆಚ್ಚು ಬಡ್ಡಿ ಕಟ್ಟುತ್ತಲೇ ಇರುತ್ತೀರಿ. ಹಾಗಾಗಿ ನಿಮಗೆ ಆರ್ಥಿಕ ಸಮಸ್ಯೆ ಇಲ್ಲ ಎಂದಾದಲ್ಲಿ ಯಾವುದೇ ಕಾರಣಕ್ಕೂ ಇಎಂಐ ತಗ್ಗಿಸಿಕೊಳ್ಳಬೇಡಿ.

ಹೆಚ್ಚಲಿದೆ ಠೇವಣಿ ದರ: ರೆಪೊ ದರ ಹೆಚ್ಚಳ ಸಾಲ ಪಡೆಯುವವರ ಪಾಲಿಗೆ ಕಹಿ ಸುದ್ದಿಯಾದರೂ ಠೇವಣಿ ಇಡುವವರ ಪಾಲಿಗೆ ಸಿಹಿ ಸುದ್ದಿಯಾಗಿದೆ. ಈಗಾಗಲೇ ಹಲವು ಬ್ಯಾಂಕ್ ಗಳು ಠೇವಣಿ ಮೇಲಿನ ಬಡ್ಡಿ ದರಗಳನ್ನು ಹೆಚ್ಚಳ ಮಾಡಿವೆ. ಆರ್ ಬಿಐ ರೆಪೊ ದರವನ್ನು ಮತ್ತಷ್ಟು ಹೆಚ್ಚಳ ಮಾಡಿದರೆ ಠೇವಣಿಗಳ ಮೇಲಿನ ಬಡ್ಡಿ ದರವೂ ಅದಕ್ಕೆ ತಕ್ಕಂತೆ ಹೆಚ್ಚಳವಾಗಲಿದೆ. ಈಗಿನ ಸನ್ನಿವೇಷದಲ್ಲಿ ರೆಪೊ ಬಡ್ಡಿ ದರದಲ್ಲಿ ಮೇಲಿಂದ ಮೇಲೆ ಪರಿಷ್ಕರಣೆಗಳನ್ನು ನಿರೀಕ್ಷೆ ಮಾಡಬಹುದಾಗಿರುವುದರಿಂದ ದೀರ್ಘಾವಧಿಗೆ ನಿಶ್ಚಿತ ಠೇವಣಿಗಳಿಗೆ ಗ್ರಾಹಕರು ಅಂಟಿಕೊಳ್ಳದಿರುವುದು ಒಳಿತು.

(ಲೇಖಕ ಚಾರ್ಟರ್ಡ್ ಅಕೌಂಟೆಂಟ್)

ರೆಪೊ ದರ ಹೆಚ್ಚಳದಿಂದ ಹೆಚ್ಚಲಿದೆ ಇಎಂಐ ಭಾರ (ಉದಾಹರಣೆ)

ಸಾಲದ ಮೊತ್ತ	₹ 30 ಲಕ್ಷ
ಅವಧಿ	20 ವರ್ಷಗಳು
ಪ್ರಸ್ತುತ ಬಡ್ಡಿ ದರ	6.8%
ಪ್ರಸ್ತುತ ಮಾಸಿಕ ಕಂತು (ಇಎಂಐ)	₹ 22,900
ಹೊಸ ಬಡ್ಡಿ ದರ	7.2 %
ಪರಿಷ್ಕೃತ ಮಾಸಿಕ ಕಂತು (ಇಎಂಐ)	₹ 23,620
ಮಾಸಿಕ ಕಂತಿನಲ್ಲಿನ ಹೆಚ್ಚಳ	₹ 720

ಷೇರುಪೇಟೆಯಲ್ಲಿ ನಿಲ್ಲದ ಕುಸಿತ

ಮೇ 13 ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಗಣನೀಯ ಕುಸಿತ ದಾಖಲಿಸಿವೆ. 52,793 ಅಂಶಗಳಲ್ಲಿ ವಹಿವಾಟು ಮುಗಿಸಿದ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 3.72 ರಷ್ಟು ಕುಸಿತ ಕಂಡಿದೆ. 15,782 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 3.83 ರಷ್ಟು ತಗ್ಗಿದೆ. ಅಮೆರಿಕದಲ್ಲಿ ಹೆಚ್ಚಳವಾಗುತ್ತಿರುವ ಹಣದುಬ್ಬರ, ಭಾರತದಲ್ಲೂ ಬೆಲೆ ಏರಿಕೆ ಬಿಸಿ, ಜಾಗತಿಕವಾಗಿ ಪ್ರಮುಖ ದೇಶಗಳ ಬ್ಯಾಂಕ್ ಗಳಿಂದ ಮತ್ತಷ್ಟು ಬಡ್ಡಿ ದರ ಹೆಚ್ಚಳದ ಮುನ್ಸೂಚನೆ, ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಸೃಷ್ಟಿಯಾಗಿರುವ ಮಾರಾಟದ ಒತ್ತಡ ಸೇರಿ ಅನೇಕ ಬೆಳವಣಿಗೆಗಳು ಷೇರುಪೇಟೆ ಇಳಿಕೆಗೆ ಕಾರಣವಾಗಿವೆ.

ವಲಯವಾರು ಸೂಚ್ಯಂಕಗಳಲ್ಲಿ ಎಲ್ಲಾ ವಿಭಾಗಗಳಲ್ಲೂ ಕುಸಿತ ಕಂಡುಬಂದಿದೆ. ನಿಫ್ಟಿ ಬ್ಯಾಂಕ್ ಸೂಚ್ಯಂಕ ಶೇ 4.25 ರಷ್ಟು ತಗ್ಗಿದೆ. ಮಿಡ್ ಕ್ಯಾಪ್ ಶೇ 5.24, ಲೋಹ ವಲಯ ಶೇ 12.41 ಮತ್ತು ಎನರ್ಜಿ ಸೂಚ್ಯಂಕ ಶೇ 10.56 ರಷ್ಟು ಕುಸಿದಿವೆ.

ಗಳಿಕೆ–ಇಳಿಕೆ: ಮಾರುಕಟ್ಟೆಯಲ್ಲಿ ಗಣನೀಯ ಕುಸಿತದ ನಡುವೆಯೂ ಕೆಲ ಕಂಪನಿಗಳು ಹೆಚ್ಚಳ ಕಂಡಿವೆ, ಬಜಾಜ್ ಆಟೋ ಶೇ 4.07, ಐಷರ್ ಮೋಟರ್ಸ್ ಶೇ 2.97, ಡಿವೀಸ್ ಲ್ಯಾಬ್ಸ್ ಶೇ 2.77, ಎಚ್‌ಯುಎಲ್ ಶೇ 2.09 ಮತ್ತು ಏಶಿಯನ್ ಪೇಂಟ್ಸ್ ಶೇ 1.58 ರಷ್ಟು ಗಳಿಕೆ ಕಂಡಿವೆ. ಟಾಟಾ ಸ್ಟೀಲ್ ಶೇ 14.54, ಜೆಎಸ್ ಡಬ್ಲ್ಯು ಸ್ಟೀಲ್ ಶೇ 13.03 ರಷ್ಟು ತಗ್ಗಿವೆ.

ಮುನ್ನೋಟ: ಸದ್ಯದ ಮಟ್ಟಿಗೆ ಗುಣಮಟ್ಟದ ಕಂಪನಿಗಳನ್ನು ಮಾತ್ರ ಹೂಡಿಕೆಗೆ ಪರಿಗಣಿಸಬಹುದು. ಹೆಚ್ಚು ಸಾಲ ಹೊಂದಿರುವ ಕಂಪನಿಗಳು ಮತ್ತು ಉತ್ತಮ ಆಡಳಿತ ಮಂಡಳಿ ಇಲ್ಲದ ಕಂಪನಿಗಳಿಂದ ದೂರವಿರುವುದು ಒಳಿತು. ಷೇರುಪೇಟೆ ಕರಡಿ ಹಿಡಿತದಲ್ಲಿರುವಾಗ ಉತ್ತಮ ಕಂಪನಿಗಳ ಷೇರುಗಳು ಕಡಿಮೆ ಬೆಲೆಗೆ ಸಿಗುತ್ತವೆ. ಅಂತಹ ಆಯ್ಕೆಗಳನ್ನು ಅಧ್ಯಯನದ ಮೂಲಕ ಪರಿಗಣಿಸಬಹುದು. ಇದರಿಂದ ದೀರ್ಘಾವಧಿಯಲ್ಲಿ ಹೆಚ್ಚು ಲಾಭ ಗಳಿಸಲು ಸಾಧ್ಯವಾಗುತ್ತದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ನೀವು ನಮ್ಮನ್ನಗಲಿ ಇಂದಿಗೆ 46 - 6 ವರ್ಷಗಳಾದರೂ ನಿಮ್ಮ ಸವಿನೆನಪು ಸದಾ ಹಸಿರಾಗಿರುತ್ತದೆ. ನೀವು ತೋರಿದ ಬೆಳಕಿನಲ್ಲೇ ಮುನ್ನಡೆಯುತ್ತಿರುವ ಮೌನಿ,ಕುಮಾರ್, ಸರೂ,ಪ್ರತಿಭಾ,ಮನಿಂದರ್,ರಂಜನಿ, ಬಾಬು, ಅಶ್ವಿನಿ ಅನು, ಸ್ವಪ್ನ ವಿನಯ್,ಪದ್ಮಾಂಜಲಿ ಕಿರಣ್, ಕೃತಿ,ನಿಹುಣ್,ಪ್ರೀತಮ್,ಗೌತಮ್.
ಪದ್ಮಾಂಜಲಿ ಸಿಮೆಂಟ್ಸ್,
ಎಸಿಸಿ ಅಧಿಕೃತ ಮಾರಾಟಗಾರರು ಸ್ಟೀಲ್ ಮತ್ತು ಹಾರ್ಡ್‌ವೇರ್ ಡೀಲರ್ಸ್ ನಂ. 6 & 7, 24ನೇ ಮುಖ್ಯರಸ್ತೆ, ಜೆ.ಪಿ.ನಗರ 6ನೇ ಹಂತ, ಬೆಂ-78.
ಫೋನ್ :- 080 - 26630444 9945007988 / 9845210247

ಮೊದಲನೇ ವರ್ಷದ ಪುಣ್ಯ ಸ್ಮರಣೆ

ಟಿ.ಎನ್. ರಮೇಶ್ (54ವರ್ಷ)
(ಮಾಜಿ ನಿರ್ದೇಶಕರು KHB ಮತ್ತು KPTCL)
ನೀವು ನಮ್ಮನ್ನು ಅಗಲಿ ಇಂದಿಗೆ ಒಂದು ವರ್ಷ ಕಳೆದರೂ ನಿಮ್ಮ ಸವಿನೆನಪು ಹೃದಯಾಂತರಾಳದಲ್ಲಿ ಅಚ್ಚಳಿಯದೆ ಉಳಿದಿದೆ. ನಿಮ್ಮ ಆದರ್ಶಮಯ ಜೀವನ ನಮ್ಮ ಪಾಲಿಗೆ ಸದಾ ದಾರಿದೀಪವಾಗಿದೆ. ನಿಮ್ಮ ಆತ್ಮಕ್ಕೆ ಚಿರಶಾಂತಿ ಕರುಣಿಸಲೆಂದು ಭಗವಂತನಲ್ಲಿ ಸದಾ ಪ್ರಾರ್ಥಿಸುವ
ಪತ್ನಿ ಕವಿತಾ ರಮೇಶ್, ಕುಟುಂಬ ಸದಸ್ಯರು, ಬಂಧು –ಮಿತ್ರರು ಮತ್ತು Koshys ಸ್ನೇಹಿತರು

2ನೇ ವರ್ಷದ ಪುಣ್ಯ ಸ್ಮರಣೆ

ಶ್ರೀ. ತಿಪ್ಪೇಸ್ವಾಮಿ, ನಿವೃತ್ತ ಶಿಕ್ಷಕರು, ಚಂಗಾವರ, ಶಿರಾ ತಾಲ್ಲೂಕು, ತುಮಕೂರು ಜಿಲ್ಲೆ
ಪುಣ್ಯಸ್ಮರಣೆಯನ್ನು ದಿ. 16.05.2022 ರಂದು ನೆರವೇರಿಸಲಾಗುವುದು
ನೀವು ನಮ್ಮನಗಲಿ ಇಂದಿಗೆ 2 ವರ್ಷವಾಯಿತು ನಿಮ್ಮ ಸವಿನೆನಪು ನಮ್ಮ ಮನದಲ್ಲಿ ಸದಾ ಹಚ್ಚಹಸಿರಾಗಿರುತ್ತದೆ
ದುಃಖತಪ್ತರು: ಪತ್ನಿ, ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಮತ್ತು ಕುಟುಂಬದವರು

ವೈಕುಂಠ ಸಮಾರಾಧನೆ

ಉಮಾಶಂಕರ್ ಕೆ. (ಕಿಶೋರ್)
ಇವರು ದಿ: 07.05.2022ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ಇವರ ವೈಕುಂಠ ಸಮಾರಾಧನೆಯನ್ನು ದಿ: 17.05.2022ನೇ ಮಂಗಳವಾರ ಬೆಳಗ್ಗೆ 10 ಗಂಟೆಯ ನಂತರ ನಡೆಸಲಾಗುವುದು. ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕೆಂದು ಕೋರುತ್ತೇವೆ.
ಸ್ಥಳ: ನಂ. 337, 5ನೇ 'ಎ' ಕ್ರಾಸ್, 1ನೇ 'ಬಿ' ಮೈನ್, ಸಿಂಡಿಕೇಟ್ ಬ್ಯಾಂಕ್ ಕಾಲೋನಿ, ಹೇರೋಹಳ್ಳಿ, ಬೆಂ–91.

NAME CHANGE ANNOUNCEMENT
Log on to : dhclassifieds.com

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವ್ಯಾಪಾರ

Business Offers

Machinery & Tools

ಸಮಾಜಸೇವೆ

Old Age Home

ಉದ್ಯೋಗಾವಕಾಶ ತಕ್ಷಣ ಬೇಕಾಗಿದ್ದಾರೆ.ಹೋಂ ನರ್ಸ್ ಕೆಲಸ ವಯಸ್ಸಾದವರನ್ನು,ವೃದ್ಧರನ್ನು ನೋಡಿಕೊಳ್ಳಲು ಯುವತಿಯರು, ಮಹಿಳೆಯರು,ಯುವಕರು ತಕ್ಷಣ ಬೇಕಾಗಿದ್ದಾರೆ.ಊಟ, ವಸತಿ ಉಚಿತ ಸಂಬಳ 13,000-16,000/- ಸಂ. 8123699421, 8880954221

ಶಿಕ್ಷಣ

Correspondence Courses

ನೇರ ಪರೀಕ್ಷೆಗಳು DIRECT EXAMS
ಮನೆಯಲ್ಲೆ ಓದಿ ನೇರ ಪರೀಕ್ಷೆ ಬರೆಯುವ ಅವಕಾಶ
PUC,SCIENCE, COMMERCE, ARTS
ಉನ್ನತ ಶಿಕ್ಷಣಕ್ಕೆ /ಸರ್ಕಾರಿ ಕೆಲಸಕ್ಕೆ ಮತ್ತು ಮುಂಬಡ್ತಿ ಪಡೆಯಲು ಉಪಯೋಗವಾಗುತ್ತದೆ.
ಮಾನಸ ಎಜುಕೇಷನ್ ಟ್ರಸ್ಟ್(ರಿ)
ಎಲ್.ಕೆ.ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
9740258276

ಉದ್ಯೋಗಾವಕಾಶ

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್ : ಒತ್ತಡ ಮುಕ್ತ ಚಾಲನೆ ಸಂಬಳ: 18000-20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : 08047106868

General

ಮನೆಕೆಲಸ (12,000-15,000)/ ಹೋಂನರ್ಸ್ (15,000-18,000), ಹೆಂಗಸರು/ ಹುಡುಗಿಯರು ಬೇಕಾಗಿದ್ದಾರೆ. ಊಟ-ವಸತಿ ಉಚಿತ. ಉಡುಪಿ: 7411499276

✓ ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

✓ ಕಂಪನಿಗಳಿಗೆ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಟಿ.ವಿ.ಎಸ್,ಬ್ರಿಟಾನಿಯಾಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ,ಡಿಗ್ರಿ, ಐಟಿಐನವರುಗಳು 18,100- 56,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ. 9686220858

✓ ಟಾಟಾಮೋಟಾರ್ಸ್, TOYOTA, ಬ್ರಿಟಾನಿಯಾ, ಆನ್‌ಲೈನ್ನಲ್ಲಿಗೆ 7th SSLC PUC/ Degree/ ITI/ Diplomaದವರು 18,600- 54,000 ವಸತಿಯೂಟವಿದೆ. 9731066259, 9731670789

ರಾವ್ ಸಂಸ್ಥೆಗೆ ವಯಸ್ಸಾದವರನ್ನು,ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂ ನರ್ಸ್ ಗಳು ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ. 10,000- 15,000. 8951315839, 9880545002

REQUIRED URGENTLY BABY SITTERS, HOUSE MAID/HOME NURSE, Male/Female 24/12 hours duty. Contact: 6366883838, 7022399993

DAIRYDAY ಕಂಪನಿಯಲ್ಲಿ ಕೆಲಸ ಮಾಡಲು 80 ಜನ ಯುವಕ ಯುವತಿಯರು ಬೇಕಾಗಿದ್ದಾರೆ ವಿದ್ಯಾರ್ಹತೆ: SSLC, PUC, DEGREE ಸಂಬಳ:15000. ಉಚಿತ ವಸತಿ ಸೌಕರ್ಯವಿರುತ್ತದೆ ಸಂಪರ್ಕಿಸಿ: 9980814578, 9980812378

Part-Time Jobs

ಕನ್ನಡ /ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000- 16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

✓ ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Wanted

✓ ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ/ ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+ Ot. 17,800-68,000/- 8884666594/ 8884666597

ಪ್ರವಾಸ

Travel

05.06.2022 ಬದರಿನಾಥ್, ಕೇದಾರನಾಥ್, ಯಮುನೋತ್ರಿ, ಗಂಗೋತ್ರಿ 14.07.2022 ಅಮರನಾಥ್ ಅಮೃತಸರ್,ವೈಷ್ಣೋದೇವಿ 26.05.2022 ಕಾಶಿ,ಗಯಾ,ಅಯೋಧ್ಯ 7 ದಿನಗಳು. 01.09.2022 ಉತ್ತರ ಭಾರತ ಮುಕ್ತಿನಾಥ್ ನೇಪಾಳ ಇತ್ಯಾದಿ 11 ದಿನಗಳ ಪ್ರವಾಸಗಳಿಗಾಗಿ ಸಂಪರ್ಕಿಸಿ ಏಷ್ಯನ್ ಟ್ರಾವೆಲ್ ಏಜೆನ್ಸಿ 080-26574131 26573421 9964108171

ದೆಹಲಿ, ಯಮುನೋತ್ರಿ, ಗಂಗೋತ್ರಿ ಬದರಿನಾಥ್ ಕೇದಾರನಾಥ್ 22.05.2022, 06.06.2022 19.06.2022 ರಿಂದ 18/14 ದಿನಗಳು. ಸ್ವಯಂಭೂ,ಹಿಮಲಿಂಗ ಅಮರನಾಥ್ ವೈಷ್ಣೊದೇವಿ ಕಾಶ್ಮೀರ್,ಅಮೃತಸರ್ 26.06.2022 04.07.2022 ರಿಂದ 13/17 ದಿನಗಳು. ನೈಮಿಶಾರಣ್ಯ ಚಿತ್ರಕೂಟ ಕಾಶಿ,ಗಯಾ,ಪ್ರಯಾಗ 07.08.2022 ರಿಂದ 8 ದಿನಗಳು. ಸಂಪರ್ಕಿಸಿ 26508925, 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ ಬೆಂಗಳೂರು-18

14.06.2022 21.06.2022 ಕುಲು,ಮನಾಲಿ 7ದಿನಗಳು. 06.06.2022 20.06.2022 ಲೇಹಾಲಡಕ್ 10ದಿನಗಳು 16.06.2022 23.06.2022 ಕಲ್ಕತ್ತ,ಡಾರ್ಜಲಿಂಗ್ 11 ದಿನಗಳು 03.06.2022 10.06.2022 ಕಾಶಿ,ನೈಮಿಶಾರಣ್ಯ 7ದಿನಗಳು 04.07.2022 18.07.2022 ಅಮರನಾಥ್‌ಯಾತ್ರೆ 11ದಿನಗಳು 07.09.2022 21.09.2022 ಚಾರ್‌ಧಾಮ್ 13 ದಿನಗಳು. 'ಶ್ರೀಮಲ್ಲಿಕಾರ್ಜುನ ಟ್ರಾವಲ್ಸ್' ಬೆಂಗಳೂರು.40. 9880847001 9342848791

09.07.2022ರಿಂದ 13ದಿನಗಳು ವಿಮಾನ ಮತ್ತು ಬಸ್ಸಿನಲ್ಲಿ ಚಾರುಧಾಮ,ಮಸ್ಸೂರಿ,ಮಾಣ, ಹರಿದ್ವಾರ್.40000/. 12ದಿನಗಳ ಅಹಮದಾಬಾದ್, ದ್ವಾರಕಾ,ಸೋಮನಾಥ್, ಉಜ್ಜಯಿನಿ,ಸರ್ದಾರ್ ಪ್ರತಿಮೆ 34000/. ವಿವರಗಳಿಗೆ:ಏಷ್ಯನ್ ಟ್ರಾವೆಲ್ ಲೈನ್ಸ್.164/3, ಆರ್.ವಿ.ರಸ್ತೆ(ಮಿನರ್ವ ಬಸ್ ಸ್ಟಾಪ್ ಎದುರು)ಬೆಂಗಳೂರು4. ಫೋನ್:08026565085/ 9480182865/ 8105657052.

10/07/2022 13/17 ದಿನಗಳು ರೈಲು/ವಿಮಾನದಲ್ಲಿ, ದೆಹಲಿ ಮಥುರ ಆಗ್ರ, ಅಮೃತಸರ, ಅಮರನಾಥ್, ವೈಷ್ಣೋದೇವಿ, ಕಾಶ್ಮೀರ, ಕುರುಕ್ಷೇತ್ರ 21,000/- (ಕೆಲವೇ ಸೀಟುಗಳಿವೆ) ಪ್ರತಿ ತಿಂಗಳು ಅಂಡಮಾನ್ ಹವಳದ್ವೀಪ. 'ಶ್ರೀಸಾಯಿ ರಾಘವೇಂದ್ರ ಟ್ರಾವಲ್ಸ್'- 9739847429/ 9845560219.

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 23.06.2022 ಗುಜರಾತ್ ದ್ವಾರಕ, ಸೋಮನಾಥ್, ನಾಗನಾಥ, 01.07.2022 ಅಮರ್‌ನಾಥ್ ಯಾತ್ರ. 26.05.2022, ಕಾಶಿ, ಜಾರ್ಖಂಡ, ಬೈದ್ಯನಾಥ್ 9964527782.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೆಟ್ ಲಿ. ಬೆಂಗಳೂರು

ಪ್ರಜಾವಾಣಿ
EFFECTIVE FROM May 1, 2022
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	70	100	80	135
CD Per Sqcm	Single Col	Double Col	Multi Col	
	480	450	475	

SPECIAL OFFER

PAY	2	And	GET	1	Free
PAY	3	And	GET	2	Free
PAY	5	And	GET	5	Free

condition apply*

For More Details Contact:
Ph:080- 45557160 | 163 | 164 | M: 9880856233
9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com

ಮೇ 2–13ರವರೆಗಿನ ಅವಧಿಯಲ್ಲಿ ₹ 25,200 ಕೋಟಿ ಹಿಂತೆಗೆತ

ಎಫ್‌ಪಿಐ: ಮುಂದುವರಿದ ಹೊರಹರಿವು

ನವದೆಹಲಿ (ಪಿಟಿಐ): ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಭಾರತದ ಮಾರುಕಟ್ಟೆಯಿಂದ ನಿರಂತರವಾಗಿ ಬಂಡವಾಳ ಹಿಂದಕ್ಕೆ ಪಡೆಯುತ್ತಲೇ ಇದ್ದಾರೆ.

ಮೇ 2 ರಿಂದ 13ರವರೆಗಿನ ಅವಧಿಯಲ್ಲಿ ಷೇರುಪೇಟೆಯಿಂದ ₹25,200 ಕೋಟಿ ಬಂಡವಾಳ ಹಿಂದಕ್ಕೆ ಪಡೆದಿದ್ದಾರೆ. ಜಾಗತಿಕ ಮಟ್ಟದಲ್ಲಿ ಬಡ್ಡಿದರ ಹೆಚ್ಚಳ ಆಗಿರುವುದು ಮತ್ತು ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿರುವುದೇ ಇದಕ್ಕೆ ಕಾರಣವಾಗಿದೆ.

'ಕಚ್ಚಾ ತೈಲ ದರ ಗರಿಷ್ಠ ಮಟ್ಟದಲ್ಲಿ ಇರುವುದು, ಹಣದುಬ್ಬರ ಏರಿಕೆ, ಕೇಂದ್ರೀಯ ಬ್ಯಾಂಕ್‌ಗಳು ಹಣಕಾಸು ನೀತಿಯನ್ನು ಬಿಗಿಗೊಳಿಸುತ್ತಿರುವುದು ಷೇರುಪೇಟೆಯ ಮೇಲೆ ಪರಿಣಾಮ ಉಂಟುಮಾಡುತ್ತಿವೆ. ಅಲ್ಲದೆ, ಜಾಗತಿಕವಾಗಿ ಹಣದುಬ್ಬರವು ಭಾರಿ ಏರಿಕೆ ಕಾಣುತ್ತಿರುವುದರಿಂದ ಹೂಡಿಕೆದಾರರು ಆರ್ಥಿಕ ಬೆಳವಣಿಯ ಬಗ್ಗೆ ಆತಂಕ ಹೊಂದಿದ್ದಾರೆ. ಈ ಎಲ್ಲಾ ಕಾರಣಗಳಿಂದ ಅಲ್ಪಾವಧಿಯಲ್ಲಿ ಎಫ್‌ಪಿಐ ಒಳಹರಿವು ಅಸ್ಥಿರವಾಗಿರಲಿದೆ' ಎಂದು ಕೋಟಕ್ ಸೆಕ್ಯುರಿಟೀಸ್‌ನ ಈಕ್ವಿಟಿ ರಿಸರ್ಚ್‌ನ ಮುಖ್ಯಸ್ಥ ಶ್ರೀಕಾಂತ್ ಚೌಹಾಣ್ ಹೇಳಿದ್ದಾರೆ.

2022ರ ಏಪ್ರಿಲ್‌ವರೆಗೆ ನಿರಂತರವಾಗಿ ಏಳನೇ ತಿಂಗಳಿನಲ್ಲಿಯೂ ಮಾರಾಟಕ್ಕೆ ಗಮನ ನೀಡಿದ್ದಾರೆ. ಷೇರುಪೇಟೆಯಿಂದ ಒಟ್ಟಾರೆ ₹ 1.65 ಲಕ್ಷ ಕೋಟಿ ಬಂಡವಾಳ ಹಿಂದಕ್ಕೆ ಪಡೆದಿದ್ದಾರೆ. ಮೇ 2 ರಿಂದ 13ರವರೆಗಿನ ಅವಧಿಯಲ್ಲಿ ಸಾಲಪತ್ರ ಮಾರುಕಟ್ಟೆಯಿಂದಲೂ ₹ 4,342 ಕೋಟಿ ಬಂಡವಾಳ ಹಿಂದಕ್ಕೆ ಪಡೆದಿದ್ದಾರೆ.

ಪ್ರವರ್ಧಮಾನಕ್ಕೆ ಬರುತ್ತಿರುವ ತೈವಾನ್, ದಕ್ಷಿಣ ಕೊರಿಯಾ ಮತ್ತು ಫಿಲಿಪ್ಪೀನ್ಸ್ ಮಾರುಕಟ್ಟೆಗಳಿಂದಲೂ ಮೇನಲ್ಲಿ ಬಂಡವಾಳ ಹೊರಹರಿವು ಕಂಡುಬಂದಿದೆ

ಮುಖ್ಯಾಂಶಗಳು

- ಸತತ ಏಳನೇ ತಿಂಗಳಿನಲ್ಲಿಯೂ ಬಂಡವಾಳ ಹಿಂತೆಗೆತ
- ಬಡ್ಡಿದರ ಏರಿಕೆ, ಹಣದುಬ್ಬರ ಹೆಚ್ಚಳ ಪರಿಣಾಮ
- ಅಲ್ಪಾವಧಿಯಲ್ಲಿ ಎಫ್‌ಪಿಐ ಒಳಹರಿವು ಅಸ್ಥಿರ

₹ 40,295 ಕೋಟಿ ಮೊತ್ತದ ಬ್ಯಾಂಕಿಂಗ್ ವಂಚನೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಲ್ಲಿ 2021–22ನೇ ಹಣಕಾಸು ವರ್ಷದಲ್ಲಿ ₹ 40,295 ಕೋಟಿ ಮೊತ್ತದ ವಂಚನೆ ನಡೆದಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ತಿಳಿಸಿದೆ.

ಸರ್ಕಾರಿ ಸ್ವಾಮ್ಯದ 12 ಬ್ಯಾಂಕ್‌ಗಳಲ್ಲಿ 2020–21ನೇ ಹಣಕಾಸು ವರ್ಷದಲ್ಲಿ ₹ 81,921 ಕೋಟಿ ಮೊತ್ತದ ವಂಚನೆ ನಡೆದಿತ್ತು. ಇದಕ್ಕೆ ಹೋಲಿಸಿದರೆ 2021–22ರಲ್ಲಿ ವಂಚನೆಯ ಮೊತ್ತದಲ್ಲಿ ಶೇ 51ರಷ್ಟು ಇಳಿಕೆ ಕಂಡುಬಂದಿದೆ ಎಂದು ಆರ್‌ಟಿಐ ಅರ್ಜಿಗೆ ಆರ್‌ಬಿಐ ಮಾಹಿತಿ ನೀಡಿದೆ.

ವಂಚನೆಯ ಮೊತ್ತದಲ್ಲಿ ಇಳಿಕೆ ಆಗಿರುವ ರೀತಿಯಲ್ಲಿಯೇ ವಂಚನೆ ಪ್ರಕರಣಗಳ ಸಂಖ್ಯೆಯಲ್ಲಿ ಇಳಿಕೆ ಆಗಿಲ್ಲ. 2020–21ರಲ್ಲಿ 9,933 ವಂಚನೆ ಪ್ರಕರಣಗಳು ನಡೆದಿದ್ದವು. 2021–22ರಲ್ಲಿ 7,940 ವಂಚನೆ ಪ್ರಕರಣಗಳು ವರದಿಯಾಗಿದ್ದವು.

ಮಧ್ಯಪ್ರದೇಶದ ಆರ್‌ಟಿಐ ಕಾರ್ಯಕರ್ತ ಚಂದ್ರಶೇಖರ್ ಗೌರ್ ಅವರು ಕೇಳಿದ್ದ ಪ್ರಶ್ನೆಗೆ ಆರ್‌ಬಿಐ ಈ ವಿವರಗಳನ್ನು ನೀಡಿದೆ.

12 ಬ್ಯಾಂಕ್‌ಗಳ ಪೈಕಿ ಪಂಜಾಬ್ ನ್ಯಾಷನಲ್ ಬ್ಯಾಂಕ್‌ನಲ್ಲಿಯೇ (ಪಿಎನ್‌ಬಿ) ಅತಿ ಹೆಚ್ಚು ವಂಚನೆ ಪ್ರಕರಣಗಳು ವರದಿಯಾಗಿವೆ.

ಪ್ರಮುಖ ಬ್ಯಾಂಕ್‌ಗಳ ವಿವರ (ಕೋಟಿಗಳಲ್ಲಿ)

ವಂಚನೆ ಮೊತ್ತ	ಬ್ಯಾಂಕ್
₹ 9,528	ಪಂಜಾಬ್ ನ್ಯಾಷನಲ್ ಬ್ಯಾಂಕ್
₹6,932	ಎಸ್‌ಬಿಐ
₹5,923	ಬ್ಯಾಂಕ್ ಆಫ್ ಇಂಡಿಯಾ
₹3,989	ಯೂನಿಯನ್ ಬ್ಯಾಂಕ್
₹3,230	ಕೆನರಾ ಬ್ಯಾಂಕ್
₹2,038	ಇಂಡಿಯನ್ ಬ್ಯಾಂಕ್

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಸದ್ಯದಲ್ಲೇ ಮತ್ತೆರಡು ಯುದ್ಧನೌಕೆಗಳ ಸೇರ್ಪಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತೀಯ ನೌಕಾಪಡೆಗೆ ಎರಡು ಹೊಸ ಯುದ್ಧನೌಕೆಗಳು ಮಂಗಳವಾರ ಸಮುದ್ರ ಸಂಚಾರ ಆರಂಭಿಸಲಿದ್ದು, ನಂತರ ಅವುಗಳು ನೌಕಾಪಡೆಗೆ ಸೇರ್ಪಡೆಯಾಗಲಿವೆ. ಇದರಿಂದ ನೌಕಾಪಡೆಗೆ ಭವಿಷ್ಯದಲ್ಲಿ ಇನ್ನೂ ಎರಡು ಯುದ್ಧನೌಕೆಗಳು ನಿಯೋಜನೆಗೊಳ್ಳಲಿವೆ.

ಕಾರ್ಯಾರಂಭವಾದ ಮೇಲೆ ಒಂದು ಯುದ್ಧನೌಕೆಗೆ ಐಎನ್‌ಎಸ್ ಸೂರತ್ ಎಂದು ನಾಮಕರಣ ಮಾಡಲಾಗುವುದು. ವಿಶಾಖಪಟ್ಟಣಂದಲ್ಲಿನ ನಾಲ್ಕನೇ ಯುದ್ಧನೌಕೆ ಇದಾಗಿದ್ದು, ಮುಂಬೈನ ಮಜಗಾಂವ್ ಡಾಕ್‌ನಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರ ಸಮ್ಮುಖದಲ್ಲಿ ಸಮುದ್ರ ಸಂಚಾರಕ್ಕೆ ಚಾಲನೆ ನೀಡಲಾಗುವುದು.

ಸ್ಥಳೀಯವಾಗಿ ನಿರ್ಮಾಣ ಆಗಿರುವ ಯುದ್ಧನೌಕೆ ಇದಾಗಿದೆ.

ಇಂಡೊನೇಷ್ಯಾ ವಿರುದ್ಧ ಏಕಪಕ್ಷೀಯ ಗೆಲುವು; ಮೋಹಕ ಆಟವಾಡಿದ ಲಕ್ಷ್ಯ, ಕಿದಂಬಿ; ಸಾತ್ವಿಕ್–ಚಿರಾಗ್ ಮಿಂಚು

ಭಾರತ ಚಾಂಪಿಯನ್; ಸಂಭ್ರಮದ ಅಲೆ

ಬ್ಯಾಂಕಾಕ್ (ಪಿಟಿಐ): ಹದಿನಾಲ್ಕು ಬಾರಿಯ ಚಾಂಪಿಯನ್ ಇಂಡೊನೇಷ್ಯಾ ವಿರುದ್ಧ ಅಮೋಘ ಆಟವಾಡಿದ ಭಾರತ ತಂಡ ಥಾಮಸ್ ಕಪ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಮೊದಲ ಬಾರಿ ಚಿನ್ನದ ಪದಕ ಗಳಿಸಿತು.

ಭಾನುವಾರ ನಡೆದ ಫೈನಲ್ ಪಂದ್ಯದಲ್ಲಿ ಸಂಪೂರ್ಣ ಆಧಿಪತ್ಯ ಮೆರೆದ ಭಾರತ 3–0ಯಿಂದ ಜಯ ಗಳಿಸಿತು. ಕ್ರೀಡಾಂಗಣದಲ್ಲಿ ಆಟಗಾರರ ಸಂಭ್ರಮದ ಅಲೆ ಏಳುತ್ತಿದ್ದಂತೆ ದೇಶದಾದ್ಯಂತ ಕ್ರೀಡಾಪ್ರೇಮಿಗಳೂ ಸಂಭ್ರಮಿಸಿದರು. ಸಾಮಾಜಿಕ ತಾಣಗಳಲ್ಲಿ ಅಭಿನಂದನೆಯ ಸಂದೇಶದ ಮಳೆ ಸುರಿಯಿತು.

ಮೊದಲ ಸಿಂಗಲ್ಸ್ ಪಂದ್ಯದಲ್ಲಿ ಲಕ್ಷ್ಯ ಸೇನ್ 8–21, 21–17, 21–16ರಲ್ಲಿ ಆ್ಯಂಟನಿ ಸಿನಿಸುಕ ಜಿಂಟಿಂಗ್ ವಿರುದ್ಧ ಜಯ ಗಳಿಸಿ ಮುನ್ನಡೆ ತಂದುಕೊಟ್ಟರು. ನಂತರ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಮೊಹಮ್ಮದ್ ಅಹ್ಸಾನ್ ಮತ್ತು ಕೆವಿನ್ ಸಂಜಯ್ ಸುಖಮುಲ್ಜೊ ಜೋಡಿಯನ್ನು 18–21, 23–21, 21–19ರಲ್ಲಿ ಮಣಿಸಿದರು. ಎರಡನೇ ಸಿಂಗಲ್ಸ್‌ನಲ್ಲಿ ಕಿದಂಬಿ ಶ್ರೀಕಾಂತ್ ಭರ್ಜರಿ ಆಟವಾಡಿ 21–15, 23–21ರಲ್ಲಿ ಗೆದ್ದರು. ಹೀಗಾಗಿ ಉಳಿದೆರಡು ಪಂದ್ಯಗಳನ್ನು ಆಡುವ ಅಗತ್ಯ ಬೀಳಲಿಲ್ಲ.

ಯುವ ಆಟಗಾರ ಲಕ್ಷ್ಯ ಸೇನ್ ಮೊದಲ ಗೇಮ್‌ನಲ್ಲಿ ಸೋತು ನಿರಾಸೆ ಅನುಭವಿಸಿದರು. ಆದರೆ ಛಲ ಬಿಡದೆ ಕಾದಾಡಿ ವಿಶ್ವ ಕ್ರಮಾಂಕದ ಐದನೇ ಸ್ಥಾನದಲ್ಲಿರುವ ಆ್ಯಂಟನಿ ಸಿನಿಸುಕ ಅವರನ್ನು ಮಣಿಸುವಲ್ಲಿ ಯಶಸ್ವಿಯಾದರು. ಪ್ರಮುಖ ಟೂರ್ನಿಗಳಲ್ಲಿ ಲಕ್ಷ್ಯ ಸೇನ್ ಮತ್ತು ಜಿಂಟಿಂಗ್ ಈ ಮೊದಲು ಎರಡು ಬಾರಿ ಮುಖಾಮುಖಿಯಾಗಿದ್ದು ಎರಡೂ

ಡಬಲ್ಸ್ ಜೋಡಿ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ (ಎಡ) ಮತ್ತು ಚಿರಾಗ್ ಶೆಟ್ಟಿ

ಬಾರಿ ಸೇನ್ ಜಯ ಗಳಿಸಿದ್ದರು.

ದೇಶದ ಶ್ರೇಷ್ಠ ಡಬಲ್ಸ್ ಜೋಡಿ ಸಾತ್ವಿಕ್ ಸಾಯಿರಾಜ್ ಮತ್ತು ಚಿರಾಗ್ ಶೆಟ್ಟಿ ಬಲಿಷ್ಠ ಜೋಡಿ ಮೊಹಮ್ಮದ್ ಅಹ್ಸಾನ್ ಮತ್ತು ಕೆವಿನ್ ಸಂಜಯ ಎದುರು ಮೊದಲ ಗೇಮ್‌ನಲ್ಲಿ ಸೋತಿದ್ದರು. ಎರಡನೇ ಗೇಮ್‌ನಲ್ಲಿ ಸೋಲಿನ ಅಂಚಿನಲ್ಲಿದ್ದ ಅವರು ನಾಲ್ಕು ಮ್ಯಾಚ್ ಪಾಯಿಂಟ್‌ಗಳನ್ನು ಉಳಿಸಿಕೊಂಡು ಗೇಮ್ ಮತ್ತು ಪಂದ್ಯವನ್ನು ಭಾರತದ ತೆಕ್ಕೆಯಲ್ಲಿ ಉಳಿಸಿದರು. ಮೂರನೇ ಗೇಮ್‌ನಲ್ಲಿ ನಿರಾಯಾಸವಾಗಿ ಆಡಿ 2–0 ಮುನ್ನಡೆ ಗಳಿಸಿಕೊಟ್ಟರು.

ಎರಡನೇ ಸಿಂಗಲ್ಸ್‌ನಲ್ಲಿ ಕಿದಂಬಿ ಶ್ರೀಕಾಂತ್ ಕೇವಲ 48 ನಿಮಿಷಗಳಲ್ಲಿ ಜೊನಾಥನ್ ಕ್ರಿಸ್ಟಿ ಅವರನ್ನು ಸೋಲಿಸಿ ಭಾರತದ ಪಾಳಯದಲ್ಲಿ ಸಂಭ್ರಮದ ಅಲೆ ಉಕ್ಕಿಸಿದರು. ತಾಳ್ಮೆಯಿಂದ ಆಡಿದ ಶ್ರೀಕಾಂತ್ ನೆಟ್ ಬಳಿ ಮೋಹಕ ಡ್ರಾಪ್‌ಗಳ ಮೂಲಕ ಪಾಯಿಂಟ್‌ಗಳನ್ನು ಕಲೆ ಹಾಕಿದರು. ಅವಕಾಶ ಸಿಕ್ಕಿದಾಗಲೆಲ್ಲ ಅಂಗಣದ ಎರಡೂ ಬದಿಗಳಲ್ಲಿ ಸ್ಮ್ಯಾಷ್‌ಗಳನ್ನು ಸಿಡಿಸಿ ಎದುರಾಳಿಯನ್ನು ಕಂಗೆಡಿಸಿದರು. ಆರಂಭದಲ್ಲಿ 8–3ರ ಮುನ್ನಡೆಯಲ್ಲಿದ್ದ ಶ್ರೀಕಾಂತ್ ಕೆಲವು ತಪ್ಪುಗಳನ್ನು ಎಸಗಿದ್ದರಿಂದಾಗಿ ಎದುರಾಳಿ 15–15ರ ಸಮಬಲ ಸಾಧಿಸಿದರು. ಆದರೆ ಛಲ ಬಿಡದ ಶ್ರೀಕಾಂತ್ 20–16ರ ಮುನ್ನಡೆ ಸಾಧಿಸಿದರು. ಎರಡನೇ ಗೇಮ್ ಕೂಡ ಜಿದ್ದಾಜಿದ್ದಿಯಿಂದ ಕೂಡಿತ್ತು. ಒಂದು ಹಂತದಲ್ಲಿ ಗೇಮ್ 18–18ರಲ್ಲಿ ಸಮ ಆಗಿತ್ತು. ನಂತರ ರೋಚಕ ರ‍್ಯಾಲಿಗಳಿಗೆ ಗೇಮ್ ಸಾಕ್ಷಿಯಾಯಿತು. ಜಂಪ್ ಸ್ಮ್ಯಾಷ್ ಮೂಲಕ ಪಾಯಿಂಟ್ ಗಳಿಸಿದ ಶ್ರೀಕಾಂತ್ ಗೆಲುವಿನ ಸನಿಹ ತಲುಪಿದರು. ನಂತರ ಉಭಯ ಆಟಗಾರರು ಜಿದ್ದಾಜಿದ್ದಿಯಿಂದ ಹೋರಾಡಿದರು. ಹೈ–ಜಂಪ್ ಸ್ಮ್ಯಾಷ್ ಮೂಲಕ ಶ್ರೀಕಾಂತ್ ಚಾಂಪಿಯನ್‌ಷಿಪ್ ಪಾಯಿಂಟ್ ಗಳಿಸಿದರು.

1983ರಲ್ಲಿ ವಿಶ್ವಕಪ್ ಪ್ರಶಸ್ತಿ ಗೆದ್ದ ನಂತರ ದೇಶದ ಕ್ರಿಕೆಟ್‌ನಲ್ಲಿ ಬದಲಾವಣೆ ಆಗಿದೆ. ಬ್ಯಾಡ್ಮಿಂಟನ್ ಬೆಳವಣಿಗೆಗೆ ಥಾಮಸ್ ಕಪ್ ಪ್ರಶಸ್ತಿ ನೆರವಾಗಲಿದೆ.
ವಿಮಲ್ ಕುಮಾರ್ ಭಾರತದ ಕೋಚ್

ನಾಲ್ಕು ವರ್ಷಗಳಲ್ಲಿ ₹ 67 ಕೋಟಿ ವೆಚ್ಚ

ಕಳೆದ ನಾಲ್ಕು ವರ್ಷಗಳಲ್ಲಿ ಭಾರತ ಬ್ಯಾಡ್ಮಿಂಟನ್ ತಂಡಕ್ಕಾಗಿ ಕೇಂದ್ರ ಸರ್ಕಾರ ₹ 67.19 ಕೋಟಿ ಮೊತ್ತವನ್ನು ವೆಚ್ಚ ಮಾಡಿದೆ. ತರಬೇತಿ, ಸ್ಪರ್ಧೆ ಮತ್ತು ವೇತನಕ್ಕಾಗಿ ಈ ಮೊತ್ತವನ್ನು ವಿನಿಯೋಗಿಸಲಾಗಿದೆ. ಭಾರತದ ಕೋಚ್‌ಗಳ ಜೊತೆ ವಿದೇಶಿ ಕೋಚ್‌ಗಳ ಪ್ರತಿಭೆಯನ್ನೂ ಬಳಸಿಕೊಳ್ಳಲಾಗಿದೆ ಎಂದು ಅನುರಾಗ್ ಠಾಕೂರ್ ತಿಳಿಸಿದ್ದಾರೆ.

ನಾಲ್ಕು ವರ್ಷಗಳಲ್ಲಿ ₹ 4.5 ಕೋಟಿ ವೆಚ್ಚ ಮಾಡಿ ಆಟಗಾರರಿಗೆ ಒಟ್ಟು 13 ವಿದೇಶ ಪ್ರವಾಸವನ್ನು ಏರ್ಪಡಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ತಂಡ ಕ್ರೀಡೆಗಳಲ್ಲಿ ಭಾರತದ 'ಪ್ರಥಮ'ಗಳು

1928; ಆ್ಯಮ್‌ಸ್ಟರ್‌ಡ್ಯಾಮ್ ಒಲಿಂಪಿಕ್ಸ್‌ನಲ್ಲಿ ಹಾಕಿ ತಂಡಕ್ಕೆ ಚಿನ್ನ
1951; ಏಷ್ಯನ್ ಗೇಮ್ಸ್ ಫುಟ್‌ಬಾಲ್‌ನಲ್ಲಿ ಚಿನ್ನ
1975; ಹಾಕಿ ವಿಶ್ವಕಪ್ ವಿಜಯ
1983; ಏಕದಿನ ಕ್ರಿಕೆಟ್ ವಿಶ್ವಕಪ್ ಜಯ
2007; ಕ್ರಿಕೆಟ್ ಟಿ20 ವಿಶ್ವಕಪ್ ಗೆಲುವು

- **1974**ರಲ್ಲಿ ಭಾರತ ತಂಡವು ಡೇವಿಸ್ ಕಪ್ ಫೈನಲ್ ತಲುಪಿತ್ತು. ಅದರಲ್ಲಿ ದಕ್ಷಿಣ ಆಫ್ರಿಕಾ ಎದುರು ಜಯಿಸುವ ನೆಚ್ಚಿನ ತಂಡವೂ ಆಗಿತ್ತು. ಆದರೆ, ಆಗಿನ ವರ್ಣಭೇಧ ನೀತಿಯನ್ನು ವಿರೋಧಿಸಿ ವಿಜಯ್ ಅಮೃತರಾಜ್ ನಾಯಕತ್ವದ ಭಾರತವು ಹಿಂದೆ ಸರಿದಿತ್ತು.

ಬ್ಯಾಡ್ಮಿಂಟನ್‌ನಲ್ಲಿ ಭಾರತ ಮೈಲುಗಲ್ಲುಗಳು

- **1983**ರಲ್ಲಿ ಪ್ರಕಾಶ್ ಪಡುಕೋಣೆ ಆಲ್ ಇಂಗ್ಲೆಂಡ್ ಚಾಂಪಿಯನ್ ಆಗಿ ಹೊರಹೊಮ್ಮಿದರು
- **2001**ರಲ್ಲಿ ಪುಲ್ಲೇಲಾ ಗೋಪಿಚಂದ್ ಆಲ್ ಇಂಗ್ಲೆಂಡ್ ಪ್ರಶಸ್ತಿ ಜಯಿಸಿದರು
- **2010** ಮತ್ತು **2018**ರಲ್ಲಿ ಸೈನಾ ನೆಹ್ವಾಲ್ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಚಿನ್ನ ಜಯಿಸಿದರು. **2012**ರ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗಳಿಸಿದರು.
- ಪಿ.ವಿ. ಸಿಂಧು **2013**ರ ವಿಶ್ವ ಬ್ಯಾಡ್ಮಿಂಟನ್‌ನಲ್ಲಿ ಕಂಚು, **2017, 2018**ರಲ್ಲಿ ಬೆಳ್ಳಿ ಮತ್ತು **2019**ರಲ್ಲಿ ಚಿನ್ನ ಗೆದ್ದರು. **2016** ಒಲಿಂಪಿಕ್ಸ್‌ನಲ್ಲಿ ಬೆಳ್ಳಿ, **2020**ರಲ್ಲಿ ಕಂಚು ಗಳಿಸಿದರು

ಭಾರತ ಬ್ಯಾಡ್ಮಿಂಟನ್ ತಂಡವು ಐತಿಹಾಸಿಕ ಸಾಧನೆ ಮಾಡಿದೆ. ಥಾಮಸ್ ಕಪ್ ವಿಜಯದಿಂದ ಇಡೀ ಭಾರತವೇ ಪುಳಕಿತಗೊಂಡಿದೆ. ತಂಡಕ್ಕೆ ಅಭಿನಂದನೆಗಳು. ಈ ವಿಜಯವು ಯುವಸಮೂಹವನ್ನು ಕ್ರೀಡೆಯತ್ತ ಆಕರ್ಷಿಸಲಿದೆ. ಭವಿಷ್ಯದಲ್ಲಿ ಒಳಿತಾಗಲಿ.
–ನರೇಂದ್ರ ಮೋದಿ, ಪ್ರಧಾನಿ

ಸರ್ಕಾರ, ಬಿಎಐನಿಂದ ತಲಾ ₹ 1 ಕೋಟಿ ಬಹುಮಾನ

ಪ್ರಶಸ್ತಿ ಗೆದ್ದ ಭಾರತ ತಂಡಕ್ಕೆ ಕೇಂದ್ರ ಕ್ರೀಡಾ ಇಲಾಖೆ ₹ 1 ಕೋಟಿ ಬಹುಮಾನ ಘೋಷಿಸಿದೆ. ಈ ವಿಷಯವನ್ನು ಘೋಷಿಸಿದ ಕ್ರೀಡಾ ಸಚಿವ ಅನುರಾಗ್ ಠಾಕೂರ್ 'ಮಲೇಷ್ಯಾ, ಡೆನ್ಮಾರ್ಕ್ ಮತ್ತು ಇಂಡೊನೇಷ್ಯಾದಂಥ ಬಲಿಷ್ಠ ತಂಡಗಳನ್ನು ಮಣಿಸಿದ ಭಾರತ ಬ್ಯಾಡ್ಮಿಂಟನ್ ತಂಡ ಕ್ರೀಡಾ ಕ್ಷೇತ್ರದಲ್ಲಿ ವಿಶಿಷ್ಟ ಸಾಧನೆ ಮಾಡಿದೆ' ಎಂದು ಅಭಿಪ್ರಾಯಪಟ್ಟಿದ್ದಾರೆ.

'ಕಿದಂಬಿ ಶ್ರೀಕಾಂತ್ ಮತ್ತು ಎಚ್.ಎಸ್.ಪ್ರಣಯ್ ಅವರು ಆಡಿದ ಎಲ್ಲ ಪಂದ್ಯಗಳಲ್ಲೂ ಪಾರಮ್ಯ ಮೆರೆದಿದ್ದಾರೆ. ಆರು ಪಂದ್ಯಗಳ ಪೈಕಿ ಐದರಲ್ಲಿ ಡಬಲ್ಸ್ ವಿಭಾಗದಲ್ಲಿ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ನಿರ್ಣಾಯಕ ಹಂತಗಳಲ್ಲಿ ಪಾಯಿಂಟ್‌ಗಳನ್ನು ಗೆದ್ದುಕೊಂಡು ತಂಡದ ಗೆಲುವಿಗೆ ಕಾರಣರಾಗಿದ್ದಾರೆ. ಲಕ್ಷ್ಯ ಸೇನ್ ಫೈನಲ್‌ನಲ್ಲಿ ಮೊದಲ ಪಂದ್ಯ ಗೆದ್ದು ಭರವಸೆ ಮೂಡಿಸಿದ್ದರು' ಎಂದು ಅನುರಾಗ್ ಠಾಕೂರ್ ಹೇಳಿದ್ದಾರೆ.

ಬ್ಯಾಡ್ಮಿಂಟನ್ ಸಂಸ್ಥೆಯಿಂದ ₹ 1 ಕೋಟಿ: ತಂಡದ ಆಟಗಾರರಿಗೆ ಒಟ್ಟು ₹ 1 ಕೋಟಿ ನೀಡುವುದಾಗಿ ಭಾರತ ಬ್ಯಾಡ್ಮಿಂಟನ್ ಸಂಸ್ಥೆಯ ಅಧ್ಯಕ್ಷ ಹಿಮಾಂತ ಬಿಸ್ವ ಶರ್ಮಾ ತಿಳಿಸಿದ್ದಾರೆ. ನೆರವು ಸಿಬ್ಬಂದಿಗೆ ಒಟ್ಟು ₹ 20 ಲಕ್ಷ ನೀಡಲಾಗುವುದು ಎಂದು ಅವರು ತಿಳಿಸಿದ್ದಾರೆ.

ಅಬ್ದುಲ್ ವಾಹಿದ್ ತನ್ವೀರ್ (ಎಡದಿಂದ ಎರಡನೆಯವರು), ಸಾಮ್ಯುಯಲ್ ಜಾಕೊಬ್ (ಬಲತುದಿ), ಮೂರನೇ ಸ್ಥಾನ ಪಡೆದ ಆರ್. ನಟರಾಜ್ (ಎಡದಿಂದ ಮೊದಲನೆಯವರು ಅವರಿಗೆ ನಗದು ಪುರಸ್ಕಾರ, ಟ್ರೋಫಿ ವಿತರಿಸಲಾಯಿತು

ರ‍್ಯಾಲಿ: ತನ್ವೀರ್‌ಗೆ ಅಗ್ರಸ್ಥಾನ

ಚಿಕ್ಕಮಗಳೂರು: ಎಂಆರ್‌ಎಫ್ ಮ್ಯಾಗ್ರಿಪ್ ಎಫ್‌ಎಂಎಸ್‌ಸಿಐ ನ್ಯಾಷನಲ್ ರ‍್ಯಾಲಿ ಚಾಂಪಿಯನ್‌ಷಿಪ್– 2 ಡಬ್ಲ್ಯು ಬೈಕ್ ಸ್ಟೇಜ್ ರ‍್ಯಾಲಿಯ ಮೊದಲ ಸುತ್ತಿನಲ್ಲಿ ಟಿವಿಎಸ್ ರೇಸಿಂಗ್ ತಂಡದ ಹೊಸೂರಿನ ಅಬ್ದುಲ್ ವಾಹಿದ್ ತನ್ವೀರ್ ಭಾನುವಾರ ಅಗ್ರಸ್ಥಾನ ಗಳಿಸಿದರು. ವಸಂತ ಮತ್ತು ತಿಪ್ಪನಹಳ್ಳಿ ಎಸ್ಟೇಟ್‌ನಲ್ಲಿ ನಾಲ್ಕು ಹಂತದಲ್ಲಿ ಒಟ್ಟು 138 ಕಿ.ಮಿ ದೂರವನ್ನು 53 ನಿಮಿಷ 43 ಸೆಕೆಂಡುಗಳಲ್ಲಿ ಕ್ರಮಿಸಿ ತನ್ವೀರ್ ಮೊದಲ ಸ್ಥಾನ ತಮ್ಮದಾಗಿಸಿಕೊಂಡರು. ಸಾಮ್ಯುಯಲ್ ಜಾಕೊಬ್ (54 ನಿ. 44 ಸೆ.) ದ್ವಿತೀಯ ಹಾಗೂ ಆರ್.ನಟರಾಜ್ (55 ನಿ. 10 ಸೆ.) ತೃತೀಯ ಸ್ಥಾನ ಗಳಿಸಿದರು.

ಕನ್ಷವ್, ಅಂಜಲಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಗ್ರ ಶ್ರೇಯಾಂಕದ ಎದುರಾಳಿಗಳನ್ನು ಮಣಿಸಿದ ಕನ್ಷವ್ ನಾನಾವತಿ ಮತ್ತು ಅಂಜಲಿ ಸೆಮ್ವಲ್, ಭಾನುವಾರ ಕೊನೆಗೊಂಡ ಸೆಂಚುರಿ ಬೆಂಗಳೂರು ಸ್ಕ್ವಾಷ್ ಓಪನ್ ಟೂರ್ನಿಯಲ್ಲಿ ಕ್ರಮವಾಗಿ ಪುರುಷ ಮತ್ತು ಮಹಿಳೆಯರ ವಿಭಾಗದ ಪ್ರಶಸ್ತಿ ಗೆದ್ದುಕೊಂಡರು.

ಪುರುಷರ ವಿಭಾಗದ ಫೈನಲ್‌ನಲ್ಲಿ ಕನ್ಷವ್ 11-6, 11-6, 11-7ರಲ್ಲಿ ನವನೀತ್ ಪ್ರಭು ವಿರುದ್ಧ ಜಯ ಗಳಿಸಿದರು. ಮಹಿಳೆಯರ ವಿಭಾಗದ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಅಂಜಲಿ 5-11, 11-7, 11-0, 11-6ರಲ್ಲಿ ಸುನಿತಾ ಪಟೇಲ್ ವಿರುದ್ಧ ಗೆದ್ದರು.

ಕನ್ಷವ್ ನಾನಾವತಿ ಅವರ ಆಟದ ಭಂಗಿ –ಪ್ರಜಾವಾಣಿ ಚಿತ್ರ

1. 10ಕೆ ಎಲೀಟ್ ಮಹಿಳೆಯರ ವಿಭಾಗದಲ್ಲಿ ಚಿನ್ನ ಗೆದ್ದ ಐರಿನ್ ಚೆಪ್ಟಾಯ್ ಮತ್ತು ಬೆಳ್ಳಿ ಜಯಿಸಿದ ಹೆಲೆನ್ ಒಬಿರಿ. 2. ಎಲೀಟ್ ಪುರುಷರ ವಿಭಾಗದಲ್ಲಿ ಚಿನ್ನ ಗೆದ್ದ ನಿಕೋಲಸ್ ಕಿಪ್ಕೊರಿರ್ ಕಿಮೇಲಿ. 3.ಮಜಾ ರನ್‌ನಲ್ಲಿ ಭಾಗವಹಿಸಿದ್ದ ನಟ ಪುನೀತ್ ರಾಜ್‌ಕುಮಾರ್ ಅಭಿಮಾನಿಯ ಸಂಭ್ರಮ. 4. ಮಗುವಿನೊಂದಿಗೆ ಸ್ಪರ್ಧೆಯಲ್ಲಿ ಪಾಲ್ಗೊಂಡ ಮಹಿಳೆ. 5. ಭಾರತೀಯ ಎಲೀಟ್ ಪುರುಷರ ವಿಭಾಗದಲ್ಲಿ ಚಿನ್ನ ಗೆದ್ದ ಅಭಿಷೇಕ್ ಪಾಲ್ 6. ಭಾರತೀಯ ಎಲೀಟ್ ಮಹಿಳೆಯರ ಓಟದಲ್ಲಿ ಚಿನ್ನ ಜಯಿಸಿದ ಪಾರುಲ್ ಯಾದವ್– ಪ್ರಜಾವಾಣಿ ಚಿತ್ರಗಳು/ ರಂಜು ಪಿ.

ಟಿಸಿಎಸ್ ಬೆಂಗಳೂರು ವಿಶ್ವ ಟೆನ್–ಕೆ; ಕೆನ್ಯಾ ಅಥ್ಲೀಟ್‌ಗಳ ಪ್ರಾಬಲ್ಯ

ನಿಕೊಲಸ್, ಐರಿನ್‌ಗೆ ದಾಖಲೆಯ ಸಂಭ್ರಮ

• ಬಸವರಾಜ ದಳವಾಯಿ

ಬೆಂಗಳೂರು: ಉದ್ಯಾನನಗರಿಯಲ್ಲಿ ಭಾನುವಾರ ಮುಂಜಾವು ಸುರಿದ ತುಂತುರು ಮಳೆಯು ಅಥ್ಲೀಟ್‌ಗಳ ಉತ್ಸಾಹಕ್ಕೆ ತಣ್ಣೀರೆರಚಲಿಲ್ಲ. ವಿಶ್ವದ ಹಲವೆಡೆಯಿಂದ ಬಂದು ಸೇರಿದ್ದ ಸಾವಿರಾರು ಸ್ಪರ್ಧಿಗಳು ಕಂಠೀರವ ಕ್ರೀಡಾಂಗಣದಲ್ಲಿ ಬೆಂಗಳೂರು ವಿಶ್ವ ಟೆನ್ ಕೆ ಓಟದ ಸಂಭ್ರಮದ ಮಳೆಯಲ್ಲಿ ಮಿಂದರು.

ಕೆನ್ಯಾದ ನಿಕೋಲಸ್ ಕಿಪ್ಕೊರಿರ್ ಕಿಮೇಲಿ ಮತ್ತು ಐರಿನ್ ಚೆಪ್ಟಾಯ್ ಅವರು ಟಾಟಾ ಕನ್ಸಲ್ಟನ್ಸಿ ಸರ್ವಿಸಸ್ (ಟಿಸಿಎಸ್) ಆಯೋಜಿಸಿದ್ದ ಸ್ಪರ್ಧೆಯಲ್ಲಿ ದಾಖಲೆಯೊಂದಿಗೆ ಚಿನ್ನದ ಪದಕಗಳಿಗೆ ಮುತ್ತಿಕ್ಕಿದರು.

ವಿಶ್ವ ಅಥ್ಲೆಟಿಕ್ಸ್ ಎಲೀಟ್ ಸ್ಪರ್ಧೆಯ ಪುರುಷರ ವಿಭಾಗದಲ್ಲಿ 10 ಕಿ.ಮೀ ದೂರವನ್ನು ನಿಕೋಲಸ್ 27 ನಿಮಿಷ 38 ಸೆಕೆಂಡುಗಳಲ್ಲಿ ತಲುಪಿದರು. ಇದರೊಂದಿಗೆ 2014ರಲ್ಲಿ ತಮ್ಮದೇ ದೇಶದ ಜಾಫ್ರಿ ಕಮ್‌ವೊರೊರ್ (27.44) ಸ್ಥಾಪಿಸಿದ್ದ ದಾಖಲೆಯನ್ನು ಮೀರಿದರು.

ಮಹಿಳೆಯರ ವಿಭಾಗದಲ್ಲಿ ಐರಿನ್ 30 ನಿಮಿಷ 35 ಸೆಕೆಂಡುಗಳ ಸಾಧನೆಯ ಮೂಲಕ 2018ರಲ್ಲಿ ಕೆನ್ಯಾದವರೇ ಆದ ಆ್ಯಗ್ನೆಸ್ ಟೈರಪ್ (31.19) ನಿರ್ಮಿಸಿದ್ದ ದಾಖಲೆಯನ್ನು ಹಿಂದಿಕ್ಕಿದರು.

ಟೋಕಿಯೊ ಒಲಿಂಪಿಕ್ಸ್‌ನ 5000 ಮೀಟರ್ ಓಟದಲ್ಲಿ ನಾಲ್ಕನೇ ಸ್ಥಾನ ಗಳಿಸಿದ್ದ ಕಿಪ್ಕೊರಿರ್, ಇಲ್ಲಿ, ಇಥಿಯೋಪಿಯಾದ ಟಡೆಸೆ ವೊರ್ಕು ಅವರನ್ನು ಹಿಂದಿಕ್ಕಿದರು. ಟಡೆಸೆ 20 ವರ್ಷದೊಳಗಿನವರ ವಿಶ್ವ 10 ಕಿ.ಮೀ. ಓಟದಲ್ಲಿ ಹಾಲಿ ಚಾಂಪಿಯನ್ ಆಗಿದ್ದಾರೆ. ಈ ಸ್ಪರ್ಧೆಯ ಆರಂಭದಿಂದ ಐದು ಕಿಲೋ ಮೀಟರ್‌ವರೆಗೆ ಮುನ್ನಡೆಯಲ್ಲಿದ್ದ ಕೆನ್ಯಾದ ರೆನಾಲ್ಡ್ ಕಿಪ್ಕೊರಿರ್ ಒಂಬತ್ತನೇ ಸ್ಥಾನ ಗಳಿಸಿದರು.

ಕೆನ್ಯಾದ ಕಿಬಿವೊಟ್ ಕ್ಯಾಂಡಿ ಮೂರನೇ ಸ್ಥಾನ ಗಳಿಸಿದರು. ಪದಕದ ನಿರೀಕ್ಷೆ ಹುಟ್ಟುಹಾಕಿದ್ದ ಇಥಿಯೋಪಿಯಾದ ಮುಖ್ತಾರ್ ಇದ್ರಿಸ್ ಮತ್ತು ಅಂಡಮಾಕ್ ಬೆಲಿಹು ಕ್ರಮವಾಗಿ ಏಳು ಮತ್ತು 12ನೇ ಸ್ಥಾನ ಗಳಿಸಿದರು.

ಮಹಿಳೆಯರ ವಿಭಾಗದಲ್ಲಿ ಆರಂಭದಲ್ಲಿ ಐರಿನ್, ಕೆನ್ಯಾದವರೇ ಆದ ಹೆಲೆನ್ ಒಬಿರಿ ಮತ್ತು ಜಾಯ್ಸ್ ಟೆಲಿ ಮುನ್ನಡೆ ಸಾಧಿಸಿದ್ದರು. ಐದು ಕಿ.ಮೀ. ಬಳಿಕ ಟೆಲಿ ಭಾರೀ ಅಂತರದಿಂದ ಹಿಂದುಳಿದರೆ, ಐರಿನ್ ಮತ್ತು ಒಬಿರಿ ಮುನ್ನಡೆ ಕಾಯ್ದುಕೊಂಡರು.

ಇಬ್ಬರ ಮಧ್ಯೆ ನಡೆದ ಜಿದ್ದಾಜಿದ್ದಿನ ಪೈಪೋಟಿಯಲ್ಲಿ ಅಂತಿಮವಾಗಿ ಐರಿನ್ ಚಿನ್ನ ಗೆಲ್ಲುವಲ್ಲಿ ಯಶಸ್ವಿಯಾದರು.

ಎಲೀಟ್ ಭಾರತೀಯರ ವಿಭಾಗದಲ್ಲಿ ಅಭಿಷೇಕ್ ಪಾಲ್ ಮತ್ತು ಪಾರುಲ್ ಚೌಧರಿ ಕ್ರಮವಾಗಿ ಪುರುಷ ಮತ್ತು ಮಹಿಳೆಯರ ವಿಭಾಗದಲ್ಲಿ ಕ್ರಮವಾಗಿ ಅಗ್ರಸ್ಥಾನ ಗಳಿಸಿದರು.

ಫಲಿತಾಂಶಗಳು: ಎಲೀಟ್ ಪುರುಷರು: ನಿಕೋಲಸ್ ಕಿಪ್ಕೊರಿರ್ ಕಿಮೇಲಿ (ಕೆನ್ಯಾ)–1, ಕಾಲ: 27 ನಿಮಿಷ 38 ಸೆಕೆಂಡುಗಳು (ಕೂಟ ದಾಖಲೆ) ಟಡೆಸೆ ವೊರ್ಕು (ಇಥಿಯೋಪಿಯಾ)–2, ಕಿಬಿವೊಟ್ ಕ್ಯಾಂಡಿ (ಕೆನ್ಯಾ)–3. (ಈ ಹಿಂದಿನ ದಾಖಲೆಯನ್ನು ಕೆನ್ಯಾದ ಜಾಫ್ರಿ ಕಮ್‌ವೊರೊರ್ 2014ರಲ್ಲಿ (27 ನಿ. 44 ಸೆಕೆಂಡು) ಸ್ಥಾಪಿಸಿದ್ದರು); ಎಲೀಟ್ ಮಹಿಳೆಯರು: ಐರಿನ್ ಚೆಪ್ಟಾಯ್ (ಕೆನ್ಯಾ)–1, ಕಾಲ: 30 ನಿಮಿಷ 35 ಸೆಕೆಂಡುಗಳು (ಕೂಟ ದಾಖಲೆ), ಹೆಲೆನ್ ಒಬಿರಿ (ಕೆನ್ಯಾ)–2, ಜಾಯ್ಸ್ ಟೆಲೆ (ಕೆನ್ಯಾ)–3. (ಈ ಹಿಂದಿನ ದಾಖಲೆಯನ್ನು (31.19) 2018ರಲ್ಲಿ ಎಗ್ನೆಸ್ ಟೈರಪ್ ನಿರ್ಮಿಸಿದ್ದರು); ಭಾರತೀಯರ ವಿಭಾಗ: ಪುರುಷರು: ಅಭಿಷೇಕ್ ಪಾಲ್–1, ಕಾಲ: 30 ನಿಮಿಷ 5 ಸೆಕೆಂಡುಗಳು, ಕಾರ್ತಿಕ್ ಕುಮಾರ್–2, ಗುಲ್‌ವೀರ್ ಸಿಂಗ್–3; ಮಹಿಳೆಯರು: ಪಾರುಲ್ ಚೌಧರಿ–1, ಕಾಲ: 34 ನಿಮಿಷ 38 ಸೆಕೆಂಡುಗಳು, ಸಂಜೀವನಿ ಜಾಧವ್–2, ಕೋಮಲ್ ಜಗದಾಳೆ–3.

ಕ್ಲೀನ್‌ಸ್ವೀಪ್ ಮಾಡಿದ ಭಾರತದ ಶೂಟರ್‌ಗಳು

ನವದೆಹಲಿ(ಪಿಟಿಐ): ಐಎಸ್‌ಎಸ್‌ಎಫ್ ಜೂನಿಯರ್ ವಿಶ್ವಕಪ್ ಶೂಟಿಂಗ್ ಮಹಿಳೆಯರ 25 ಮೀಟರ್ಸ್ ಪಿಸ್ತೂಲ್ ವಿಭಾಗದಲ್ಲಿ ಭಾರತ ತಂಡವು ಪದಕಗಳ ಕ್ಲೀನ್‌ಸ್ವೀಪ್ ಮಾಡಿದೆ.

ಜರ್ಮನಿಯ ಸುಹ್ಲ್‌ನಲ್ಲಿ ನಡೆಯುತ್ತಿರುವ ಟೂರ್ನಿಯ ಈ ವಿಭಾಗದಲ್ಲಿ ಭಾನುವಾರ ರಿಧಮ್ ಸಂಗ್ವಾನ್ ಚಿನ್ನ, ಮನು ಭಾಕರ್ ಬೆಳ್ಳಿ ಮತ್ತು ನಾಮಾ ಕಪೂರ್ ಕಂಚು ಜಯಿಸಿದರು. ಪುರುಷರ 50 ಮೀ. ರೈಫಲ್ ತ್ರಿ ಪೊಸಿಷನ್ಸ್‌ನಲ್ಲಿ ಶಿವಂ ದಬಾಸ್ ಬೆಳ್ಳಿ ಪದಕ ಜಯಿಸಿದರು. ಫೈನಲ್‌ನಲ್ಲಿ ಅವರು 15–17ರಿಂದ ಇಟಲಿಯ ಡ್ಯಾನಿಲೊ ಸೊಲಾಜ್ಜೊ ಎದುರು ಎಡವಿದರು.

ಮಿನಿ ಒಲಿಂಪಿಕ್ಸ್‌ಗೆ ಇಂದು ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಲಿಕಾನ್ ಸಿಟಿಯಲ್ಲಿ ಸೋಮವಾರದಿಂದ ಬಾಲ ಅಥ್ಲೀಟ್‌ಗಳ ಕಲರವ ಮೊಳಗಲಿದೆ. ರಾಜ್ಯ ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ಒಲಿಂಪಿಕ್ ಸಂಸ್ಥೆ (ಕೆಒಎ) ಜಂಟಿಯಾಗಿ ಆಯೋಜಿಸುತ್ತಿರುವ ಎರಡನೇ ಮಿನಿ ಒಲಿಂಪಿಕ್ಸ್ ಆರಂಭವಾಗಲಿದೆ.

14 ವರ್ಷದೊಳಗಿನವರ ವಿಭಾಗದ ಈ ಕೂಟಕ್ಕೆ ಸೋಮವಾರ ಸಂಜೆ ಕಂಠೀರವ ಕ್ರೀಡಾಂಗಣದಲ್ಲಿ ನಡೆಯುವ ಸಮಾರಂಭದಲ್ಲಿ ಚಾಲನೆ ದೊರೆಯಲಿದೆ. ಇದೇ 22ರವರೆಗೆ ಕೂಟ ನಡೆಯಲಿದೆ.

2020ರ ಫೆಬ್ರುವರಿಯಲ್ಲಿ ಮೊದಲ ಮಿನಿ ಒಲಿಂಪಿಕ್ಸ್ ರಾಜ್ಯದಲ್ಲಿ ನಡೆದಿತ್ತು.

ಮಿನಿ ಒಲಿಂಪಿಕ್ ಕೂಟದಲ್ಲಿ ಅಥ್ಲೆಟಿಕ್ಸ್, ಆರ್ಚರಿ, ಬ್ಯಾಡ್ಮಿಂಟನ್, ಬ್ಯಾಸ್ಕೆಟ್‌ಬಾಲ್, ಬಾಕ್ಸಿಂಗ್, ಸೈಕ್ಲಿಂಗ್, ಫೆನ್ಸಿಂಗ್, ಫುಟ್‌ಬಾಲ್, ಜಿಮ್ನಾಸ್ಟಿಕ್ಸ್, ಹ್ಯಾಂಡ್‌ಬಾಲ್, ಹಾಕಿ, ಜುಡೊ, ಕೊಕ್ಕೊ, ಟೆನಿಸ್, ನೆಟ್‌ಬಾಲ್, ರೈಫಲ್ ಶೂಟಿಂಗ್, ಈಜು, ಟೇಬಲ್ ಟೆನಿಸ್, ಟೆಕ್ವಾಂಡೊ, ವೇಟ್‌ಲಿಫ್ಟಿಂಗ್, ವುಷು ನಡೆಯಲಿವೆ. ಕಂಠೀರವ ಕ್ರೀಡಾಂಗಣ, ವಿದ್ಯಾನಗರದಲ್ಲಿ ಕ್ರೀಡಾಶಾಲೆಯ ಮೈದಾನ, ಭಾರತ ಕ್ರೀಡಾ ಪ್ರಾಧಿಕಾರದ ಶೂಟಿಂಗ್ ರೇಂಜ್ , ರಾಜ್ಯ ಫುಟ್‌ಬಾಲ್ ಸಂಸ್ಥೆ ಕ್ರೀಡಾಂಗಣ, ಹೂಡಿ ಗೋಪಾಲನ್ ಸ್ಪೋರ್ಟ್ಸ್ ಸೆಂಟರ್, ಬಸವನಗುಡಿ ಈಜು ಕೇಂದ್ರ ಮತ್ತು ಶಾಂತಿನಗರದ ಹಾಕಿ ಕ್ರೀಡಾಂಗಣದಲ್ಲಿ ವಿವಿಧ ಸ್ಪರ್ಧೆಗಳು ಆಯೋಜನೆಯಾಗಿವೆ.

ಪ್ರತಿ ಜಿಲ್ಲೆಯಿಂದ ಬಾಲಕ ಮತ್ತು ಬಾಲಕಿಯರ ವಿಭಾಗಗಳಲ್ಲಿ ಎಂಟು ತಂಡಗಳು ಅಥವಾ ಎಂಟು ಮಂದಿ ಪಾಲ್ಗೊಳ್ಳಲು ಅವಕಾಶವಿದೆ. ಒಟ್ಟು 3,200 ಕ್ರೀಡಾಪಟುಗಳು ಮತ್ತು 600ಕ್ಕೂ ಹೆಚ್ಚು ತಾಂತ್ರಿಕ ಅಧಿಕಾರಿಗಳು ಮತ್ತು ಕೋಚ್‌ಗಳು ಕ್ರೀಡಾಕೂಟದ ಭಾಗವಾಗಲಿದ್ದಾರೆ. ಕೂಟದ ಮೊದಲ ದಿನವಾದ ಸೋಮವಾರ ಆರ್ಚರಿ, ಬಾಕ್ಸಿಂಗ್, ಹಾಕಿ, ಲಾನ್ ಟೆನಿಸ್, ನೆಟ್‌ಬಾಲ್, ಟೇಬಲ್ ಟೆನಿಸ್ ಮತ್ತು ವುಷು ಸ್ಪರ್ಧೆಗಳು ನಿಗದಿಯಾಗಿವೆ.

ಬುದ್ಧಾನ್ವೇಷಣೆಗೆ ಸಾಧನೆಯ ದಾರಿ

• ಆನಂದ ಭಂತೆ

ಇಂದು ಬುದ್ಧ ಪೂರ್ಣಿಮಾ

ಒಮ್ಮೆ ಭಗವಾನ್ ಬುದ್ಧರು ಅನಾಥಪಿಂಡಕನ ಚೇತವನದಲ್ಲಿ ತಂಗಿದ್ದರು. ಬುದ್ಧ ತೇವಿಜ್ಜ ಸಂಪನ್ನರು; ಎಂದರೆ ಮೂರು ಪರಮಜ್ಞಾನಗಳ ಒಡೆಯರು, ಆ ಮೂರು ಯಾವುವೆಂದರೆ: 1. ಪೂರ್ವಜನ್ಮಗಳ ಸ್ಮರಣೆಯ ಜ್ಞಾನ (ಪುಬ್ಬೇನಿವಾಸಾನುಸ್ಸತಿ); 2. ದಿವ್ಯಚಕ್ಷುವಿನಿಂದ ಬೇರೆ ಜೀವಿಗಳ ಮನಸ್ಸನ್ನು, ಅವುಗಳ ಇಡೀ ಜೀವನವನ್ನು ಅರಿತಿರುವ ಜ್ಞಾನ (ಚೇತೋಪರಿಯ ಜ್ಞಾನ); 3. ಚತುರಾರ್ಯಸತ್ಯಗಳ ಭೂಮಿಕೆಯಾದ ಆಸವಕ್ಖಯ ಜ್ಞಾನ.

ಆಸವಗಳು ಎಂದರೆ ಮನುಷ್ಯನನ್ನು ಕಾಡಿಸುವ ಕಾಮ; ಅವನ ಮಿಥ್ಯಾದೃಷ್ಟಿಗಳು; ಬೇಕುಬೇಕೆಂಬ – ಇರಬೇಕೆಂಬ 'ಭವ'; ಮತ್ತು ಈ ಸಂಸಾಚಕ್ರದಿಂದ ಹೊರಬರಲಾರದ 'ಅಜ್ಞಾನ' ಮೈತುಂಬಿಕೊಂಡಿರುವುದು – ಈ ನಾಲ್ಕನ್ನು ಆಸವಗಳು ಎನ್ನುತ್ತಾರೆ. ಆಸವಕ್ಖಯ (ಕ್ಷಯ) ಎಂದರೆ ಇವೆಲ್ಲವನ್ನೂ ನಾಶ ಮಾಡುವ ಜ್ಞಾನ. ಭಗವಾನ್ ಬುದ್ಧರು ಇಂತಹ ಸಮ್ಮಾಸಂಬುದ್ಧರು.

ಒಂದು ದಿನ ಭಗವಾನರು, ಚೇತವನದಲ್ಲಿದ್ದ ಭಿಕ್ಖುಗಳಿಗೆ, 'ಅಯ್ಯಾ, ಭಿಕ್ಖುಗಳೇ, ನೀವು ತಥಾಗತನಾದ ನನ್ನನ್ನು – ನಾನು ಸಮ್ಮಾಸಂ ಬುದ್ಧನೋ ಅಲ್ಲವೋ – ಎಂಬುದನ್ನು ಪರೀಕ್ಷಿಸಬೇಕು' ಎಂದರು. ಈ ರೀತಿ ಗುರುವನ್ನು ಪ್ರಶ್ನಿಸಿ ಎಂದು ಒಬ್ಬ ಗುರುವು ಹೇಳುವುದು ಧಾರ್ಮಿಕ ವಲಯದಲ್ಲಿ ಒಂದು ವಿಸ್ಮಯಕಾರಿ ಸಂಗತಿ. ಪ್ರತಿಯೊಂದನ್ನೂ ಪ್ರಶ್ನಿಸಿಯೇ ನೋಡಿ ಎನ್ನುವ ಮುಕ್ತ ಚಿಂತೆಯ ಧಾರೆ ಅವರದ್ದು.

ಒಮ್ಮೆ ಅವರು ಕೇಸಪುತ್ತ ಎನ್ನುವ ಗ್ರಾಮಕ್ಕೆ ಹೋದಾಗ ಅಲ್ಲಿನ ಕಾಲಾಮಾರು (ಒಂದು ಬಗೆಯ ಸಮುದಾಯದವರು) ಬುದ್ಧನನ್ನು ಕುರಿತು 'ನೋಡಿ, ಇಲ್ಲಿಗೆ ಆಜೀವಕರು, ಬ್ರಾಹ್ಮಣರು ಮುಂತಾದವರು ಬಂದು ತಮ್ಮ ತಮ್ಮ ಮತದ ಬಗ್ಗೆ ಪ್ರತಿಪಾದನೆ ಮಾಡುತ್ತಾರೆ, ಮತ್ತು ಈಗ ನೀವು ನಿಮ್ಮ ಧಮ್ಮದ ಬಗ್ಗೆ ಹೇಳುತ್ತಿದ್ದಿರಿ. ಹಾಗಾದರೆ ನಾವು ಯಾರ ಮಾತನ್ನು ನಂಬಬೇಕು' ಎಂದು ಪ್ರಶ್ನಿಸುತ್ತಾರೆ. ಆಗ ಬುದ್ಧ ಹೇಳುವ ಮಾತುಗಳು ರೋಚಕವಾಗಿವೆ:

'ಮತ್ತೆ ಮತ್ತೆ ಈ ಮಾತುಗಳನ್ನು ಕೇಳಿದ್ದೇವೆ ಎಂಬ ಕಾರಣಕ್ಕಾಗಿ ನಂಬಬೇಡಿ; ಪರಂಪರಾನುಗತವಾಗಿ ಬಂದಿದೆ ಎಂಬ ಕಾರಣಕ್ಕಾಗಿ ನಂಬಬೇಡಿ; ತರ್ಕಬದ್ಧವಾಗಿದೆ ಎಂಬ ಕಾರಣಕ್ಕಾಗಿ ನಂಬಬೇಡಿ; ಧರ್ಮಗ್ರಂಥಗಳಲ್ಲಿದೆ ಎಂಬ ಕಾರಣಕ್ಕಾಗಿ ನಂಬಬೇಡಿ; ನನ್ನ ಮತ್ತು ಇತರರ ಚಿಂತನೆಗಳು ಒಂದೇ ಇದೆ ಎಂಬ ಕಾರಣಕ್ಕಾಗಿ ನಂಬಬೇಡಿ; ಭವ್ಯವಾಗಿದೆ ಎಂಬ ಕಾರಣಕ್ಕಾಗಿ ನಂಬಬೇಡಿ; ಇವರು ನಮ್ಮ ಗುರುವು ಎಂಬ ಕಾರಣಕ್ಕಾಗಿ ನಂಬಬೇಡಿ' – ಎಂದು ಹೇಳುತ್ತ, ಯಾವಾಗ ನಂಬಬೇಕು ಮತ್ತು ಅನುಸರಿಸಬೇಕು ಎನ್ನುವುದನ್ನು ಹೀಗೆ ಹೇಳುತ್ತಾರೆ:

'ಯಾವಾಗ ಈ ಸಂಗತಿಗಳನ್ನು/ಗುಣಗಳನ್ನು ನೀವು ಪ್ರಜ್ಞಾಪೂರ್ವಕವಾಗಿ ವಿಶ್ಲೇಷಿಸಿ, ಅವು ನಿಮ್ಮ ಮತ್ತು ಎಲ್ಲರ ಒಳಿತಿಗಾಗಿ ಇವೆ ಎಂದು ಕಂಡುಬರುತ್ತದೋ ಆಗ ಅವನ್ನು ಒಪ್ಪಿ, ಅನುಸರಿಸಬೇಕು.'

ಇಲ್ಲಿ ನಾವು ಗಮನಿಸಬೇಕಾದ್ದು, ಸಮ್ಮಾಬುದ್ಧನನ್ನು ಪರೀಕ್ಷಿಸುವವರು ಶೀಲಪಾಲನೆಯಲ್ಲಿ ಇರುವವರಾಗಿರಬೇಕು, ನಿರಂತರ ಎಚ್ಚರದ ಪ್ರಜ್ಞೆಯಲ್ಲಿರುವವರಾಗಿರಬೇಕು, ಧ್ಯಾನ ಸಾಧನೆಯ ಆವರಣದಲ್ಲಿರುವವರಾಗಿರಬೇಕು; ಧ್ಯಾನದಿಂದ ಪ್ರಾಪ್ತ ಅಭಿಜ್ಞಾನಗಳಿಂದ ಕೂಡಿದವರಾಗಿರಬೇಕು, ಸಾಧನೆಯ ಬುನಾದಿಯ ಮೇಲೆ ಚಾರಿತ್ರ್ಯವನ್ನು ನಿಲ್ಲಿಸಿಕೊಂಡಿರುವವರಾಗಿರಬೇಕು, ಧಮ್ಮ ನದಿಯಲ್ಲಿ ಮುಳುಗಿರುವವರಾಗಿರಬೇಕು.

ಹೀಗೆ ಬುದ್ಧ ಮತ್ತು ಬುದ್ಧತ್ವದ ಅನ್ವೇಷಣೆ – ಎರಡೂ ಜೊತೆ ಜೊತೆಯಲ್ಲಿಯೇ ಇರುವ ವಿವರಗಳು.

(ಲೇಖಕರು ಬೆಂಗಳೂರು ಮಹಾಬೋಧಿ ಸೊಸೈಟಿಯ ಮುಖ್ಯಸ್ಥರು)

ಸೈಮಂಡ್ಸ್ ಸುತ್ತುವರಿದ ವಿವಾದಗಳು

ಸಿಡ್ನಿ/ನವದೆಹಲಿ (ಪಿಟಿಐ/ಎಎಫ್‌ಪಿ): ಅಜಾನುಬಾಹು ಕ್ರಿಕೆಟಿಗ ಆ್ಯಂಡ್ರೂ ಸೈಮಂಡ್ಸ್ ಸ್ಫೋಟಕ ಬ್ಯಾಟಿಂಗ್ ಶೈಲಿ ಬಲದಿಂದ ಆಸ್ಟ್ರೇಲಿಯಾ ತಂಡವು ಗೆದ್ದ ಪಂದ್ಯಗಳು ಹಲವಾರು.

ತುಟಿಗೆ ಬಿಳಿಕ್ರೀಮ್ ಬಳಿದುಕೊಂಡು, ಆಫ್ರಿಕನ್ ಕೇಶಶೈಲಿಯಲ್ಲಿ ಚಂಗನೆ ಚಿಗಿದು ಚೆಂಡನ್ನು ಕ್ಯಾಚ್ ಮಾಡುತ್ತಿದ್ದ ಮಿಂಚಿನ ವೇಗದ ಫೀಲ್ಡರ್ ಮತ್ತು ಆಫ್‌ಸ್ಪಿನ್ ಬೌಲಿಂಗ್ ಮೂಲಕ ಎದುರಾಳಿ ತಂಡಗಳಿಗೆ ನಡುಕ ಮೂಡಿಸಿದ್ದ ಪರ್ಫೆಕ್ಟ್ ಆಲ್‌ರೌಂಡರ್. ಆದರೆ, ಭಾರತದ ಕ್ರಿಕೆಟ್ ಅಭಿಮಾನಿಗಳಿಗೆ ಸೈಮಂಡ್ಸ್ ಎಂದರೆ ನೆನಪಾಗುವುದು 'ಮಂಕಿ ಗೇಟ್' ಪ್ರಕರಣ. 2008ರಲ್ಲಿ ಸಿಡ್ನಿಯಲ್ಲಿ ನಡೆದಿದ್ದ ಭಾರತ ಮತ್ತು ಆಸ್ಟ್ರೇಲಿಯಾ ನಡುವಣ ಟೆಸ್ಟ್‌ನಲ್ಲಿ ಈ ಪ್ರಕರಣ ನಡೆದಿತ್ತು.

ಆ ಪಂದ್ಯದಲ್ಲಿ ರಿಕಿ ಪಾಂಟಿಂಗ್ ನಾಯಕತ್ವದ ಬಳಗವು ಅನಿಲ್ ಕುಂಬ್ಳೆ ಬಳಗದ ವಿರುದ್ಧ ಮಾಡಿದ್ದ ತೆಗಳುವಿಕೆಯು (ಸ್ಲೆಡ್ಜಿಂಗ್) ಮುಗಿಲುಮುಟ್ಟಿತ್ತು. ಬಿಸಿಯೇರಿದ ವಾತಾವರಣದಲ್ಲಿ ಭಾರತದ ಆಫ್‌ಸ್ಪಿನ್ನರ್ ಹರಭಜನ್ ಸಿಂಗ್ ಮತ್ತು ಸೈಮಂಡ್ಸ್ ನಡುವೆ ಮಾತಿನ ಚಕಮಕಿ ನಡೆದಿತ್ತು. ಸೈಮಂಡ್ಸ್ ಅವರನ್ನು ಹರಭಜನ್ 'ಮಂಕಿ' ಎಂದು ನಿಂದಿಸಿದ್ದಾರೆ. ಇದು ಜನಾಂಗೀಯ ನಿಂದನೆ ಎಂದು ರಿಕಿ ಪಾಂಟಿಂಗ್ ದೂರು ನೀಡಿದ್ದರು. ಇದು ಬಹಳ ದೊಡ್ಡ ವಿವಾದಕ್ಕೆ ತಿರುಗಿತ್ತು. ಕ್ರಿಕೆಟ್ ಸ್ಲೆಡ್ಜಿಂಗ್‌ನಲ್ಲಿ ಅತ್ಯಂತ ಕುಖ್ಯಾತ ಪ್ರಕರಣ ಇದಾಗಿದೆ.

ಇದಾಗಿ ಮೂರು ವರ್ಷಗಳ ನಂತರ ಐಪಿಎಲ್ ಟೂರ್ನಿಯ ಸಂದರ್ಭದಲ್ಲಿ ಸೈಮಂಡ್ಸ್ ಖಾಸಗಿ ಪಾರ್ಟಿಯೊಂದರಲ್ಲಿ ಹರಭಜನ್ ಸಿಂಗ್ ಅವರನ್ನು ಆಲಂಗಿಸಿಕೊಂಡು ಹಿಂದೆ ನಡೆದ ಪ್ರಕರಣಕ್ಕೆ ಕ್ಷಮೆಯಾಚಿಸಿದ್ದು ಸುದ್ದಿಯಾಗಿತ್ತು. ಅದರ ನಂತರ ಅವರಿಬ್ಬರೂ ಸ್ನೇಹಿತರಾಗಿದ್ದರು.

ಮದ್ಯಪ್ರಿಯ ರಾಯ್: ಕ್ರಿಕೆಟ್ ವಲಯದಲ್ಲಿ 'ರಾಯ್' ಎಂದೇ ಚಿರಪರಿಚಿತರಾಗಿದ್ದ ಸೈಮಂಡ್ಸ್. ದೊಡ್ಡ ಸ್ನೇಹಿತರ ವಲಯವೂ ಇತ್ತು. ಅಲ್ಲದೇ ಮದ್ಯಪ್ರಿಯನೂ ಆಗಿದ್ದರು. ಆದರೆ 2005ರಲ್ಲಿ ಕಾರ್ಡಿಫ್‌ನಲ್ಲಿ ತ್ರಿಕೋನ ಸರಣಿ ನಡೆದ ಸಂದರ್ಭದಲ್ಲಿ ಬಾಂಗ್ಲಾ ಎದುರಿನ ಪಂದ್ಯದ ಹಿಂದಿನ ದಿನ ಸಂಜೆಯ ಅತಿಹಾಗಿ ಮದ್ಯ ಸೇವನೆ ಮಾಡಿದ್ದರು. ಇದರಿಂದಾಗಿ ಅವರನ್ನು ತಂಡದಿಂದ ಅಮಾನತು ಮಾಡಲಾಗಿತ್ತು.

ಮೀನು ಹಿಡಿಯಲು ಹೋಗಿದ್ದು: 2008ರಲ್ಲಿ ಆಸ್ಟ್ರೇಲಿಯಾದಲ್ಲಿಯೇ ನಡೆದಿದ್ದ ಬಾಂಗ್ಲಾದೇಶ ವಿರುದ್ಧದ ಏಕದಿನ ಸರಣಿಯ ಸಂದರ್ಭದಲ್ಲಿ ಅವರು ತಂಡದ ಸಭೆಗೆ ಗೈರುಹಾಜರಾಗಿ ಮೀನು ಹಿಡಿಯಲು ಹೋಗಿದ್ದು ದೊಡ್ಡ ಸುದ್ದಿಯಾಗಿತ್ತು.

ಆ್ಯಂಡ್ರೂ ಸೈಮಂಡ್ಸ್

ಪ್ರಶಸ್ತಿ ಜೊತೆ ಸ್ವಾಟೆಕ್ –ಎಎಫ್‌ಪಿ ಚಿತ್ರ

ಇಟಾಲಿಯನ್ ಓಪನ್: ನೊವಾಕ್, ಸ್ವಾಟೆಕ್‌ಗೆ ಪ್ರಶಸ್ತಿ

ರೋಮ್ (ಎಎಫ್‌ಪಿ): ಸರ್ಬಿಯಾದ ನೊವಾಕ್ ಜೊಕೊವಿಚ್ ಅವರು ಇಟಾಲಿಯನ್ ಓಪನ್ ಟೆನಿಸ್ ಟೂರ್ನಿಯಲ್ಲಿ ಆರನೇ ಪ್ರಶಸ್ತಿ ಗೆದ್ದುಕೊಂಡರು. ಮಹಿಳೆಯರ ವಿಭಾಗದಲ್ಲಿ ಪೋಲೆಂಡ್‌ನ ಇಗಾ ಸ್ವಾಟೆಕ್ ಸತತ ಐದನೇ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ಭಾನುವಾರ ನಡೆದ ಫೈನಲ್‌ನಲ್ಲಿ ಜೊಕೊವಿಚ್ 6-0, 7-6 (7/5)ರಲ್ಲಿ ಗ್ರೀಸ್‌ನ ಸ್ಟೆಫನೊಸ್ ಸಿಟ್ಸಿಪಸ್ ವಿರುದ್ಧ ಜಯ ಗಳಿಸಿದರು. ಸ್ವಾಟೆಕ್ 6-2, 6-2ರಲ್ಲಿ ಟುನಿಷಿಯಾದ ಒನ್ಸ್ ಜಬೆವುರ್ ಅವರನ್ನು ಮಣಿಸಿದರು. ಈ ಮೂಲಕ ಸತತ 28 ಪಂದ್ಯಗಳನ್ನು ಗೆದ್ದ ಸಾಧನೆ ಮಾಡಿದರು.

'ರಷ್ಯಾ ಆಕ್ರಮಣ ಕುಂಠಿತ'

ಬರ್ಲಿನ್ (ಎಪಿ): 'ಉಕ್ರೇನ್‌ನಲ್ಲಿ ರಷ್ಯಾ ಸೇನಾ ಕಾರ್ಯಾಚರಣೆಯು ಕುಂಠಿತವಾಗುತ್ತಿದೆ. ಉಕ್ರೇನ್ ಯುದ್ಧ ಜಯಿಸಬಹುದು' ಎಂದು ನ್ಯಾಟೊದ ಹಿರಿಯ ಅಧಿಕಾರಿ ಹೇಳಿದ್ದಾರೆ.

'ಕೀವ್ ಗೆಲ್ಲಲು ರಷ್ಯಾ ವಿಫಲವಾಗಿದೆ. ಹಾರ್ಕಿವ್‌ನಿಂದಲೂ ಹಿಂದೆ ಸರಿಯುತ್ತಿದೆ. ಡಾನ್‌ಬಾಸ್‌ನಲ್ಲೂ ಆಕ್ರಮಣ ಸ್ಥಗಿತಗೊಂಡಿದೆ' ಎಂದು ನ್ಯಾಟೊ ಪ್ರಧಾನ ಕಾರ್ಯದರ್ಶಿ ಜೆನ್ಸ್ ಸ್ಟೋಲ್ಟೆನ್‌ಬರ್ಗ್ ಭಾನುವಾರ ತಿಳಿಸಿದ್ದಾರೆ.

ಸ್ವೀಡನ್ ಜತೆಗೆ ಫಿನ್ಲೆಂಡ್ ಕೂಡ ನ್ಯಾಟೊ ಸದಸ್ಯತ್ವ ಪಡೆಯುವುದಾಗಿ ಅಧ್ಯಕ್ಷ ಸೌಲಿ ನಿನಿಸ್ಟೊ ಮತ್ತು ಪ್ರಧಾನಿ ಸನ್ನಾ ಮರಿನ್ ಭಾನುವಾರ ಹೆಲ್ಸಿಂಕಿಯಲ್ಲಿ ಘೋಷಿಸಿದರು. ಈ ದೇಶಗಳ ಸೇರ್ಪಡೆಗೆ ನ್ಯಾಟೊ ಸಮ್ಮತಿಸಿದೆ.

ಮೇಲೆ ಕ್ಷಿಪಣಿ ದಾಳಿ(ಕೀವ್/ ಮಾಸ್ಕೊ ವರದಿ): ಉಕ್ರೇನ್ ಲುವಿವ್ ಪ್ರಾಂತ್ಯದ ಯವೊರಿವ್ ಜಿಲ್ಲೆಯಲ್ಲಿರುವ ಉಕ್ರೇನ್ ಸೇನೆಯ ಮೂಲ ಸೌಲಭ್ಯಗಳನ್ನು ಭಾನುವಾರ ನಸುಕಿನಲ್ಲಿ ರಷ್ಯಾದ ನಾಲ್ಕು ಕ್ಷಿಪಣಿಗಳು ನಾಶಪಡಿಸಿವೆ ಎಂದು ಗವರ್ನರ್ ಮಕ್ಸಿಮ್ ಕೊಜಿಟ್‌ಸ್ಕಿ ತಿಳಿಸಿರುವುದಾಗಿ ಉಕ್ರೇನ್ ಸರ್ಕಾರಿ ಸುದ್ದಿ ಸಂಸ್ಥೆ 'ದಿ ಕೀವ್ ಇಂಡಿಪೆಂಡೆಂಟ್' ವರದಿ ಮಾಡಿದೆ.

ಜೈವಿಕ ಅಸ್ತ್ರದ ಬೆದರಿಕೆ ಎದುರಿಸಲು ಸಿದ್ಧತೆ: 'ಅಣು ವಿಕಿರಣ, ರಾಸಾಯನಿಕ ಮತ್ತು ಜೈವಿಕ ಅಸ್ತ್ರಗಳ ದಾಳಿ ಬೆದರಿಕೆ ಎದುರಿಸಲು ಸದ್ಯದಲ್ಲೇ ಈ ಅಸ್ತ್ರಗಳ ನಿಗ್ರಹ ಘಟಕಗಳ ಸ್ಥಾಪನೆಗೆ ರಷ್ಯಾ ನೇತೃತ್ವದ ಭದ್ರತಾ ಬಣದ ರಾಷ್ಟ್ರಗಳು (ಸಿಎಸ್‌ಟಿಒ) ಯೋಜಿಸಿವೆ' ಎಂದು ಬೆಲರೂಸ್ ರಕ್ಷಣಾ ಸಚಿವ ವಿಕ್ಟರ್ ಖ್ರೆನಿನ್, ತಮ್ಮ ಸೇನೆಯ 'ವೊಯೆನ್ನಯಾ ಗೆಜೆಟಾ' ಪತ್ರಿಕೆಗೆ ಭಾನುವಾರ ನೀಡಿರುವ ಸಂದರ್ಶನದಲ್ಲಿ ತಿಳಿಸಿದ್ದಾರೆ.

'ಉಕ್ರೇನ್‌ನಲ್ಲಿ ಜೈವಿಕ ಪ್ರಯೋಗಾಲಯಗಳು ಇರುವುದಕ್ಕೆ ಸಾಕ್ಷ್ಯಗಳು ದೊರೆತಿವೆ' ಎಂದು ಅವರು ಹೇಳಿದ್ದಾರೆ.

ಫಾಸ್ಫರಸ್ ಬಾಂಬ್ ಬಳಕೆ: 'ನಿಷೇಧಿತ ಫಾಸ್ಫರಸ್ ಬಾಂಬ್‌ಗಳು, ಕ್ಲಸ್ಟರ್ ಮದ್ದುಗುಂಡು ಎಲ್ಲವನ್ನೂ ಬಳಸಲು ಸೇನೆ ಅವಕಾಶ ನೀಡಿದೆ' ಎಂದು ರಷ್ಯಾ ಸೈನಿಕ ತನ್ನ ಸ್ನೇಹಿತನಿಗೆ ಫೋನ್‌ನಲ್ಲಿ ಹೇಳಿರುವುದು ಫೋನ್ ಕದ್ದಾಲಿಕೆಯಲ್ಲಿ ದೃಢಪಟ್ಟಿದೆ' ಎಂದು ಉಕ್ರೇನ್ ಭದ್ರತಾ ಸಂಸ್ಥೆ ಹೇಳಿದೆ.

ಅಜೋವ್‌ಸ್ಟಾಲ್ ಉಕ್ಕಿನ ಸ್ಥಾವರದ ಮೇಲೆ ಫಾಸ್ಫರಸ್ ಬಾಂಬ್ ದಾಳಿಯ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಬಿಡುಗಡೆಯಾಗಿದೆ.

ಸಂಕ್ಷಿಪ್ತ ಸುದ್ದಿ

ಸಂತ ಸ್ಥಾನಕ್ಕೇರಿದ ದೇವಸಹಾಯಂ ಪಿಳ್ಳೈ

ವ್ಯಾಟಿಕನ್ ಸಿಟಿ (ಪಿಟಿಐ/ರಾಯಿಟರ್ಸ್): ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿದ್ದಕ್ಕಾಗಿ 18ನೇ ಶತಮಾನದಲ್ಲಿ ಕೊಲ್ಲಲ್ಪಟ್ಟಿದ್ದ ಭಾರತೀಯ, ದೇವ ಸಹಾಯಂ ಪಿಳ್ಳೈ ಅವರನ್ನು ಸಂತರೆಂದು ರೋಮನ್ ಕೆಥೋಲಿಕ್ ಚರ್ಚ್‌ನಲ್ಲಿ ಪೋಪ್ ಫ್ರಾನ್ಸಿಸ್ ಘೋಷಿಸಿದರು.

ಈ ಗೌರವಕ್ಕೆ ಪಾತ್ರರಾದ ಮೊದಲ ಜನಸಾಮಾನ್ಯ, ಪ್ರಥಮ ಭಾರತೀಯ ಇವರಾಗಿದ್ದಾರೆ.

ವೆಸಕ್ ಆಚರಣೆಗೆ ಕರ್ಫ್ಯೂ ತೆರವು

ಕೊಲಂಬೊ, ಶ್ರೀಲಂಕಾ (ರಾಯಿಟರ್ಸ್/ಪಿಟಿಐ): ಪ್ರತಿಭಟನೆಯನ್ನು ಹತ್ತಿಕ್ಕಲು ದೇಶವ್ಯಾಪಿ ವಿಧಿಸಲಾಗಿದ್ದ ಕರ್ಫ್ಯೂವನ್ನು, ಬೌದ್ಧರ ಹಬ್ಬ ವೆಸಕ್ ಆಚರಿಸಲು ಅನುವು ಮಾಡಿಕೊಡಲು ಪ್ರಧಾನಿ ರಾನಿಲ್ ವಿಕ್ರಮಸಿಂಘೆ ಅವರ ನೇತೃತ್ವದ ಸರ್ಕಾರ ತೆರವುಗೊಳಿಸಿದೆ.

ಮಹೀಂದ್ರಾ ರಾಜಪಕ್ಸ ರಾಜೀನಾಮೆಗೆ ಆಗ್ರಹಿಸಿ ಪ್ರತಿಭಟನೆ ತೀವ್ರಗೊಂಡಿದ್ದ ಹಿನ್ನೆಲೆಯಲ್ಲಿ ಮೇ 9ರಂದು ಕರ್ಫ್ಯೂ ಹೇರಲಾಗಿತ್ತು. ಭಾನುವಾರ ದೇಶದಾದ್ಯಂತ ಬೌದ್ಧರ ಹಬ್ಬ ವೆಸಕ್ ಆಚರಿಸಲಾಯಿತು.

ಸಂಪುಟ ರಚನೆ: ಈ ಮಧ್ಯೆ ನೂತನ ಪ್ರಧಾನಿ ರಾನಿಲ್ ಅವರು, ಸಂಪುಟಕ್ಕೆ ನಾಲ್ವರನ್ನು ಸೇರ್ಪಡೆ ಮಾಡಿದ್ದಾರೆ. ಈ ಎಲ್ಲರೂ ಶ್ರೀಲಂಕಾ ಪೊಡುಜನ ಪೆರುಮುನ ಪಕ್ಷದ ಸದಸ್ಯರಾಗಿದ್ದಾರೆ.

ಪಾಕ್: ಗುಂಡಿಕ್ಕಿ ಇಬ್ಬರು ಸಿಖ್ಖರ ಹತ್ಯೆ

ಪೆಶಾವರ (ಪಿಟಿಐ): ಪಾಕಿಸ್ತಾನದ ವಾಯುವ್ಯ ಭಾಗದ ಖೈಬರ್ ಪಖ್ತುಂಖ್ವಾದಲ್ಲಿ ಭಾನುವಾರ ಇಬ್ಬರು ಸಿಖ್ ವ್ಯಾಪಾರಿಗಳನ್ನು ಗುಂಡಿಕ್ಕಿ ಹತ್ಯೆ ಮಾಡಲಾಗಿದೆ.

'ಸಲ್‌ಜೀತ್ ಸಿಂಗ್ (42), ರಂಜೀತ್ ಸಿಂಗ್ (38) ಹತ್ಯೆಯಾದವರು. ಹತ್ಯೆ ಹೊಣೆಯನ್ನು ಈವರೆಗೆ ಯಾವುದೇ ಸಂಘಟನೆ ಹೊತ್ತುಕೊಂಡಿಲ್ಲ' ಎಂದು ಪೊಲೀಸರು ತಿಳಿಸಿದ್ದಾರೆ.

ಗುಂಡಿನ ದಾಳಿ: 10 ಸಾವು

ನ್ಯೂಯಾರ್ಕ್ (ರಾಯಿಟರ್ಸ್): ಜನಾಂಗೀಯ ದ್ವೇಷದ ಹಿನ್ನೆಲೆಯಲ್ಲಿ ಇಲ್ಲಿನ ಬಫಲೊ ನಗರದ ಸೂಪರ್ ಮಾರ್ಕೆಟ್‌ಗೆ ಅಂಗಡಿಗೆ ನುಗ್ಗಿದ ವ್ಯಕ್ತಿ ಗುಂಡಿನ ದಾಳಿ ನಡೆಸಿದ್ದು, 10 ಮಂದಿ ಮೃತಪಟ್ಟಿದ್ದಾರೆ. ಸಂತ್ರಸ್ತ 13 ಜನರ ಪೈಕಿ 11 ಜನರು ಕಪ್ಪು ವರ್ಣೀಯರು, ಇಬ್ಬರು ಬಿಳಿಯರು.

ಚೆನ್ನೈ ಸೂಪರ್ ಕಿಂಗ್ಸ್ ತಂಡಕ್ಕೆ ಸೋಲು; ಋತುರಾಜ್ ಗಾಯಕವಾಡ್ ಅರ್ಧಶತಕ ವ್ಯರ್ಥ

ಟೈಟನ್ಸ್ ಪ್ರಾಬಲ್ಯ 'ವೃದ್ಧಿ'ಸಿದ ಸಹಾ

ಮುಂಬೈ (ಪಿಟಿಐ): ವೃದ್ಧಿಮಾನ್ ಸಹಾ ಅಮೋಘ ಅರ್ಧಶತಕದ ಬಲದಿಂದ ಗುಜರಾತ್ ಟೈಟನ್ಸ್ ತಂಡವು ಭಾನುವಾರ ಚೆನ್ನೈಸೂಪರ್ ಕಿಂಗ್ಸ್ ಎದುರು ಜಯಭೇರಿ ಬಾರಿಸಿತು.

ಈಗಾಗಲೇ ಪ್ಲೇ ಆಫ್ ಪ್ರವೇಶಿಸಿರುವ ಹಾರ್ದಿಕ್ ಪಾಂಡ್ಯ ಬಳಗವು ವಾಂಖೆಡೆ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ 7 ವಿಕೆಟ್‌ಗಳಿಂದ ಹಾಲಿ ಚಾಂಪಿಯನ್ ಚೆನ್ನೈ ತಂಡವನ್ನು ಮಣಿಸಿತು.

ಟಾಸ್ ಗೆದ್ದ ಮಹೇಂದ್ರಸಿಂಗ್ ಧೋನಿ ಬಳಗವು ಋತುರಾಜ್ ಗಾಯಕವಾಡ್ (53; 49ಎ) ಅರ್ಧಶತಕದ ನೆರವಿನಿಂದ 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 133 ರನ್ ಗಳಿಸಿತು.

ಮೊಯಿನ್ ಅಲಿ (21) ಮತ್ತು ಎನ್. ಜಗದೀಶನ್ (ಔಟಾಗದೆ 39; 33ಎ) ಅವರು ಎರಡಂಕಿ ಗಳಿಸಿದರು.

ಟೈಟನ್ಸ್‌ನ ಅನುಭವಿ ಬೌಲರ್ ಮೊಹಮ್ಮದ್ ಶಮಿ ಮತ್ತು ಸ್ಪಿನ್ನರ್ ರಶೀದ್ ಖಾನ್, ಅಲ್ಜರಿ ಜೋಸೆಫ್ ಬಿಗಿಹಿಡಿತ ಸಾಧಿಸಿದರು.

ಸಾಧಾರಣ ಗುರಿ ಬೆನ್ನಟ್ಟಿದ ಟೈಟನ್ಸ್ ತಂಡವು ಸಹಾ (ಅಜೇಯ 67; 57ಎ, 4X8, 6X1) ಬ್ಯಾಟಿಂಗ್‌ನಿಂದಾಗಿ 19.1 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 137 ರನ್ ಗಳಿಸಿತು.

ವೃದ್ಧಿಮಾನ್ ಸಹಾ ಬ್ಯಾಟಿಂಗ್ ಸೊಬಗು –ಪಿಟಿಐ ಚಿತ್ರ

ಆರಂಭಿಕ ಜೋಡಿ ಸಹಾ ಮತ್ತು ಶುಭಮನ್ ಗಿಲ್ ಮೊದಲ ವಿಕೆಟ್ ಜೊತೆಯಾಟದಲ್ಲಿ 59 ರನ್ ಸೇರಿಸಿದರು.

ಟೂರ್ನಿಯಲ್ಲಿ ಚೆನ್ನೈಗೆ ಇದು 9ನೇ ಸೋಲು. ಧೋನಿ ಬಳಗವು ಈಗಾಗಲೇ ಪ್ಲೇ ಆಫ್ ಹಾದಿಯಿಂದ ಹೊರಬಿದ್ದಿದೆ. ಅದೇ ಟೈಟನ್ಸ್ ತಂಡಕ್ಕೆ 10ನೇ ಜಯವಾಗಿದೆ. ಉಭಯ ತಂಡಗಳೂ ತಲಾ 13 ಪಂದ್ಯಗಳನ್ನು ಆಡಿವೆ. ಇನ್ನೊಂದು ಪಂದ್ಯ ಬಾಕಿ ಇದೆ.

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಜೋಸ್ ಬಟ್ಲರ್	ರಾಜಸ್ಥಾನ	627
ರಾಹುಲ್	ಲಖನೌ	469
ವಾರ್ನರ್	ಡೆಲ್ಲಿ	427

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಯಜುವೇಂದ್ರ	ರಾಜಸ್ಥಾನ	24
ಹಸರಂಗ	ಬೆಂಗಳೂರು	23
ಕಗಿಸೊ	ಪಂಜಾಬ್	21

ಸ್ಕೋರ್ ಕಾರ್ಡ್

ಚೆನ್ನೈ ಸೂಪರ್ ಕಿಂಗ್ಸ್ 5ಕ್ಕೆ 133 (20 ಓವರ್)

ಋತುರಾಜ್ ಸಿ ವೇಡ್ ಬಿ ರಶೀದ್ 53 (49ಎ, 4X4, 6X1), ಕಾನ್ವೆ ಸಿ ಸಹಾ ಬಿ ಶಮಿ 5 (9ಎ), ಮೋಯಿನ್ ಸಿ ರಶೀದ್ ಬಿ ಸಾಯಿ ಕಿಶೋರ್ 21 (17ಎ, 6X2), ಜಗದೀಶನ್ ಔಟಾಗದೆ 39 (33ಎ, 4X3, 6X1), ಶಿವಂ ಸಿ ಸಹಾ ಬಿ ಜೋಸೆಫ್ 0 (2ಎ), ಧೋನಿ ಸಿ ಯಶ್ ಬಿ ಶಮಿ 7 (10ಎ), ಸ್ಯಾಂಟನರ್ ಔಟಾಗದೆ 1 (1ಎ)

ಇತರೆ (ಲೆಗ್‌ಬೈ 2, ನೋಬಾಲ್ 1, ವೈಡ್ 4) 7

ವಿಕೆಟ್ ಪತನ: 1-8 (ಡೆವೊನ್ ಕಾನ್ವೆ, 2.1), 2-65 (ಮೋಯಿನ್ ಅಲಿ, 8.4), 3-113 (ಋತುರಾಜ್ ಗಾಯಕವಾಡ್, 15.6), 4-114 (ಶಿವಂ ದುಬೆ, 16.3), 5-130 (ಮಹೇಂದ್ರ ಸಿಂಗ್ ಧೋನಿ, 19.3)

ಬೌಲಿಂಗ್: ಮೊಹಮ್ಮದ್ ಶಮಿ 4–0–19–2, ಹಾರ್ದಿಕ್ ಪಾಂಡ್ಯ 2–0–8–0, ಯಶ್ ದಯಾಳ್ 3–0–27–0, ರಶೀದ್ ಖಾನ್ 4–0–31–1, ಅಲ್ಜರಿ ಜೋಸೆಫ್ 3–0–15–1, ಆರ್. ಸಾಯಿ ಕಿಶೋರ್ 4–0–31–1

ಗುಜರಾತ್ ಟೈಟನ್ಸ್ 3ಕ್ಕೆ 137 (19.1 ಓವರ್)

ಸಹಾ ಔಟಾಗದೆ 67 (57ಎ, 4X8, 6X1), ಶುಭಮನ್ ಎಲ್‌ಬಿಡಬ್ಲ್ಯು ಬಿ ಮತೀಶ 18 (17ಎ, 4X3), ವೇಡ್ ಸಿ ಶಿವಂ ಬಿ ಮೋಯಿನ್ 20 (15ಎ, 4X2), ಹಾರ್ದಿಕ್ ಸಿ ಶಿವಂ ಬಿ ಮತೀಶ 7 (6ಎ, 4X1), ಮಿಲ್ಲರ್ ಔಟಾಗದೆ 15 (20ಎ, 4X1)

ಇತರೆ (ಬೈ 4, ಲೆಗ್‌ಬೈ 2, ವೈಡ್ 4) 10

ವಿಕೆಟ್ ಪತನ: 1-59 (ಶುಭಮನ್ ಗಿಲ್, 7.1), 2-90 (ಮ್ಯಾಥ್ಯು ವೇಡ್, 11.2), 3-100 (ಹಾರ್ದಿಕ್ ಪಾಂಡ್ಯ, 13.1)

ಬೌಲಿಂಗ್: ಮುಕೇಶ್ ಚೌಧರಿ 3–0–28–0, ಸಿಮರ್ಜೀತ್ ಸಿಂಗ್ 3–0–26–0, ಮಿಚೆಲ್ ಸ್ಯಾಂಟನರ್ 4–0–24–0, ಪ್ರಶಾಂತ್ ಸೋಳಂಕಿ 4–0–18–0, ಮತೀಶ ಪಥಿರಣ 3.1–0–24–2, ಮೋಯಿನ್ ಅಲಿ 2–0–11–1

ಫಲಿತಾಂಶ: ಗುಜರಾತ್ ಟೈಟನ್ಸ್‌ಗೆ ಏಳು ವಿಕೆಟ್‌ಗಳ ಜಯ

ಇಂದಿನ ಪಂದ್ಯ
ಪಂಜಾಬ್ ಕಿಂಗ್ಸ್–ಡೆಲ್ಲಿ ಕ್ಯಾಪಿಟಲ್ಸ್
ಸ್ಥಳ: ಡಿ.ವೈ. ಪಾಟೀಲ್ ಕ್ರೀಡಾಂಗಣ, ಮುಂಬೈ
ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್ — ರಾತ್ರಿ 7.30

ಡೆಲ್ಲಿ ತಂಡದ ಪೃಥ್ವಿ ಶಾ ಗುಣಮುಖ

ಮುಂಬೈ (ಪಿಟಿಐ): ಟೈಫಾಯ್ಡ್‌ಗೆ ಚಿಕಿತ್ಸೆ ಪಡೆಯುತ್ತಿದ್ದ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಆರಂಭಿಕ ಬ್ಯಾಟರ್ ಪೃಥ್ವಿ ಶಾ ಗುಣಮುಖರಾಗಿದ್ದು, ಭಾನುವಾರ ಆಸ್ಪತ್ರೆಯಿಂದ ಮರಳಿದ್ದಾರೆ. ಫ್ರಾಂಚೈಸ್ ಭಾನುವಾರ ಈ ವಿಷಯ ತಿಳಿಸಿದೆ.

ಪೃಥ್ವಿ ಶಾ

ತೀವ್ರ ಜ್ವರದ ಕಾರಣ, ಈ ತಿಂಗಳ ಆರಂಭದಲ್ಲಿ 22 ವರ್ಷದ ಪೃಥ್ವಿ ಆಸ್ಪತ್ರೆಗೆ ದಾಖಲಾಗಿದ್ದರು. ಡೆಲ್ಲಿ ಕ್ಯಾಪಿಟಲ್ಸ್‌ನ ವೈದ್ಯಕೀಯ ತಂಡ ಪೃಥ್ವಿ ಆರೋಗ್ಯದ ಮೇಲೆ ನಿಗಾ ವಹಿಸಿದೆ.

ಲಖನೌಗೆ ನಿರಾಸೆ; ಪ್ಲೇ ಆಫ್‌ನತ್ತ ರಾಜಸ್ಥಾನ ರಾಯಲ್ಸ್

ಮುಂಬೈ (ಪಿಟಿಐ): ಆಲ್‌ರೌಂಡ್ ಆಟ ಪ್ರದರ್ಶಿಸಿದ ರಾಜಸ್ಥಾನ ರಾಯಲ್ಸ್ ತಂಡ ಲಖನೌ ಸೂಪರ್ ಜೈಂಟ್ಸ್ ಎದುರಿನ ಪಂದ್ಯದಲ್ಲಿ ಭರ್ಜರಿ ಜಯ ಗಳಿಸಿ ಪ್ಲೇ ಆಫ್ ಹಂತದತ್ತ ಹೆಜ್ಜೆ ಹಾಕಿತು.

ಬ್ರೆಬೋರ್ನ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ರಾಜಸ್ಥಾನ 24 ರನ್‌ಗಳಿಂದ ಜಯ ಗಳಿಸಿತು.

179 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಲಖನೌ ಸೂಪರ್ ಜೈಂಟ್ಸ್ 20 ಓವರ್‌ಗಳಲ್ಲಿ 8ಕ್ಕೆ 154 ರನ್ ಗಳಿಸಿತು. ನಾಲ್ಕನೇ ಕ್ರಮಾಂಕದ ದೀಪಕ್ ಹೂಡಾ ಅವರನ್ನು ಹೊರತುಪಡಿಸಿದರೆ ಉಳಿದ ಯಾರಿಗೂ ನಿರೀಕ್ಷೆಗೆ ತಕ್ಕಂತೆ ಆಡಲು ಆಗಲಿಲ್ಲ.

ಯಶಸ್ವಿ, ದೇವದತ್ತ ಉತ್ತಮ ಬ್ಯಾಟಿಂಗ್: ಟಾಸ್ ಗೆದ್ದ ರಾಜಸ್ಥಾನ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಆರಂಭಿಕ ಆಟಗಾರ ಯಶಸ್ವಿ ಜೈಸ್ವಾಲ್ (41; 29ಎ, 4X6, 6X1) ಮತ್ತು ನಾಲ್ಕನೇ ಕ್ರಮಾಂಕದ ದೇವದತ್ತ ಪಡಿಕ್ಕಲ್ (32; 24ಎ, 4X5, 6X2) ಅವರ ಬಿರುಸಿನ ಆಟದ ನೆರವಿನಿಂದ 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 178 ರನ್ ಗಳಿಸಿತು.

ದೇವದತ್ತ ಪಡಿಕ್ಕಲ್ ಬ್ಯಾಟಿಂಗ್ ವೈಖರಿ –ಪಿಟಿಐ ಚಿತ್ರ

ಇನಿಂಗ್ಸ್‌ನ ಮೂರನೇ ಓವರ್‌ನಲ್ಲಿ ಆವೇಶ್ ಖಾನ್ ಎಸೆತದಲ್ಲಿ ಜೋಸ್ ಬಟ್ಲರ್ ಕ್ಲೀನ್‌ಬೌಲ್ಡ್ ಆದರು. ನಂತರ ಯಶಸ್ವಿ ಮತ್ತು ನಾಯಕ ಸಂಜು ಸ್ಯಾಮ್ಸನ್ (32; 24ಎ) ಎರಡನೇ ವಿಕೆಟ್‌ಗೆ 64 ರನ್‌ಗಳನ್ನು ಸೇರಿಸಿದರು.

ಒಂಬತ್ತನೇ ಓವರ್‌ನಲ್ಲಿ ಸಂಜು ಔಟಾಗಿ ಜೊತೆಯಾಟ ಮುರಿಯಿತು. ಎರಡು ಓವರ್‌ಗಳ ನಂತರ ಜೈಸ್ವಾಲ್ ಕೂಡ ಔಟಾದರು. ಪಡಿಕ್ಕಲ್ ಮತ್ತು ರಿಯಾನ್ ಪರಾಗ್ (19 ರನ್) ನಾಲ್ಕನೇ ವಿಕೆಟ್‌ಗೆ 45 ರನ್‌ಗಳನ್ನು ಸೇರಿಸಿದರು. ಅರ್ಧಶತಕದತ್ತ ಹೆಜ್ಜೆಯಿಟ್ಟಿದ್ದ ಪಡಿಕ್ಕಲ್ ಅವರಿಗೆ ಸ್ಪಿನ್ನರ್ ರವಿ ಬಿಷ್ಣೋಯಿ ತಡೆಯೊಡ್ಡಿದರು. ಕೊನೆಯ ಆರು ಓವರ್‌ಗಳಲ್ಲಿ ತಂಡದ ಮೊತ್ತಕ್ಕೆ 56 ರನ್‌ಗಳು ಸೇರಲು ರಿಯಾನ್, ಅಶ್ವಿನ್, ನಿಶಾಮ್ ಮತ್ತು ಟ್ರೆಂಟ್ ಬೌಲ್ಟ್ ಅವರ ಅಲ್ಪಕಾಣಿಕೆಗಳು ನೆರವಾದವು.

ಸಂಕ್ಷಿಪ್ತ ಸ್ಕೋರು: ರಾಜಸ್ಥಾನ ರಾಯಲ್ಸ್: 20 ಓವರ್‌ಗಳಲ್ಲಿ 6ಕ್ಕೆ178 (ಯಶಸ್ವಿ ಜೈಸ್ವಾಲ್ 41, ಸಂಜು ಸ್ಯಾಮ್ಸನ್ 32, ದೇವದತ್ತ ಪಡಿಕ್ಕಲ್ 39; ರವಿ ಬಿಷ್ಣೋಯಿ 31ಕ್ಕೆ2, ಆವೇಶ್ ಖಾನ್ 20ಕ್ಕೆ1, ಮೈಕೆಲ್ ಹೋಲ್ಡರ್ 12ಕ್ಕೆ1, ಆಯುಷ್ ಬದೋನಿ 5ಕ್ಕೆ1); ಲಖನೌ ಸೂಪರ್ ಜೈಂಟ್ಸ್: 20 ಓವರ್‌ಗಳಲ್ಲಿ 8ಕ್ಕೆ 154 (ದೀಪಕ್ ಹೂಡಾ 59, ಕೃಣಾಲ್ ಪಾಂಡ್ಯ 25, ಮಾರ್ಕಸ್ ಸ್ಟೋಯಿನಿಸ್ 27; ಟ್ರೆಂಟ್ ಬೌಲ್ಟ್ 18ಕ್ಕೆ2, ಪ್ರಸಿದ್ಧ ಕೃಷ್ಣ 32ಕ್ಕೆ2, ಯಜುವೇಂದ್ರ ಚಾಹಲ್ 42ಕ್ಕೆ1, ರವಿಚಂದ್ರನ್ ಅಶ್ವಿನ್ 24ಕ್ಕೆ1, ಒಬೆದ್ ಮೆಕಾಯ್ 32ಕ್ಕೆ2). ಫಲಿತಾಂಶ: ರಾಜಸ್ಥಾನ ರಾಯಲ್ಸ್‌ಗೆ 24 ರನ್‌ಗಳ ಜಯ.

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ	ರನ್‌ರೇಟ್
ಗುಜರಾತ್	13	10	3	0	0	20	0.391
ರಾಜಸ್ಥಾನ	13	8	5	0	0	16	0.304
ಲಖನೌ	13	8	5	0	0	16	0.262
ಬೆಂಗಳೂರು	13	7	6	0	0	14	-0.323
ಡೆಲ್ಲಿ	12	6	6	0	0	12	0.210
ಕೋಲ್ಕತ್ತ	13	6	7	0	0	12	0.160
ಪಂಜಾಬ್	12	6	6	0	0	12	0.023
ಹೈದರಾಬಾದ್	12	5	7	0	0	10	-0.270
ಚೆನ್ನೈ	13	4	9	0	0	8	-0.206
ಮುಂಬೈ	12	3	9	0	0	6	-0.613

*ಭಾನುವಾರದ ಪಂದ್ಯಗಳ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಸೈಡ್ ಸ್ಟ್ಯಾಂಡ್ & ಲೋ ಫ್ಯುಯೆಲ್ ಇಂಡಿಕೇಟರ್ | ಅತ್ಯಾಧುನಿಕ i3s* ಟೆಕ್ನಾಲಜಿ | ಟೆಲಿಸ್ಕೋಪಿಕ್ ಫ್ರಂಟ್ ಸಸ್ಪೆನ್ಷನ್ | ಸಿಗ್ನೇಚರ್ LED ಗೈಡ್ ಲ್ಯಾಂಪ್‌ಗಳು | ಸುಂದರವಾದ ಮೆಟಲ್ ಬಾಡಿ | ಸ್ಟೈಲಿಶ್ ಟೇಲ್ ಲ್ಯಾಂಪ್

TRUST OF HERO

Hero 100 MILLION | Hero WORLD'S NO.1 20 YEARS IN A ROW MOTORCYCLE & SCOOTER COMPANY | Best Resale Value Powered by Wheels of Trust^ | INDIA'S FIRST 5 YEAR WARRANTY* *Conditions apply. | POWERED BY XSENS WITH PROGRAMMED FI Smart Sensor Technology

HeroMotoCorp.com | TheHeroMotoCorp | HeroMotoCorpLimited | HeroMotoCorp | HeroMotoCorpIndia

Regd. Office: Hero MotoCorp Ltd., The Grand Plaza, Plot No. 2, Nelson Mandela Road, Vasant Kunj - Phase - II, New Delhi - 110070, India. CIN: L35911DL1984PLC017354. It is our endeavour to improve our product. This could lead to changes in product specifications without notice. Accessories and features shown may not be a part of the standard fitment. Always wear a helmet while riding a two-wheeler. *i3s Technology - Stops when scooter is idle. Restarts with press of brake lever and slight throttle (Refer to i3s related owner manual pages for more information). **As per the cumulative global production volume till 21st January 2021. ***Largest two-wheeler selling company in the world for any particular country for the year 2020. T&C apply. ^Based on offers from empanelled dealers on Wheels of Trust platform. For further information, contact nearest Hero MotoCorp authorized outlet(s) or call Toll Free No. 1800-266-0018 or visit our website www.heromotocorp.com

70116 70116 Explore the World of Hero Call 8367796950 or Scan QR CODE

Authorized Dealers: Bengaluru: Magadi Road: Poorna Hero, Ph: 9289923212, Marathalli: Vaayuratha Hero, Ph: 9289524162, Banashankari: Sai Hero, Ph: 9513353864, Banaswadi: Bhagath Hero, Ph: 9289922738, Byatarayanapura: Bimal Hero, Ph: 9289922863, Hosur Road: RT Krishna Hero, Ph: 9289923177, Lalbagh Road: Prakash Hero, Ph: 9289922117, Peenya: Sai Hero, Ph: 9289922476, Rajaji Nagar: Max Hero, Ph: 9289923023, Hoskote: Bhagath Hero, Ph: 8884600051, K R Puram: Bhagath Hero, Ph: 9513353807, Tumkur: Sai Hero, Ph: 9289922830, Tiptur: Sai Hero, Ph. 9164840456, Kunigal: Sai Hero, Ph: 7022752858, Shimoga: Sree Karthik Hero, Ph: 9289922509, Mythri Hero, Ph: 9289922635, Chickmagalur: Nayana Hero, Ph: 9289922120, Sagar: Prajwal Hero, Ph: 9289922399, Mangalore: West Coast Hero, Ph: 9289922606, Tribhuvan Hero, Ph: 9289923203, Chitradurga: Mahesh Hero, Ph: 9289922126, Davanagere: Rutvii Hero, Ph: 9289923174, Prakasha Hero, Ph: 9289922501, Mysore: Dyuthi Mysore Hero, (B.M.Hospital), Ph: 9289922475, Shah Mysore Hero (Nazarbad City), Ph: 9289922518, Rasik Hero (Laxmipuram), Ph: 9513353882, Mandya: Dayanand Hero, Ph: 9289922123, Chamarajnagar: Yepiyes Hero, Ph: 9513353868, Hassan: Venkateshwara Hero, Ph: 9289922121, Belgaum: Nagshanti Hero, Ph: 9513353821, Nagshanti - 2 Unit, Ph: 9289923173, Chikodi: Shree Renuka Motors, Ph: 9289922884, Gokak: Chinmay Hero, Ph: 9289922673, Gulbarga: Sri Venkatesh Hero, Ph: 9289922118, Bidar: Kailash Hero, Ph: 9289922124, Yadgir: Sri Venkatesh Hero, Ph: 9289922875 Bellary: Annapoorna Hero, Ph: 9289922125, Koppal: Vijaya Hero, Ph: 9289922985, Sindhanur: Anand Hero, Ph: 9289922943, Raichur: Sri Venkkateshwara Hero, Ph: 9289922944, Hospet: Annapooorna Automotives, Ph: 9289923165, Hubli: Chadha Hero, Ph: 9289922119, Gadag: Chadha Hero, Ph: 8050041033, Bellad Hero, Ph: 9289922565, Dharwad: Bellad Hero, Ph: 9686204480, Haveri: Bahaddur Desai Hero, Ph: 9289922977, Sirsi: Shakti Hero, Ph: 9289922391, Bijapur: Vijay Hero, Ph: 9289922122, Sindagi: Jogur Motors, Ph: 9289922964, Mudhol: Kumar Hero, Ph: 9289922633, Bagalkot: Chinmay Hero, Ph: 9289923049.